ಗೌರಿ ಲಂಕೇಶರ

ಲಂಕೇಶ್

ಜೂನ್ 14, 2006 ಬೆಲೆ ರೂ. 10/- ◆ ರಂಜನೆ ◆ ಬೋಧನೆ ◆ ಪ್ರಚೋದನೆ




ಕುಮಾರಸ್ವಾಮಿ ಚಾನೆಲ್‌ಗಾಗಿ

ಹೊಡಿಮಗ ಕೇಬಲ್ ವೈರ್ ಕಡಿಮಗ!



ಸಾರಿಗೆ ಮಂತ್ರಿಯ

ರೋಡ್ ರಾಬರಿ!








BJP ಚಿತ್ತಬಕ್ಕೆ!

ಾಹುಲ್ ಗಾಂಧಿಗೇ ಸೆಡ್ಡು ಹೊಡೆಯಲು ಹೊರಟಿದ್ದ!

ಹಣದ ಪ್ರಭೆ ಮತ್ತು ಪ್ರೊಫೆಷನಲ್ ಪ್ರತಿಭೆ:



ಪ್ರತಿ ವರ್ಷದಂತೆ ಈ ವರ್ಷವೂ ಇಂಜಿನಿಯರಿಂಗ್ ಮತ್ತು ಮೆಡಿಕಲ್ ಕೋರ್ಸ್‌ಗಳಿಗೆ ಸರ್ಕಾರಿ ಕಾಲೇಜುಗಳಿಗಾಗಿ ಸಿ.ಇ.ಟಿ ಪರೀಕ್ಷೆ. ಅದರ ಜೊತೆ ಜೊತೆಗೆ ಸಾಹ್ಕಾರಿ ಕಾಲೇಜುಗಳಿಗೆ ಕಾಮೆಡ್ ಪರೀಕ್ಷೆಗಳೂ ನಡೆದಿವೆ. ಸರ್ಕಾರಿ ವೃತ್ತಿಪರ ಕಾಲೇಜುಗಳಲ್ಲಿ ಮೀಸಲಾತಿ ನೀಡಿದರೆ ಪ್ರತಿಭೆ ಹಾಳಾಯಿತೆಂದು ಬಾಯಿ ಬಡಿದುಕೊಂಡ ಜನರು ಈ ಕಾಮೆಡ್ ಪರೀಕ್ಷೆಗಳನ್ನು ತೆಗೆದುಕೊಳ್ಳುತ್ತಿರುವ ಥೈಲಿ ಪ್ರತಿಭೆಗಳ ಬಗ್ಗೆ ಚಕಾರ ಎತ್ತುತ್ತಿಲ್ಲ. ಸಿ.ಇ.ಟಿ ಎಂಬ ಸರ್ಕಾರಿ ಸೀಟುಗಳ ಸಂಖ್ಯೆ ಇಂಜಿನಿಯರಿಂಗ್‌ನಲ್ಲಿ 4500, ಮೆಡಿಕಲ್‌ನಲ್ಲಿ 450 ಮಾತ್ರ. ಅದರಲ್ಲಿ 2000ದಷ್ಟು ಸೀಟುಗಳು ಮಾತ್ರ ವಿವಿಧ ಮೀಸಲಾತಿ ಸೀಟುಗಳು. ಆದರೆ ಅದೇ ಈ ಸಾಹ್ಕಾರಿ ಖಾಸಗೀ ಕಾಲೇಜುಗಳಲ್ಲಿ 31,469 ಇಂಜಿನಿಯರಿಂಗ್ ಸೀಟುಗಳು ಮತ್ತು 1,895 ಸೀಟುಗಳು. ಅಂದರೆ 33,000 ಸೀಟುಗಳು. ಇದರಲ್ಲಿ ನೂರಕ್ಕೆ ನೂರರಷ್ಟು ಶ್ರೀಮಂತರಿಗೆ ದಕ್ಕುತ್ತವೆ. ಅದರಲ್ಲಿ ಶೇ.50ರಷ್ಟು ಸೀಟುಗಳು ಶ್ರೀಮಂತರಲ್ಲಿ ವಿವಿಧ ಮೀಸಲಾತಿ ಪ್ರತಿಭೆಗಳಿಗೆ ಸಿಕ್ಕರೆ ಇನ್ನು 17,000ದಷ್ಟು ಸೀಟುಗಳಿಗೆ ಹಣವಿದ್ದರೆ ಸಾಕು. ಪ್ರತಿಭೆಯ ಸೋಂಕಿರುವ ಅಗತ್ಯವೂ ಇಲ್ಲ!

ಈ ಸಾಹ್ಕಾರಿ ಪರೀಕ್ಷೆಯನ್ನು ಈ ಬಾರಿ 69,000 ವಿದ್ಯಾರ್ಥಿಗಳು ತೆಗೆದುಕೊಂಡಿದ್ದಾರೆ. ಅವರಲ್ಲಿ ಕನಿಷ್ಠ ಶೇ. 75ರಷ್ಟು ಜನ ಹೊರ ರಾಜ್ಯಗಳಿಂದ ಹಾರಿ ಬಂದವರು. ಇವರೆಲ್ಲ ಇಲ್ಲಿ ಎರಡು ದಿನಗಳ ಕಾಲ ಎಲ್ಲಿ ಉಳಿದುಕೊಂಡಿದ್ದರು?

ಇಂತಹವರ ಹಿತರಕ್ಷಣೆಯೇ ತನ್ನ ಪತ್ರಿಕೋದ್ಯಮದ ಧ್ಯೇಯ ಎಂದುಕೊಂಡಿರುವ ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಯೇ ಪ್ರಕಟಿಸಿದ್ದ ವಿಶೇಷ ಪುರವಣಿಯ ಪ್ರಕಾರ ಈ ಸಾಹ್ಕಾರಿ ವಿದ್ಯಾರ್ಥಿಗಳಿಂದ ಆ ದಿನಗಳಲ್ಲಿ ಬೆಂಗಳೂರಿನ ಎಲ್ಲಾ ಪಂಚತಾರಾ ಹೋಟೆಲುಗಳು, ಪ್ರಥಮ ದರ್ಜೆ ಹೋಟೆಲುಗಳು, ವಿಮಾನಗಳು, ಹವಾನಿಯಂತ್ರಿತ ಬಸ್ಸುಗಳು ತುಂಬಿತುಳುಕುತ್ತಿದ್ದವಂತೆ. ಇವರಲ್ಲಿ ಶೇ. 50ಕ್ಕಿಂತ ಹೆಚ್ಚು ಜನರಿಗೆ ಮೆರಿಟ್ಟಿಲ್ಲದಿದ್ದರೂ ಅದರಿಂದ ಹೆಚ್ಚು ಹೆಚ್ಚು ಹಣ ಪಡೆದು ತಮ್ಮ ಕಾಲೇಜುಗಳನ್ನು ತುಂಬಿಸಿಕೊಳ್ಳಲೆಂದೇ ಕರ್ನಾಟಕದಲ್ಲಿ ಇಷ್ಟೊಂದು ಇಂಜಿನಿಯರಿಂಗ್ ಮತ್ತು ಮೆಡಿಕಲ್ ಕಾಲೇಜುಗಳು ತೆರೆಯಲ್ಪಟ್ಟಿವೆ. ಸರ್ಕಾರಿ ಕಾಲೇಜುಗಳಲ್ಲಿ ಕೇವಲ 2,000ದಷ್ಟು ಸೀಟುಗಳು ಮೀಸಲಾತಿಯನುಸಾರ ಕಡಿಮೆ ಅಂಕ ಪಡೆದವರ ಪಾಲಾದರೆ ದೇಶದ ಭವಿಷ್ಯಕ್ಕೆ ಕುತ್ತು ಬಂತೆಂದು ಹುಯಿಲೆಬ್ಬಿಸುವ ಜನ ಈ ಮೇಲ್ಜಾತಿ ಪ್ರತಿಭೆಗಳು ಸಾಹ್ಕಾರಿ ಕಾಲೇಜುಗಳಲ್ಲಿ 17,000ಕ್ಕೂ ಹೆಚ್ಚು ಸೀಟುಗಳನ್ನು ಪಡೆದರೂ ಯಾರೂ ಗೊಣಗಾಡುವುದಿಲ್ಲ. ಈ ಹಣವಂತರಲ್ಲಿ ಮೀಸಲಾತಿ ಪಡೆವರಷ್ಟು ಪ್ರತಿಭೆ ಇಲ್ಲದಿದ್ದರೂ ಹಣದ ಪ್ರಭೆಯೊಂದರಿಂದಲೇ ಸೀಟು ದಕ್ಕಿಸಿಕೊಂಡು ದೇಶದ ಭವಿಷ್ಯಕ್ಕೆ ಗಂಡಾಂತರ ತಂದೊಡ್ಡುತಿದ್ದರೂ ಚಕಾರವೆತ್ತುತ್ತಿಲ್ಲ.

ಆದ್ದರಿಂದಲೇ ಮೇಲ್ಜಾತಿಗಳ ಪ್ರತಿಭೆ ದೇಶ ಪರ ಎಂಬ ತರ್ಕವೆಲ್ಲಾ ಕೇವಲ ಹುಸಿ ಮಾತ್ರವಲ್ಲ ; ಅಸಲಿನಲ್ಲಿ ನಿಜಕ್ಕೂ ದೇಶದ್ರೋಹಿಯಾದದ್ದು.

ಒಂದು ಪ್ರಶ್ನೆ:




ಉನ್ನತ ಶಿಕ್ಷಣದಲ್ಲಿ ಒ.ಬಿ.ಸಿ. ವರ್ಗಗಳಿಗೆ ಶೇ.27 ರಷ್ಟು ಮೀಸಲಾತಿ ಕೊಡಬಾರದೆಂದು ಮೇಲ್ವರ್ಗ ಮತ್ತು ಮೇಲ್ಜಾತಿಗಳಿಗೆ ಸೇರಿದ ಮೆಡಿಕಲ್ ವಿದ್ಯಾರ್ಥಿಗಳು ದೇಶಾದ್ಯಂತ ಹೋರಾಟ ನಡೆಸುತ್ತಿದ್ದಾರೆ. ಇದು ದಿನೇದಿನೇ ವಿಕೋಪಕ್ಕೆ ಹೋಗುವ ಸೂಚನೆಗಳನ್ನು ನೀಡುತ್ತಿದೆ. ಈ ಬಗೆಯ ದೇಶ ವ್ಯಾಪಿ ಸ್ವರೂಪದ ಹೋರಾಟಗಳು ನಮ್ಮ ದೇಶದಲ್ಲಿ ಒಂದು ಅಖಿಲ ಭಾರತ ಪಕ್ಷದ ಬೆಂಬಲವಿಲ್ಲದೆ ನಡೆಯಲು ಸಾಧ್ಯವೇ ಇಲ್ಲ. ಆದರೆ ಮೇಲ್ನೋಟಕ್ಕೆ ಯಾವ ರಾಜಕೀಯ ಪಕ್ಷಗಳು ಇದರ ಬೆಂಬಲಕ್ಕಿಲ್ಲ. ಕಳೆದ ಬಾರಿ ಮಂಡಲ್ ವಿರೋಧಿ ಹೋರಾಟ ನಡೆದಾಗ ಕಾಂಗ್ರೆಸ್, ಬಿ.ಜೆ.ಪಿ ಮತ್ತು ಸಿ.ಪಿ.ಎಂ ಪಕ್ಷಗಳು ಸಹಾ ಮಂಡಲ್ ವಿರೋಧಿ ಹೋರಾಟಕ್ಕೆ ತಮ್ಮ ಬೆಂಬಲ ವ್ಯಕ್ತ ಪಡಿಸಿದ್ದವು. ಆದರೆ ಈ ಬಾರಿ ಮೇಲ್ಜಾತಿ ಭಾರತೀಯ ಜನತೆಯ ಪಕ್ಷವಾಗಿರುವ ಬಿ.ಜೆ.ಪಿ ಸಹಾ ಈ ಮೀಸಲಾತಿ ಪರವಾದ ನಿಲುವು ತಾಳಿದೆ. ಆದರೂ ಮೆಡಿಕಲ್ ವಿದ್ಯಾರ್ಥಿಗಳ ಹೋರಾಟ ದಿನೇ ದಿನೇ ಹೆಚ್ಚಾಗುತ್ತಿದೆ. ಮಾತ್ರವಲ್ಲ, ಈ ಇಷ್ಯೂಗೆ ಸಂಬಂಧಪಡದ 'ಸಾರ್ವಜನಿಕರು' ಭಾಗವಹಿಸುತ್ತಿದ್ದಾರೆ. ಮತ್ತು 'ಆತ್ಮಾಹುತಿಗೆ ಪ್ರಯತ್ನಿಸುತ್ತಿದ್ದಾರೆ'. ಏನಿದರ ಗುಟ್ಟು?

ಚಾರ್ವಾಕ

- ಶಿವಸುಂದರ್-

ಒಂದು ಸತ್ಯ:



ಇದರ ಗುಟ್ಟನ್ನು ಸಾಕ್ಷಾತ್ ಅದ್ವಾನಿಯವರೇ ಬಹಿರಂಗಗೊಳಿಸಿದ್ದಾರೆ. ಒಂದೆಡೆ ಚುನಾವಣೆಗೆ ಮುನ್ನ ತಾವೂ ಮೀಸಲಾತಿಯ ಪರ ಎಂದು ಓಟು ತಂತ್ರ ನಡೆಸಿದ್ದ ಈ ಬಿ.ಜೆ.ಪಿಯ ರಾಷ್ಟ್ರ ನಾಯಕರು, ಚುನಾವಣೆ ಮುಗಿದ ಒಂದು ವಾರದಲ್ಲಿ ಸಾಮಾಜಿಕ ನ್ಯಾಯದಷ್ಟೆ ಪ್ರತಿಭೆ ಮತ್ತು ಶಿಕ್ಷಣದಲ್ಲಿ ಎಕ್ಸಲೆನ್ಸ್ ಅತಿ ಮುಖ್ಯ ಎಂದೂ, ಅದೇ ರೀತಿ ನಮ್ಮ ದೇಶ ಒಂದು ಜ್ಞಾನ ಸಮಾಜವಾಗಿ ಬೆಳೆಯುತ್ತಿರುವುದರಿಂದಲೇ ಆರ್ಥಿಕ ಪ್ರಗತಿ ಉಂಟಾಗುತ್ತಿದೆಯೆಂದೂ ವದರಿದ್ದಾರೆ.

ಅಂದರೆ ಹಾವೂ ಸಾಯಬಾರದು ಕೋಲೂ ಮುರಿಯಬಾರದು ಎಂಬ ನೀತಿ ಇವರದ್ದು. ಈ ಮೇಲ್ಜಾತಿ ಪಕ್ಷ ಯಾವತ್ತಿದ್ದರೂ ಹಾವಿನ ಪರವೇ. ಇದೇ ದಿನೇ ದಿನೇ ಸಾಮಾಜಿಕ ನ್ಯಾಯದ ವಿರುದ್ಧ ದೇಶಾದ್ಯಂತ ವ್ಯಾಪಿಸುತ್ತಿರುವ ಚಳವಳಿಯ ಗುಟ್ಟು.

ಪ್ರತಿಭೆಗಳ ಅಶ್ಲೀಲತೆ ಮತ್ತು "ಅಶ್ಲೀಲತೆ"ಯ ಹೊಟ್ಟೆಪಾಡು:



ಈ ದೇಶದ ಪ್ರತಿಭೆಗಳ ಹಿಪಾಕ್ರಸಿಯನ್ನು ನೋಡಿದ್ದಾಯಿತಲ್ಲ, ಇನ್ನು ಒಂದಷ್ಟು ಅವರ ಜೀವನ ಮೌಲ್ಯಗಳನ್ನು ನೋಡೋಣ. ಮೊದಲಿಗೆ ಇವರು ಆಯ್ಕೆ ಮಾಡಿಕೊಳ್ಳುವ ಹೋರಾಟ ವಿಧಾನಗಳನ್ನು ನೋಡಿ. ಈ ದೇಶದಲ್ಲಿ ಯಾವುದೇ ವರ್ಗ ತನಗಾದ ಅನ್ಯಾಯಗಳನ್ನು ಸಮಾಜದ ಗಮನಕ್ಕೆ ತರಲು ಪ್ರತಿಭಟನೆ, ಧರಣಿ, ಪ್ರದರ್ಶನಗಳನ್ನು ನಡೆಸುತ್ತವೆ. ಆದರೆ ಈ ಪ್ರತಿಭೆಗಳ ಹೋರಾಟ ಮಾರ್ಗಗಳನ್ನು ನೋಡಿ. ಅದರಲ್ಲಿ ತಮ್ಮ ನೋವನ್ನು ಹೇಳಿಕೊಳ್ಳುವುದಕ್ಕಿಂತ ಇತರರನ್ನು ಹೀಯಾಳಿಸುವುದೇ ಪ್ರಧಾನ. ಬೂಟು ಪಾಲಿಷು ಮಾಡುವುದು, ಕಸ ಗುಡಿಸುವುದು, ಬಾಳೆಹಣ್ಣು ಮಾರುವುದು, ಇತ್ಯಾದಿ. ಅಂದರೆ ಇತರರಿಗೆ ಮೀಸಲಾತಿ ಕೊಟ್ಟರೆ ತಾವು ಇಂತಹ ಹೀನಾಯ ಕೆಲಸಗಳಲ್ಲಿ ತೊಡಗಬೇಕಾಗುತ್ತದೆ ಎಂಬುದೇ ಇದರ ತಾತ್ಪರ್ಯ. ಅಂದರೆ ಇದೇ ದೇಶದ ಇತರ ವರ್ಗಗಳು ಮತ್ತು ಜಾತಿಗಳ ಜನ ಮಾಡುವ ಕೆಲಸಗಳ ಬಗ್ಗೆ ತಾತ್ಸಾರ ಮತ್ತು ಕೀಳುಗಳೆಯುವ ಮನೋಭಾವ. ಇದು ಅವರ ಜೀವನ ಮೌಲ್ಯ. ಅದು ಅವರ 'ಪ್ರತಿಭೆ'ಯ ಭಾಗ ಸಹಾ!

ಇದೀಗ ಈ ಮೀಸಲು ವಿರೋಧಿ ಹೋರಾಟದಲ್ಲಿ ತೊಡಗಿರುವ ಪೂನಾದ ಮೆಡಿಕಲ್ ವಿದ್ಯಾರ್ಥಿಗಳು ತಮ್ಮ ಹೋರಾಟಕ್ಕೆ ನಿಧಿ ಕ್ರೂಢೀಕರಿಸಲು ರಾಖಿ ಸಾವಂತ್ ಎಂಬ ನರ್ತಕಿಯ 'ಅಶ್ಲೀಲ' ನರ್ತನವನ್ನು ಏರ್ಪಡಿಸಿದ್ದಾರೆ. ತಮ್ಮ ಹೊಟ್ಟೆಪಾಡಿಗಾಗಿ ನರ್ತನ ಮಾಡುವವರನ್ನು ಈ ದೇಶದ ಸಂಸ್ಕೃತಿಗೆ ದಕ್ಕೆ ತರುತ್ತಾರೆಂದು ಹೀಯಾಳಿಸುವ ಈ ಜನ ತಮ್ಮ ಆಸಕ್ತಿಗಳನ್ನು ಈಡೇರಿಸಿಕೊಳ್ಳಲು ಇತಿಹಾಸದುದ್ದಕ್ಕೂ ನರ್ತಕಿಯರ ಹಿಂದೆ ಬಿದ್ದಿದ್ದಾರೆ. ಇದು ಅವರ ಜೀವನ ಮೌಲ್ಯ!

No Comments



"ಹಿಂದೂ ಧರ್ಮಕ್ಕೆ ಹುಟ್ಟು ಇಲ್ಲ, ಆದ್ದರಿಂದ ಅದಕ್ಕೆ ಸಾವೇ ಇಲ್ಲ."

-ಕಂಚಿ ಸ್ವಾಮೀಜಿ

"ನರ್ಮದಾ ವಿಷಯದಲ್ಲಿ ನಾನು ಕ್ಷಮೆ ಕೇಳಬೇಕೆಂದರೆ ಸುಪ್ರೀಂ ಕೋರ್ಟ್ ಸಹಾ ಕ್ಷಮೆ ಕೇಳಬೇಕಾಗುತ್ತದೆ."

-ಆಮಿರ್ ಖಾನ್




"ನಾನು ಹಿಂದಿನಷ್ಟು ಪ್ರಾಮಾಣಿಕ ನಾಗಿಲ್ಲ."

-ಸಿ.ಟಿ. ರವಿ

"ಫನಾ ಚಿತ್ರಕ್ಕೆ ವಿರೋಧ ವ್ಯಕ್ತ ಪಡಿಸುತ್ತಿರುವವರು ವಿಕೃತ ಮನಸ್ಸಿನವರು."

-ಮೇಧಾ ಪಾಟ್ಕರ್

ನಂಬಿದ್ರೆ ನಂಬಿ ಬಿಟ್ರೆ ಬಿಡಿ:



"ಪಕ್ಷದಲ್ಲಿ ಭಿನ್ನಮತ ಇಲ್ಲ, ಶಂಕೆ ಬೇಡ."

-ಅನಂತಕುಮಾರ್

"ಪ.ಬಂಗಾಳದಲ್ಲಿ ಕೃಷಿಭೂಮಿಯನ್ನು ಕೈಗಾರಿಕೆಗಳಿಗೆ ಕೊಡಲಾಗುವುದಿಲ್ಲ."



-ಸೀತಾರಾಂ ಯೆಚೂರಿ.

"ಸಚಿನ್ ತೆಂಡೂಲ್ಕರ್ ಅಂದರೆ ಯಾರು?"

-ಬುಧಿಂಯ, ಒರಿಸ್ಸಾದ ಬಾಲ ಅಥ್ಲೆಟ್ ಪ್ರತಿಭೆ.



"ವಿಧಾನ ಪರಿಷತ್ ಸದಸ್ಯರನ್ನು ಸಂವಿಧಾನ ಬದ್ಧವಾಗಿಯೇ ನಾಮಕರಣ ಮಾಡಲಾಗಿದೆ."

-ಟಿ.ಎನ್.ಚತುರ್ವೇದಿ, ರಾಜ್ಯಪಾಲರು.

ವಾರದ ಘೋಷಣೆ:

"ದೇಶ್ ಬಚಾವ್, ದೇಶ್ ಬನಾವ್"


-ಎನ್‌ಎಪಿಎಂನ ಬೆಂಗಳೂರು ಘೋಷಣೆ

ಒಂದಿಷ್ಟು ಗಾಳಿ, ಒಂದಿಷ್ಟು ಬಿಸಿಲು
ಭೂಮಿಯ ಬೆಚ್ಚನೆಯ ಸ್ಪರ್ಶ
ಇಷ್ಟೇ! ಚಿಗುರೊಡೆದ ಮರದಲ್ಲಿ
ಈಗ
ಕಾವ್ಯ ರಚನೆಗೊಂಡಿತು
— ಗೌರು



ಕಾವ್ಯ ಎಂದರೆ ಅದೊಂದು ಅನನ್ಯ ಪರತಂತ್ರವಾದ ಪ್ರತಿಮೆ -ಕುವೆಂಪು

ಕಾವ್ಯ



ಈ ಸಲ ಕಾವ್ಯ ಕುರಿತ ವಿವಿಧ ಕವಿ, ವಿದ್ವಾಂಸರ ಮಾತುಗಳನ್ನು ಸೂಕ್ತಿಗಳಾಗಿ ಕೊಡುತ್ತಿದ್ದೇವೆ.

ಕಾವ್ಯ 'ನಂದಾ'ದೀಪ ಎನ್ನುವ ನಮ್ಮ ಬಳಗದ ಯುವಕವಿ ಹುಲಿಕುಂಟೆ ಮೂರ್ತಿ ಈ ಸೂಕ್ತಿಗಳನ್ನು ಸಂಗ್ರಹಿಸಿಕೊಟ್ಟಿದ್ದಾರೆ.

ನೀವು ಇವನ್ನು ಖಂಡಿತಾ ಇಷ್ಟಪಡುತ್ತೀರಿ....

-ಗೌರು

ಈ ದೇಶದಲ್ಲಿ ಹೆಣ್ಣಿಗಿಂತಲೂ ಹಾವಿಗೆ ಹೆಚ್ಚು ಮೆರಿಟ್


ಕಂಡಹಾಗೆ



'ಅವಳ ವಯಸ್ಸು ಮೂವತ್ತು, ಆಕೆಗೆ ಮದುವೆ ಮಾಡಿಸಲಾಗದಷ್ಟು ಬಡತನ ಮನೆಯಲ್ಲಿ. ಅದು ಅಲದೆಂಬಂತೆ ಅವಳದ್ದು ಜಾತಿಯಲ್ಲಿ ಹಿಂದುಳಿದ ವರ್ಗ; ವಾಸಿಸುತ್ತಿರುವುದು ಒಂದು ಸಣ್ಣ ಹಳ್ಳಿಯಲ್ಲಿ.

ಬಡತನ, ಜಾತಿ, ವಯಸ್ಸು ಮತ್ತು ಸಾಮಾಜಿಕ ವ್ಯವಸ್ಥೆ ಈ ಎಲ್ಲದರ ಮುಂದೆ ಏಕಾಂಗಿಯಾಗಿ ಜೀವಿಸುವುದು ಆಕೆಗೆ ಬರ್ಭರವಾಗಿ ಕಂಡಿರಬೇಕು. ಹಾಗಾಗಿಯೇ ಬಹುಶಃ ಇದ್ದರಿಂದಲೇ ಮೊನ್ನೆ ಬಿಮಲಾ ದಾಸ್ ಎಂಬ ಈ ಮಹಿಳೆ ತಾನು ಹಾವೊಂದನ್ನು ಪ್ರೀತಿಸುತ್ತಿದ್ದೇನೆಂದೂ, ತಾನು ಆ ಹಾವಿನೊಂದಿಗೆ ಮದುವೆ ಆಗುತ್ತೇನೆಂದೂ ಹೇಳಿದ್ದಾಳೆ. ಅವಳ ಈ ವಿಚಿತ್ರ ಆಪೇಕ್ಷೆಯ ಹಿಂದಿರುವ ಅಸಹಾಯಕತೆ ಮತ್ತು ಮನೋಸ್ಥಿತಿಯನ್ನು ಅರ್ಥ ಮಾಡಿಕೊಂಡು ಅವಳಿಗೆ ಬುದ್ಧಿ ಹೇಳುವ ಬದಲಾಗಿ ಅವಳ ಹಳ್ಳಿಯ ಜನ ಸಂಭ್ರಮಿಸಿದ್ದಾರೆ. ಜನರೇ ಹಣ ಸಂಗ್ರಹಿಸಿ, ಹಾವಿನ ಸಂಕೇತವಾದ ಹಗ್ಗದ ತುಂಡಿನೊಂದಿಗೆ ಅವಳಿಗೆ ಮದುವೆ ಮಾಡಿದ್ದಾರೆ.

ದೇಶದೆಲ್ಲೆಡೆ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಒಬಿಸಿಗಳಿಗೆ ಮೀಸಲಾತಿ ನೀಡುವುದರ ಬಗ್ಗೆ ಪ್ರತಿಭಟನೆ, ವಾದ-ವಿವಾದ, ಚರ್ಚೆಗಳು ನಡೆಯುತ್ತಿರುವಾಗಲೇ ಹಿಂದುಳಿದ ವರ್ಗದ ಮಹಿಳೆಯೊಬ್ಬಳು, ಹಾವನ್ನು ಮದುವೆಯಾಗಿರುವ ಈ ಪ್ರಕರಣ ಒರಿಸ್ಸಾ ರಾಜ್ಯದ ಖುರ್ದಾ ಜಿಲ್ಲೆಯ ಹಳ್ಳಿಯಲ್ಲಿ ಘಟಿಸಿದೆ.



ಅಂದಹಾಗೆ, ಮೇಲುಜಾತಿ/ವರ್ಗದ ಡಾಕ್ಟರ್‌ಗಳು ಬೀದಿಗೆ ಬಂದು ಕಸ ಗುಡಿಸಿದ್ದನ್ನು, ಶೂ ಪಾಲಿಶ್ ಮಾಡಿದ್ದನ್ನು ನೋಡಿ ಮರುಗಿದ ಸರ್ವೋಚ್ಚ ನ್ಯಾಯಾಲಯ "ಹಿಂದುಳಿಯುವಿಕೆಯನ್ನು ಅಳೆಯಲು ಯಾವ ಮಾನದಂಡವನ್ನು ಅನುಸರಿಸಿದ್ದೀರಿ?" ಎಂದು ಸರ್ಕಾರವನ್ನು ಪ್ರಶ್ನಿಸಿತ್ತಲ್ಲಾ... ಈ ಬಿಮಲಾ ಪ್ರಕರಣವನ್ನು ಯಾವ ಮಾನದಂಡ ಇಟ್ಟು ಅಳೆಯಬೇಕು? ಇದು ಕೇವಲ ವೈಚಾರಿಕತೆಯ ಕೊರತೆಯೋ, ಸಾಮಾಜಿಕ ಕಾಳಜಿಯ ವಿಫಲತೆಯೋ, ಹೆಣ್ಣೆಂಬ ದುರಂತವೋ ಅಥವಾ ಕೇವಲ ಒಂದು ದಿನದ ಮಟ್ಟಿಗೆ ಸುದ್ದಿಯಾದ ಅಪರೂಪದ ಘಟನೆಯೋ? ಇವ್ಯಾವೂ ಅಲ್ಲವೆಂದರೆ ಇವತ್ತು ನಮ್ಮ ಅರ್ಧದಷ್ಟು ಜನಸಂಖ್ಯೆ ಹಿಂದುಳಿಯುವಿಕೆಯ ನೈಜ ಚಿತ್ರಣವೇ ಇದು?

ಈ ಪ್ರಕರಣದಲ್ಲಿ ಇನ್ನೊಂದು ಮುಖ್ಯ ಅಂಶವನ್ನು ಗಮನಿಸಬೇಕು. ಒರಿಸ್ಸಾ ರಾಜ್ಯದಲ್ಲಿ ಬಿಜೆಪಿ ಬೆಂಬಲಿತ ನವೀನ್ ಪಟ್ನಾಯಕ್‌ರವರ ಸರ್ಕಾರ ಅಧಿಕಾರದಲ್ಲಿದೆಯಲ್ಲದೆ ಇದೇ ರಾಜ್ಯದಲ್ಲಿ ಹಲವು ವರ್ಷಗಳ ಹಿಂದೆ ಗ್ರಹಾಂ ಸ್ಟೈನ್ಸ್ ಎಂಬ ಕ್ರಿಶ್ಚಿಯನ್ ಧರ್ಮ ಪ್ರಚಾರಕ ಮತ್ತವರ ಇಬ್ಬರು ಮಕ್ಕಳನ್ನು ಭಜರಂಗದಳದವರು ಸಜೀವವಾಗಿ ಸುಟ್ಟು ಹಾಕಿದ್ದರು. ಅದಾದ ನಂತರವೂ ಆ ರಾಜ್ಯದಲ್ಲಿ ಹಿಂದೂತ್ವವಾದಿಗಳನ್ನು ನಿಗ್ರಹಿಸುವವರೇ ಇಲ್ಲದಂತಾಗಿದೆ.

ಈಗ ಬಿಮಲಾ ಪ್ರಕರಣದಲ್ಲಿ ಹಾವಿನೊಂದಿಗೆ ಅವಳ ಮದುವೆಯನ್ನು ನೆರವೇರಿಸುವ ಮುನ್ನ ಅವಳನ್ನು 'ವೈಷ್ಣವ' ಮತಕ್ಕೆ ಮತಾಂತರಿಸಲಾಗಿದೆ. ಈ ಮತಾಂತರ ಕೇವಲ ತಾತ್ಕಾಲಿಕ ಎಂದು ಪ್ರತ್ಯೇಕವಾಗಿ ಹೇಳಬೇಕಿಲ್ಲ ಅಲ್ಲವೇ? ಆದರೆ ಈ 'ಮತಾಂತರ'ದ ಹಿಂದೆ ಬಿಮಲಾಳ ಜಾತಿ ಹಾವಿಗಿಂತಲೂ ಹಿಂದುಳಿದಿದ್ದೆಂದೂ, ಅವಳನ್ನು 'ವೈಷ್ಣವ' ಮತಕ್ಕೆ ಸ್ವಲ್ಪ ಹೊತ್ತಿಗಾದರೂ 'ಏರಿಸುವ' ಅಗತ್ಯತೆ ಇದೆ ಎಂದೂ ಪರಿಗಣಿಸಿರುವುದು ಎದ್ದು ಕಾಣುತ್ತದೆ. ಅದೂ ಸರಿ ಎಂಬಂತೆ ಹಲವರಿಗೆ ಕಾಣಿಸಬಹುದು. ಏಕೆಂದರೆ ಮಹಿಳೆಯರನ್ನು, ಅದರಲ್ಲೂ ಕೆಳ ಜಾತಿಯ ಮಹಿಳೆಯರನ್ನು ತುಚ್ಛವಾಗಿ ಕಾಣುವ, ಅದೇ ಹೊತ್ತಿಗೆ ಬೀದಿ ಬದಿಗಳಲ್ಲಿರುವ ಹಾವಿನ ಹುತ್ತ ಮತ್ತು ಶಿಲೆಗಳನ್ನು ಪೂಜಿಸುವ ಧರ್ಮವಲ್ಲವೇ 'ಹಿಂದೂ ಧರ್ಮ'?

ಅಂದಹಾಗೆ, ಹಾವಿಗಿಂತಲೂ ಕೆಳ ಜಾತಿಯವಳಾದ ಈ ಬಿಮಲಾ ಮತ್ತವಳ ಸಮುದಾಯವನ್ನು ಯಾವ 'ಮಾನದಂಡ' ವಿಧಿಸಿ ನಮ್ಮ ಸರ್ವೋಚ್ಚ ನ್ಯಾಯಾಲಯ ಮತ್ತು ಮೀಸಲಾತಿ ವಿರೋಧಿ ಹೋರಾಟಗಾರರು ಅಳೆಯುತ್ತಾರೆ? ಆಕೆಯನ್ನು 'ವೈಷ್ಣವ' ಮತಕ್ಕೆ ತಾತ್ಕಾಲಿಕವಾಗಿ ಮತಾಂತರಿಸಿದ್ದರ ಹಿಂದೆ ಇರುವ 'ಮನು'ದಂಡಗಳನ್ನು ಅವರೆಲ್ಲ ಗಣನೆಗೆ ತೆಗೆದುಕೊಳ್ಳುತ್ತಾರೋ ಇಲ್ಲವೋ? ಅಥವಾ ಆ ಹೆಣ್ಣಿಗಿಂತ ಹಾವಿಗೆ ಹೆಚ್ಚು 'ಮೆರಿಟ್' ಇದೆ ಎಂದು ವಾದಿಸುತ್ತಾರೋ?

ಬಿಮಲಾಳ ಮದುವೆ ಪ್ರಸಂಗವನ್ನು ನಮ್ಮ ಮಾಧ್ಯಮಗಳು ಒಂದು ವಿಚಿತ್ರ ಘಟನೆ ಎಂಬಂತೆ ವರದಿ ಮಾಡಿ ಸುಮ್ಮನಾದವು. ಆದರೆ ಆ ಪ್ರಸಂಗದ ಹಿಂದೆ ಒಂದು ಹೆಣ್ಣು, ಸಮುದಾಯ, ಸಮಾಜದ ಕತೆ ಇದೆ ಮಾತ್ರವಲ್ಲ ನಮ್ಮ ಜನರ ಬದುಕಿನ ದುರಂತವೂ ಅಡಗಿದೆ ಎಂಬುದನ್ನು ಯಾರೂ ಪರಿಗಣಿಸಲೇ ಇಲ್ಲ...

* * * *

ಈ ಪುಟದಲ್ಲಿ 'ಪರದೇಶಿತನವೆಂದರೆ' ಎಂಬ ಬರಹ ಕೊಟ್ಟಿದ್ದೇನೆ. ಸದ್ಯ ಅಮೆರಿಕೆಯಲ್ಲಿರುವ ನನ್ನ ಗೆಳತಿ ಸುಕನ್ಯಾ ಕನಾರಳ್ಳಿ ನನಗೆ ಇ-ಮೇಲ್‌ನಲ್ಲಿ ಕಳುಹಿಸಿದ್ದ ಪತ್ರ ಇದು. ಅಲ್ಲಿರುವ ಇಂಡಿಯನ್ ಸೈಬರ್ ಕೂಲಿಗಳಿಗೆ ಹೇಗೆ ಅವರ ಇಂಡಿಯಾ ದೇಶವೇ ಅರ್ಥವಾಗಿಲ್ಲ ಎಂಬುದನ್ನು ಸುಕನ್ಯಾ ಭಿನ್ನ ಧಾಟಿಯಲ್ಲಿ ಬರೆದಿರುವುದು ನನಗೆ ಇಷ್ಟವಾಯಿತು. ಬಿಡುವಾದ ಕೂಡಲೇ ಸುಕನ್ಯಾಗೆ ಉತ್ತರಿಸಿ ಒರಿಸ್ಸಾದ ಹಾವಿನ ಜೊತೆಗಿನ ಮದುವೆಯ ವಿಚಾರ ಅಲ್ಲಿನ ಸೈಬರ್ ಕೂಲಿಗಳಿಗೂ ತಿಳಿಸು ಎನ್ನೋಣವೆಂದುಕೊಂಡಿದ್ದೇನೆ.

-ಗೌರಿ ಲಂಕೇಶ್

ಪರದೇಶಿತನವೆಂದರೆ...?



ಸುಕನ್ಯಾ ಕನಾರಳ್ಳಿ

ಸಂಜೆಯ ವಾಕಿಂಗಿನಲ್ಲಿ ಹಠಾತ್ತನೆ ಪರಿಚಯದ ಮುಖವೊಂದು ಕಂಡಿತ್ತು. ಪರಿಚಯ ಅಂದರೆ ಪರಿಚಯವೇ ಅಲ್ಲ, ಪರದೇಶದಲ್ಲಿರುವಾಗ ನಮ್ಮ ತರಹದ ಮುಖಗಳು ಕಂಡರೆ ಹಿಂದೆಂದೂ ಕಂಡಿಲ್ಲದಿದ್ದರೂ ಪರಿಚಿತ ಎಂದೆನ್ನಿಸಿಕೊಳ್ಳುತ್ತವೆ. ನಾನು ಕಂಡಿದ್ದು ವೃದ್ಧರೊಬ್ಬರ ಮುಖ. ಈ ದೊಡ್ಡ ಅಪಾರ್ಟ್‌ಮೆಂಟಿನಲ್ಲಿ ಭಾರತೀಯರು ತುಂಬಾ ಕಡಿಮೆ. 'ಹ್ಞಾಂ....!' ಎಂದು ಸಣ್ಣ ಉದ್ಗಾರವೊಂದು ಅವರ ಬಾಯಿಂದ ಹೊರಬಿದ್ದಿತ್ತು. ಈ ಕಂಟ್ರಿ ಕಸಿನ್ ಬಾಂಧವ್ಯದಲ್ಲಿ ನನಗೆ ಅಷ್ಟು ಆಸಕ್ತಿಯಿಲ್ಲವಾದ್ದರಿಂದ ನನ್ನ ಪಾಡಿಗೆ ಹೆಜ್ಜೆ ಹಾಕಿದೆ.

ಮಾರನೇ ದಿನ ಹೆಂಡತಿ ಸಮೇತ ಮತ್ತೆ ಅದೇ ವೃದ್ಧರ ಭೇಟಿಯಾಯ್ತು. ಹೆಂಗಸು ಉದ್ಗಾರವೇನೂ ತೆಗೆಯದೇ ಸೀದಾ ಮಾತಾಡಿಸಿದರು....ಹಿಂದಿಯಲ್ಲಿ. ಭಾರತೀಯರಿಗೆಲ್ಲಾ ಹಿಂದಿ ಬರುತ್ತದೆ ಅಥವಾ ಬರಲೇಬೇಕು ಎಂಬ ಅನಿಸಿಕೆಯ ಬಗ್ಗೆ ನನಗೆ ಮಹಾ ಕೋಪ. ಉತ್ತರ ಭಾರತದ ಟೆಕ್ಕಿಯೊಬ್ಬ 'ನೀವು ಭಾರತೀಯರಾಗಿ ಹಿಂದಿ ಬರೋಲ್ಲವೇ?' ಎಂದೊಮ್ಮೆ ಕೇಳಿದ್ದಾಗ 'ನಿಮಗೆ ಭಾರತದಲ್ಲಿ ಎಷ್ಟು ಅಧಿಕೃತ ಭಾಷೆಗಳಿದಾವೆ ಅಂತ ಗೊತ್ತಿಲ್ಲದಿದ್ದರೆ ಸ್ವಲ್ಪ ಮನೆಗೆ ಹೋಗಿ ಗೂಗಲಿಸಿ ನೋಡಿ, ಉಪಯೋಗವಾಗಬಹುದು' ಎಂದು ಝಾಡಿಸಿದ್ದೆ. ಪಾಪ ಈ ವೃದ್ಧೆಗೆ ಹಾಗೆ ಹೇಳುವ ಅಗತ್ಯವಿರಲಿಲ್ಲ. 'ನನಗೆ ಹಿಂದಿ ಅಷ್ಟಾಗಿ ಬರೋಲ್ಲ' ಎಂದೆ.

'ತೆಲುಗು ಗೊತ್ತಾ?' ಎಂದರು. 'ಸ್ವಲ್ಪ ಮಟ್ಟಿಗೆ ಅಷ್ಟೇ. ನಾನು ಕನ್ನಡದವಳು' ಅಂದೆ. 'ಮನೆಗೆ ಬನ್ನಿ' ಅಂತ ಕರೆದಾಗ ವೃದ್ಧ ಗಂಡಸು ಉತ್ಸಾಹದಿಂದ ಮನೆ ನಂಬರ್ ಕೊಟ್ಟರು.

ನನ್ನ ಮಟ್ಟಿಗೆ ಅಮೆರಿಕಾದಲ್ಲಿ ಕಂಡ ವಯಸ್ಸಾದವರ ಮುಖಗಳಲ್ಲಿ ಹೇಳಲು ಬಾರದ ದ್ವಂದ್ವ, ಏಕಾಂಗಿತನ, ಕಳವಳಗಳು ಕಾಣಿಸುತ್ತವೆ. ಗ್ರೀನ್ ಕಾರ್ಡ್ ಪಡೆದುಕೊಂಡು ಕಳೆದ ಇಪ್ಪತ್ತು ವರ್ಷಗಳಿಂದ ಇಲ್ಲೇ ಇರುವ ಎಂಭತ್ತರ ಸನಿಹದ ಈ ದಂಪತಿಗಳ ಮುಖವೂ ಅದಕ್ಕೆ ಹೊರತಾಗಿರಲಿಲ್ಲ. ಒಂದು ವಾರದ ನಂತರ ಬಿಡುವು ಮಾಡಿಕೊಂಡು ಹೋದಾಗ ನನ್ನ ಹರಕುಮುರುಕು ಹಿಂದಿಯಲ್ಲಿ ಹೇಗೋ ಸಂಭಾಷಣೆ ನಡೆಸಲು ಸಿದ್ಧಳಾಗಿದ್ದೆ. ವೃದ್ಧೆಯ ಮುಖದಲ್ಲಿ ಸ್ವಲ್ಪ ನಿರಾಳತೆ ಕಂಡಿತು. ಕಳ್ಳತನದಲ್ಲಿ ತಮ್ಮ ಬಲವಂತಕ್ಕೆ, ಮದುವೆ ಮಾಡಿಕೊಂಡ ಇಲ್ಲಿಯ ಮಗನ ವಿಷಮ ಸಂಸಾರ, ನಲ್ವತ್ತರ ಹತ್ತಿರವಿರುವ ತಮ್ಮ ಇಲ್ಲಿಯ ಮಗಳಿಗೆ ಮದುವೆಯಾಗಿಲ್ಲದಿರುವುದು ಇತ್ಯಾದಿ ಏನೇನೋ ಅಲವತ್ತುಕೊಂಡರು. ಎರಡು ವಾರದ ನಂತರ ಮತ್ತೊಮ್ಮೆ ಫೋನ್ ಮಾಡಿ 'ಬಿಡುವಿದ್ದರೆ ಬಾಮ್ಮಾ' ಎಂದು ಕರೆದಾಗ ವೃದ್ಧೆಯ ಮಾತನ್ನು ಒತ್ತರಿಸಲಾಗದೇ ಹೋದೆ.

ಹೆಂಗಸು ತಮ್ಮ ಆರೋಗ್ಯದ ಬಗ್ಗೆ, ಸಂಸಾರದ ಬಗ್ಗೆ ಹೇಳಿಕೊಂಡರು. ಗಂಡಸು ಮತ್ತೆ ಎಟೀ ಅಂಡ್ ಟಿ ಪುರಾಣವನ್ನು ಹೊಸದಾಗಿ ಹೇಳುವವರಂತೆ ಪ್ರಾರಂಭಿಸಿದಾಗ ಬೋರು ಹೊಡೆಯಹತ್ತಿತು. ಅವರ ಮಗ ಇಪ್ಪತ್ತೈದು ವರ್ಷದಿಂದ ಆ ಕಂಪನಿಗೇ ಕೆಲಸ ಮಾಡುತ್ತಿರುವುದು, ಅದು ಎಂಥಾ ದೊಡ್ಡ ಕಂಪನಿ, ಎಷ್ಟು ಸ್ವಾಮ್ಯವನ್ನು ಹೊಂದಿದೆ, ಮಗಳೂ ಹೇಗೆ ಇಲ್ಲೇ ಬಂದು ಸೇರಿದಳು....ಇತ್ಯಾದಿ ಇತ್ಯಾದಿ... ಅದೂ ಇಂಗ್ಲೀಷಿನಲ್ಲಿ.

ಹೆಂಗಸು ಆಕಳಿಸಹತ್ತಿದರು. ನನಗೆ ಸಣ್ಣದಾಗಿ ಕಿರಿಕಿರಿಯೆನ್ನಿಸಲು ಶುರುವಾಯಿತು. ಇಂಗ್ಲೀಷಲ್ಲಿ ಮಾತಾಡಿ ಹೆಂಡತಿಯನ್ನು ಹೊರಗಿಟ್ಟು, ನನಗೆ ಆಸಕ್ತಿಯಿಲ್ಲದ್ದನ್ನು ಮಾತಾಡಿ ನನ್ನನ್ನೂ ಹೊರಗಿಟ್ಟು...ಈ ಮನುಷ್ಯ ಯಾರಿಗಾಗಿ ಬಡಬಡಿಸುತ್ತಿದ್ದಾರೆ ಅಂತನ್ನಿಸಿತು. ಕಷ್ಟಪಟ್ಟು ಸಂಭಾಷಣೆಯನ್ನು ಹಿಂದಿಗೆ ಎಳೆದು ತಂದರೂ ಪ್ರಯೋಜನವಾಗಲಿಲ್ಲ. 'ಸ್ವಲ್ಪ ಟೀ ಮಾಡಿ ತರುತ್ತೀರಾ?' ಎಂದು ಗಂಡಸನ್ನು ಸಾಗ ಹಾಕಿದಾಗ ಅಬ್ಬ ಎಂದು ಉಸಿರು ಬಿಟ್ಟೆ.

ಎರಡನೆಯ ಸಲದ ಭೇಟಿಯಾದ್ದರಿಂದ ವೃದ್ಧೆ ಸ್ವಲ್ಪ ಸಲುಗೆ ವಹಿಸಿ ಮನೇಲಿ ಯಾವ ದೇವರನ್ನು ಇಟ್ಟಿದೀಯಾ ಅಂತ ಕೇಳಿದರು. ಯಾವುದೂ ಇಲ್ಲವೆಂದೆ. ಟೀ ಕೊಡಲು ಬಂದ ವೃದ್ಧರ ಕಣ್ಣು ಒಂದು ಕ್ಷಣ ನನ್ನ ಮೇಲೆ ಹೆಚ್ಚು ಹೊತ್ತು ನಿಂತಿದ್ದು ಅರಿವಾಯಿತು. ದೇವಸ್ಥಾನಕ್ಕೆ ಹೋಗೋಲ್ಲವೆ ಎಂದು ಮುಂದಿನ ಪ್ರಶ್ನೆ. ಯಾಕೆ ಹೋಗೊಲ್ಲ?—ಇನ್ನೊಂದು ಪ್ರಶ್ನೆ. ಪಿಟ್ಸ್‌ಬರ್ಗ್ ದೇವಸ್ಥಾನಕ್ಕೆ ಹೋಗಿಲ್ಲವೇ? ಇಲ್ಲ, ಹೋಗುವ ಪ್ಲಾನ್ ಏನೂ ಇಲ್ಲವೆಂದೆ. ಯಾಕೆ? ನಿರೀಕ್ಷಿತ ಪ್ರಶ್ನೆಯೇ. ಯಾಕೆಂದರೆ ಮುಂಚಿನಿಂದಲೂ ಆಸಕ್ತಿ ಇಲ್ಲ. (ಉಳ್ಳವರು ಶಿವಾಲಯವ ಮಾಡುವರು ಅಂತ ಹಿಂದಿಯಲ್ಲಿ ಹೇಳೋದು ಹೇಗೆ?), ದೇವಾಲಯದ ರಾಜಕೀಯ ಮಾಡುತ್ತಾ ರಕ್ತಪಾತ ಮಾಡುವವರನ್ನು ನೋಡಿದ ಮೇಲೆ ಇನ್ನೂ ಆಸಕ್ತಿ ಹೋಯಿತು ಎಂದೆ ಚುಟುಕಾಗಿ. 'ಹಾಗೆ ಹೇಳಿದ್ರೆ ಹೇಗೆ?....ಯು..ಸೀ..ಹಿಸ್ಟರಿ ಸೇಸ್...ನಮ್ಮ ದೇವಸ್ಥಾನಗಳನ್ನೆಲ್ಲಾ ಅವರು ಬಂದು ಹಾಳುಮಾಡಿದರು ಅಂತ...' ವೃದ್ಧರ ರಾಗವನ್ನೂ, ಎಲ್ಲಾ ಬಲ್ಲೆನೆಂಬ ಆಟಾಟೋಪವನ್ನು ಸಹಿಸುವುದು ಸ್ವಲ್ಪ ಕಷ್ಟವಾಯಿತು. ಹರಕುಮುರುಕು ಹಿಂದಿಯೂ ಮರೆತು ಹೋಯಿತು. ಸೀದಾ ಇಂಗ್ಲೀಷಿಗಿಳಿದೆ. 'ಯಾರ ಹಿಸ್ಟರಿ ಅದು? ಎಷ್ಟೋ ಹಿಂದೂಗಳೂ ಸಹ ತಮ್ಮ ಮತ್ತು ಬೇರೆಯವರ ಆರಾಧಿಸುವ ಸ್ಥಳಗಳನ್ನು ನಾಶಮಾಡಿದ್ದರಲ್ಲ? ಜೈನ ಬಸದಿ ಬೌದ್ಧಸ್ತೂಪಗಳ ಮೇಲೆ ದೇವಸ್ಥಾನ ಕಟ್ಟಿಲ್ಲವೆ? ಶೂದ್ರರ ದೇವರುಗಳನ್ನು ಒತ್ತರಿಸಿ ಮೇಲ್ಜಾತಿಯ ದೇವರುಗಳನ್ನು ಪ್ರತಿಷ್ಠಾಪಿಸಿದ್ದಾರಲ್ಲ...?'

ಪಾಪ ಹೆಂಗಸಿಗೆ ಅರ್ಥವಾಗದಿದ್ದರೂ ಗಂಡನ ಮುಖಚರ್ಯೆ ನೋಡಿ ಇದ್ಯಾಕೋ ಬೇಡದ್ದು ಅಂತನ್ನಿಸಿ ಮಾತು ತಿರುಗಿಸಿದರು. ದಿನನಿತ್ಯದ ಬಗ್ಗೆ ಮಾತು ಬಂದು, ಆರೋಗ್ಯದತ್ತ ತಿರುಗಿ ಮತ್ತೆ ವೃದ್ಧರು ಕೊರೆಯಲಾರಂಭಿಸಿದರು.

'ನನ್ನ ಪ್ರಕಾರ ದೇಹಾನ ತಲೇನ ಚೆನ್ನಾಗಿ ದುಡಿಸುತ್ತಿದ್ದರೆ ಯಾವ ಖಾಯಿಲೆಯೂ ಬರೋಲ್ಲ. ನನ್ನ ನೋಡಿ, ಎಂಭತ್ತು ದಾಟಿದರೂ ಬಿಪಿ, ಶುಗರ್ ಏನೂ ಇಲ್ಲದೆ ಹೇಗಿದ್ದೇನೆ!'

'ಏನ್ಮಾಡ್ತೀರಾ ಆಷ್ಟೊಂದು?' ತಡೆಯಲಾರದೇ ಕೇಳಿದೆ.

'ಬೆಳಗ್ಗೆ ಎದ್ದು ಲಘುವಾಗಿ ವ್ಯಾಯಾಮ ಮಾಡಿ ತಿಂಡಿ ತಿಂದು ಸ್ವಲ್ಪ ರೆಸ್ಟ್ ತಗೋಳ್ತೀನಿ. ಆಮೇಲೆ ಪ್ರಪಂಚದ ವಿದ್ಯಮಾನಗಳನ್ನೆಲ್ಲಾ ಸಿಎನೆನ್ ನೋಡಿ ತಿಳ್ಕೊಳ್ತೀನಿ. ಇಂಡಿಯನ್ ನ್ಯೂಸ್ ಪೇಪರ್ಸ್ ಎಲ್ಲವನ್ನೂ ಓದ್ತೀನಿ. ನಮ್ಮ ದೇಶದಲ್ಲಿ ಏನಾಗ್ತಾ ಇದೆ ಅಂತ ಬೇಕಲ್ಲಾ? ಯು...ಸೀ...ವಾಟ್ ಈಸ್ ಹ್ಯಾಪನಿಂಗ್ ಟು ಅವರ್ ಕಂಟ್ರಿ ಅಂತ?'

'ಯಾಕೆ ಏನಾಯ್ತು?'

'ಇನ್ನೂ ರಿಸರ್ವೇಶನ್ ಅಂತೆ...ಏನಿದು ಅಸಂಬದ್ಧ?'

ಗೊತ್ತಿರುವ ವಾದಗಳೇ. ಅರ್ಥಕ್ಕಿಂತ ಹೆಚ್ಚು ಜನ ಯಾಂತ್ರಿಕವಾಗಿ ಉರುಳಿಸುತ್ತಿರುವ ಪದಗಳೇ. ಆದರೂ ನೆಟ್ಟಗೆ ಕೂತೆ.

'ಅಸಂಬದ್ಧ ಯಾಕೆ? ಇಲ್ಲಿಯ ತನಕ ಮೇಲ್ಜಾತಿಯವರು ಮತ್ತು ಶ್ರೀಮಂತರು ಒಂದಲ್ಲ ಒಂದು ರೀತಿಯಲ್ಲಿ ರಿಸರ್ವ್ ಮಾಡಿಕೊಂಡಿರಲಿಲ್ಲವೇ? ಈಗ ಸ್ವಲ್ಪ ಬೇರೆ ರೀತಿಯ ರಿಸರ್ವೇಶನ್ ಅಷ್ಟೇ...'


ಬಿಪಿ ಇಲ್ಲದ ವೃದ್ಧರು ಮುಖ ಕೆಂಪು ಮಾಡಿಕೊಂಡು ಇನ್ನೊಂದು ಭಾಷಣ ಬಿಗಿಯಲಾರಂಭಿಸಿದರು. ಮೆರಿಟ್ ಗತಿ? ದೇಶದ ಗತಿ? ಪ್ರಪಂಚದ ಗತಿ?... ಎಕ್ಸೆಟ್ರಾ...

ಕೆಲವು ದಿನಗಳ ಹಿಂದೆ ಟೆಕ್ಕಿಗಳ ಗೆಟ್-ಟುಗೆದರ್‌ಗೆ ಹೋಗಿದ್ದಾಗಲೂ ಇದೇ ಪ್ರಹಸನ. ನನ್ನ ಗೆಳೆಯನೊಬ್ಬ (ಅವನೂ ಟೆಕ್ಕಿಯೇ), ಅದನ್ನು 'ಸೈಬರ್ ಕೂಲಿಗಳ ಸಂತೆ' ಅಂತ ಕರೀತಾನೆ. ಈ ಸೈಬರ್ ಕೂಲಿಗಳ ಕೆಲಸದಲ್ಲಿ ಯಾವ ಮಣ್ಣಾಂಗಟ್ಟಿ ಮೆರಿಟ್ಟೂ ಇಲ್ಲ ಎಂದು ನನ್ನ ಅನುಭವಿ ಟೆಕ್ಕಿ ಗೆಳೆಯನೇ ಹೇಳಿದ್ದ. ಕೀ ಬೋರ್ಡ್ ಹೇಗೆ ಉಪಯೋಗಿಸುವುದು ಎಂದು ಗೊತ್ತಾದರೆ ಸಾಕು ಈ ಕೆಲಸ ಮಾಡಬಹುದು ಎಂದು ಟಿಸಿಎಸ್ ಅಧಿಕಾರಿಯೊಬ್ಬರು ಹೇಳಿದ್ದನ್ನ ಕೋಟ್ ಮಾಡಿದ್ದ. ಆದರೂ ರಿಸರ್ವೇಶನ್ ವಿರುದ್ಧದ ನೆಪದಲ್ಲಿ ಡಾಲರ್ ವೀರರ ದೇಶಾಭಿಮಾನ ಉಕ್ಕಿ ಹರಿದಿದ್ದೇ ಹರಿದಿದ್ದು.



ಪರದೇಶದಲ್ಲಿರುವ ಭಾರತೀಯರು ಹೆಚ್ಚು ಕಮ್ಮಿ ಒಂದೇ ತರಹ ಮಾತಾಡುತ್ತಾರೆ. ಜಾತಿವರ್ಗದ ವ್ಯತ್ಯಾಸ ಇಲ್ಲದಿರುವುದರಿಂದಲೋ ಏನೋ. ಬೆಂಗಳೂರಿನಲ್ಲಿ ಸ್ವಲ್ಪವಾದರೂ ಬೇರೆಯಾಗಿ ಯೋಚಿಸುವ ಸ್ನೇಹಿತರು, ಸಮಾನಮನಸ್ಕರು ಸಿಗುತ್ತಾರೆ. ಇಲ್ಲಿ ಹಾಗಲ್ಲ. ವೃದ್ಧೆ ಯಾವ ಕಹಿಯೂ ಇಲ್ಲದೆ ಕುಂಕುಮ ಕೊಟ್ಟು, ಕೈಗೆ ಹಣ್ಣೊಂದನ್ನಿತ್ತರು. ಬಾಗಿಲವರೆಗೆ ಬಂದ, ಬಿಗಿದ ಮುಖದ ವೃದ್ಧರು ಮಾತ್ರ ಹೋದ ಸಲದಂತೆ 'ಮತ್ತೆ ಬನ್ನಿ' ಎಂದು ಒತ್ತಾಯವಾಗಿ ಕರೆಯಲಿಲ್ಲ.

ಪರದೇಶೀತನ ಎಂದರೆ ಇದೇ ಏನೋ!



ಶಾಸಕ ಯೋಗೀಶ್ವರ್ ನಾಪತ್ತೆ!

ಚೆನ್ನಪಟ್ಟಣದ ಚಪಲ ಚನ್ನಿಗರಾಯ ಶಾಸಕ ಯೋಗೀಶ್ವರ್ ನಾಪತ್ತೆಯಾಗಿದ್ದಾನೆ. ತಲೆ ಮರೆಸಿಕೊಂಡು ಓಡಾಡುತ್ತಿದ್ದಾನೆ.

ನಿವೇಶನ ಹಂಚಿಕೆ ಯೋಜನೆಗೆ ಸಂಬಂಧಿಸಿದಂತೆ ನ್ಯಾಯಾಲಯದ ಆದೇಶವಿದ್ದರೂ ಹಣ ವಾಪಸ್ಸು ನೀಡದ ಸಿ.ಪಿ. ಯೋಗೀಶ್ವರನನ್ನು ಪತ್ತೆಹಚ್ಚಿ ಹಾಜರುಪಡಿಸಲು ಪೊಲೀಸರು 15 ದಿನಗಳ ಕಾಲಾವಕಾಶ ಕೇಳಿದ್ದಾರೆ. ಮೊನ್ನೆ ಜೂನ್ 2 ಶುಕ್ರವಾರದಂದು ಬೆಂಗಳೂರು ನಗರ ಹೆಚ್ಚುವರಿ ಜಿಲ್ಲಾ ಗ್ರಾಹಕ ವ್ಯಾಜ್ಯಗಳ ಪರಿಹಾರ ವೇದಿಕೆಯ ಮುಂದೆ 'ನಾಪತ್ತೆ'ಯಾದ ಯೋಗೀಶ್ವರ್ ಎಂಬ ವಂಚಕ ಜನಪ್ರತಿನಿಧಿಯನ್ನು ಜನ ಹಿಗ್ಗಾಮುಗ್ಗಾ ಉಗಿಯುತ್ತಿದ್ದುದನ್ನು ನೋಡಬೇಕಿತ್ತು ಚನ್ನಪಟ್ಟಣದ ಜನ. ಸೈಟು ಕೊಡುತ್ತೇನೆಂದು ಸಾವಿರಾರು ಜನರ ದುಡ್ಡನ್ನು ಎತ್ತಿ ಪರಾರಿಯಾಗಿದ್ದಾನೆ ಚಟ ಚಕ್ರವರ್ತಿ ಯೋಗೀಶ್ವರ್.

ಯೋಗೀಶ್ವರನಿಂದ ವಂಚನೆಗೊಳಗಾದ ಪ್ರಮಾ ಆರ್. ಶೆಟ್ಟಿ ಕೋರ್ಟ್ ಮೊರೆ ಹೋಗಿದ್ದರು. ಪ್ರಮಾರವರ 1.02 ಲಕ್ಷ ರೂ. ಹಣವನ್ನು ವಾಪಸ್ಸು ನೀಡುವಂತೆ

ಪಿ.ಕೆ. ಮಲ್ಲನಗೌಡರ್

ಈ ಹಿಂದೆ ನ್ಯಾಯಾಧೀಶರು ಆದೇಶಿಸಿದ್ದರು. ಆದರೆ ಯೋಗೀಶ್ವರನೇ ವ್ಯವಸ್ಥಾಪಕ ನಿರ್ದೇಶಕನಾಗಿರುವ ಮೆಗಾಸಿಟಿ ದೆವಲಪರ್ಸ್ ಸಂಸ್ಥೆ ಎಂಬ ತಗಡು ಕಂಪನಿ ಪ್ರಮಾರಿಗೆ ಬರೀ 30 ಸಾವಿರ ರೂಪಾಯಿ ನೀಡಿ ಬಗಲು ಎತ್ತಿಬಿಟ್ಟಿತು. ಮತ್ತೆ ಪ್ರಮಾ ಕೋರ್ಟ್ ಮುಂದೆ ಹೋದಾಗ, ಕಳೆದ ತಿಂಗಳು 12 ರಂದು ವಾರೆಂಟ್ ಜಾರಿ ಮಾಡಿ, ಕೋರ್ಟ್ ಮುಂದೆ ಹಾಜರುಪಡಿಸಲು ನ್ಯಾಯಾಧೀಶ ಶ್ರೀವತ್ಸ ಕೆದಿಲಾಯ ಆದೇಶಿಸಿದ್ದರು.

ಹುಡುಕಿ ಹುಡುಕಿ ಸುಸ್ತಾದ ಪೋಲೀಸರು "ಉತ್ತರ ಧ್ರುವದಲ್ಲೇ ಇರಲಿ, ದಕ್ಷಿಣ ಧ್ರುವದಲ್ಲೇ ಇರಲಿ... ಆ ನಕಲಿ 'ಸೈನಿಕ' ಯೋಗೀಶ್ವರನನ್ನು ಬಂಧಿಸಿ 15 ದಿನಗಳಲ್ಲಿ ತರುತ್ತೇವೆ" ಎಂದು ರಾಗ ಎಳೆದಿದ್ದಾರೆ.

ಚನ್ನಪಟ್ಟಣದ ಯಾವ ಸಮಾರಂಭಗಳಲ್ಲೂ ಯೋಗೀಶ್ವರನ ಹಾಜರಿ ಇಲ್ಲ. ಆತ ಎಲ್ಲಿ ಓಡಿಹೋಗಿದ್ದಾನೆಂಬುದೇ ಯಾರಿಗೂ ಗೊತ್ತಿಲ್ಲ!

ಮೆಗಾ ಹೆಸರಲ್ಲಿ ಮೋಸ, ದಗಾ!

ಕೇವಲ ಒಂದು ದಶಕದ ವೃತ್ತಾಂತವಿದು. ಬೆಂಗಳೂರಲ್ಲಿ ಸೈಟು ರೇಟು ಏರಿದಷ್ಟೇ ವೇಗದಲ್ಲಿ ಭರ್ರನೆ ಶ್ರೀಮಂತಿಕೆ ಗಳಿಸಿದ ಯೋಗೀಶ್ವರ್ ಇವತ್ತು ಸೂತ್ರ ಕಿತ್ತ ಗಾಳಿಪಟ ಜರ್ರನೆ ಎತ್ತೆತ್ತಲೋ ಓಡುವಂತೆ ಕುಸಿದು ಹೋಗುತ್ತಿದ್ದಾನೆ.

ಮೋಸ, ನಯವಂಚನೆಗಳ ಮೂಲಕ ಗಳಿಸಿದ ಹಣವನ್ನು ತನ್ನ ತರಹೇವಾರಿ ತೆವಲುಗಳ ಈಡೇರಿಕೆಗೆ ಸುರಿಯುತ್ತಾ ಬಂದ ಯೋಗೀಶ್ವರ್ ಹಣಕಾಸಿನ ವಿಷಯದಲ್ಲಿ ಸೋತು ಸುಣ್ಣವಾಗಿದ್ದಾನೆ. ಸಿನಿಮಾ, ರಾಜಕೀಯಗಳಿರದೂ ಯೋಗೀಶ್ವರನ ದುಡ್ಡು ಕರಗಿಸುವ ತೆವಲುಗಳಾದವೆ ಹೊರತು ನಯಾ ಪೈಸೆ ಲಾಭ ಬರಲಿಲ್ಲ.

ಚನ್ನಪಟ್ಟಣದ ಚಕ್ಕೆರೆಯ ಶಿಕ್ಷಕ ಪುಟ್ಟಮಾದೇಗೌಡರ ಮಗನಾದ ಈ ಯೋಗೀಶ್ (ನಂತರ ಯೋಗೀಶ್ವರನಾದ). ಬೆಂಗಳೂರಿಗೆ ಬಂದು ಮೈಸೂರು ರಸ್ತೆಯಲ್ಲಿ AMCO ಫ್ಯಾಕ್ಟರಿ ಎದುರು ರೂಮ್ ಮಾಡಿ, ತೆಂಗಿನಕಾಯಿಗಳನ್ನು ಮಾರುತ್ತಾ ಶ್ರಮ ಪಡುತ್ತಿದ್ದ. ಅಲ್ಲೇ ಸನಿಹದಲ್ಲೇ ಇದ್ದ ನಾರಾಯಣ ಕ್ಲಾಥ್ ಸ್ಟೋರ್ಸ್‌ನ ಮಾರ್ವಾಡಿ ಮಾಲೀಕನ ಮಗಳು ಮಂಜುಳಾಳನ್ನು ಆಕರ್ಷಿಸಿ, ಡ್ಯುಯೆಟ್ ಹಾಡುತ್ತಲೇ ಮದುವೆಯೂ ಆದ. ತನ್ನ ಸೈಟೊಂದನ್ನು ಮಾರಿದಾಗ ಬಂದ ಲಾಭ ಕಂಡು ಖುಷಿಯಾದ ಯೋಗೀಶ್ವರನಿಗೆ ರಿಯಲ್ ಎಸ್ಟೇಟ್ ದಂಧೆ ಕೈ ಬೀಸಿ ಕರೆಯಿತು. 90 ರ ದಶಕದಲ್ಲಿ ದಿಢೀರ್ ಬೆಳವಣಿಗೆ ಕಂಡ ಇವನು 'ಮೆಗಾಸಿಟಿ ಡೆವಲಪರ್ಸ್' ಎಂಬ ಸೈಟು ಮಾರುವ ವಂಚಕ ಕಂಪನಿ ತೆರೆದೇ ಬಿಟ್ಟ. ಬಿಡದಿ ಬಳಿಯ ಶೇಷಗಿರಿಹಳ್ಳಿ,

'ಸೈನಿಕ' ಚಿತ್ರದಲ್ಲಿ ಸಾಕ್ಷಿ ಶಿವಾನಂದ ಜೊತೆ



ಮಾಚನಾಯ್ಕನಹಳ್ಳಿ, ಹಂಪಾಪುರ, ಕೆಂಚಗರಹಳ್ಳಿ, ಉರುಗನಹಳ್ಳಿಗಳ ಸುತ್ತಮುತ್ತ 350 ಎಕರೆ ಭೂಮಿ ಖರೀದಿಸಿದ. ಸೈಟಿನ ಕನಸು ಕಂಡಿದ್ದ ಸಾವಿರಾರು ಅಮಾಯಕ ನಾಗರಿಕರು ಕೊಟ್ಟಿದ್ದ ದುಡ್ಡಿಂದಲೇ ಭೂಮಿ ಖರೀದಿಸಿದ್ದಾಯ್ತು. ಸಿನಿಮಾ ನಟಿಯರನ್ನು ಕರೆಸಿ ಲಕ್ಕಿ ಡಿಪ್ ಎಂಬ ರಂಗುರಂಗಿನ ಕಾರ್ಯಕ್ರಮಗಳನ್ನು ನಡೆಸುತ್ತಾ ಮೆಗಾಸಿಟಿಗೆ ಪ್ರಚಾರ ಪಡೆದುಕೊಂಡು ಬಿಟ್ಟ ಈ ಬಣ್ಣದ ಮಾತುಗಳ ಬದ್ಮಾಷ್ ಯೋಗೀಶ್! ಒಮ್ಮೆ ಐಶ್ವರ್ಯ ರೈ ಕರೆಸಿದ ಮೇಲಂತೂ ಯೋಗೀಶನ ಸೈಟು ದಂಧೆ ಫುಲ್ ಸ್ವಿಂಗ್‌ಗೆ ಬಂದುಬಿಟ್ಟಿತು. ಬಿಡದಿ ಬಳಿ ತಾನು ನಿರ್ಮಿಸುವ ವಜ್ರಗಿರಿ ಲೇಔಟ್‌ನಲ್ಲಿ ಐಶೂಗೂ ಒಂದು ಸೈಟ್ ಕೊಟ್ಟಿರುವೆ ಎಂದು ಪಕ್ಕಾ ರೀಲು ಬಿಟ್ಟ..... ಟವರ್ ಒಂದರ ಉದ್ಘಾಟನೆಗೆ ಅಮಿತಾಬ್‌ನನ್ನು ಕರೆಸಿ ತನ್ನ ಮೆಗಾಸಿಟಿ ಹೆಸರಿನ ದಗಾದಂಧೆಗೆ ವಿಪರೀತ ಪ್ರಚಾರ ಪಡೆದು, ಪೆದ್ದು ಜನರ ಸೈಟ್ ಕನಸುಗಳನ್ನು ಚಿಗುರಿಸಿ, ದುಡ್ಡು ಎತ್ತಿ ಕೋಟಿ ಕೋಟಿಗಳ ಒಡೆಯನಾದ.

ಆದರೆ ಯೋಗೀಶ್ವರನಿಗೆ ಮೊದಲಿಂದ ಸಿನಿಮಾ ತೆವಲಿತ್ತು. ಮೊದಲೊಮ್ಮೆ 'ರಣಧೀರ', 'ಒಲವಿನ ಉಡುಗೊರೆ' ಚಿತ್ರಗಳಲ್ಲಿ ಮಿನಿ ರೋಲ್‌ಗಳಲ್ಲಿ ಕಾಣಿಸಿಕೊಂಡಿದ್ದ ಈ ಮೆಗಾಚೋರ, ಕಾಸು ಕೈಲಿದ್ದಾಗ ಸುಮ್ಮನೆ ಕುಳಿತಾನೆ?

ತಾನೇ ನಾಯಕನಾಗಿರುವ 'ಪುತ್ರ ವಾತ್ಸಲ್ಯ' ಸಿನಿಮಾ ಮಾಡಲು ಹೊರಟ. ಅಂದೇ ಯೋಗೀಶ್ವರ ಅಧೋಗತಿಯತ್ತ ಮೊದಲ ಹೆಜ್ಜೆ ಇಟ್ಟ. 'ಪುತ್ರ ವಾತ್ಸಲ್ಯ'ಕ್ಕೆ ಬಿಡುಗಡೆಯ ಮುಕ್ತಿ ದೊರೆಯಲೇ ಇಲ್ಲ.. 'ಪುತ್ರ ವಾತ್ಸಲ್ಯ' ಯೋಗೀಶನ ಒಂದಿಷ್ಟು ಲಕ್ಷಗಳನ್ನು ನುಂಗಿದರೂ ಯೋಗೀಶನಿಗಿದ್ದ 'ಚಿತ್ರವಾತ್ಸಲ್ಯ'ವೇನೂ ಕಡಿಮೆಯಾಗಲಿಲ್ಲ.

'ಉತ್ತರ ಧ್ರುವದಿಂ ದಕ್ಷಿಣ ಧ್ರುವಕು' ಎಂಬ ಮೆಗಾ ಪ್ರಾಜೆಕ್ಟ್‌ಗೆ ಕೈ ಹಾಕಿ ನಟಿಸಿಯೂ ಬಿಟ್ಟ... ಪ್ರೇಕ್ಷಕ ಮಾತ್ರ ಈ ಚಿತ್ರವನ್ನು ದಿಕ್ಕಾಪಾಲಾಗುವಂತೆ ಓಡಿಸಿಬಿಟ್ಟ... ಈ ಹೊತ್ತಿಗೆ ಯೋಗೀಶನ ನಷ್ಟದ ಖಾತೆಯಲ್ಲಿ ಬರೆಯಲ್ಪಡುತ್ತಿದ್ದ ಹಣದ ಲೆಕ್ಕ ಕೋಟಿ ಕೋಟಿಗಳಿಗೇರತೊಡಗಿತ್ತು.

ರಾಜಕೀಯ ಸೇರುವ ಉದ್ದೇಶದಿಂದಲೇ 1997 ರಲ್ಲಿ ಚನ್ನಪಟ್ಟಣದಲ್ಲಿ 'ಕರುಣಾ ಚಾರಿಟೆಬಲ್ ಟ್ರಸ್ಟ್' ಆರಂಭಿಸಿ ಕೋಟ್ಯಂತರ ರೂಪಾಯಿ ದಾನ ಮಾಡಿದ, ಮಾರ್ವಾಡಿ ಮಾವ ಸೂರತ್‌ನಿಂದ ತಂದ ಹತ್ತಾರು ಸಾವಿರ ಸೀರೆ ಹಂಚಿದ. ಆಗಿನ ಕಾಂಗ್ರೆಸ್ ಶಾಸಕ ಸಾದತ್ ಖಾನ್‌ಗೆ ಟಿಕೆಟ್ ತಪ್ಪಿಸಲು ಡಿಕೆಶಿಗೆ 40 ಲಕ್ಷ ಕೊಟ್ಟು ಪ್ಯಾಲಿಯಾದ. ಬಂಡಾಯ ಅಭ್ಯರ್ಥಿಯಾಗಿ ಸ್ಪರ್ಧಿಸಿ ದುಡ್ಡು ಕಳೆದುಕೊಂಡು ಲಗಾಟಿ ಹೊಡೆದ.

ಮರುಸಲ ಪಕ್ಷೇತರನಾಗಿ ಗೆದ್ದು ಕಾಂಗ್ರೆ ಸಹಸದಸ್ಯನಾದ. ಅಷ್ಟೊತ್ತಿಗೆ ಸೈಟು ಆಕಾಂಕ್ಷಿಗಳೆಲ್ಲ ಮೆಗಾಸಿಟಿ ಆಫೀಸಿಗೆ ಬಂದು ಒತ್ತಡ ಹೇರತೊಡಗಿದ್ದರು. ಬೆಂಗಳೂರನ್ನು ಮೆಗಾ ಸಿಟಿ ಮಾಡಬೇಕೆಂದು ಪಾರ್ಲಿಮೆಂಟ್, ಅಸೆಂಬ್ಲಿಗಳಲ್ಲಿ ನಡೆದ ಚರ್ಚೆಗಳನ್ನು ಉದಾಹರಿಸಿ "ಆ ಚರ್ಚೆಗಳೆಲ್ಲ ನನ್ನ ಮೆಗಾಸಿಟಿ ಡೆವಲಪರ್ಸ್ ಕುರಿತೇ ನಡೆದದ್ದು" ಎಂದು ರೀಲು ಬಿಟ್ಟೇ ಸೈಟು ಆಕಾಂಕ್ಷಿಗಳನ್ನು ವಂಚಿಸುತ್ತ ಬಂದ. ಮತ್ತೆ ಸಿನಿಮಾದಿಂದ ದುಡ್ಡು ಮಾಡುವ ಆಶೆಯಾಗಿ 'ಸೈನಿಕ' ಎಂಬ ಬಹುಕೋಟಿಗಳ ಚಿತ್ರ ಮಾಡಿ ಭಿಕ್ಷುಕನಾಗುವತ್ತ ಹೆಜ್ಜೆ ಇಟ್ಟ.

ಕೇವಲ 10-15 ವರ್ಷಗಳ ಈ ಕತೆಯಲ್ಲಿ ಯೋಗೀಶ್ವರ ಗಗನಕ್ಕೇರಿದ.... ಏರಿದಷ್ಟೇ ಭರದಲ್ಲಿ ನೆಲಕ್ಕುರುಳಿ ಬಿದ್ದ.....

ಈಗ ಜೈಲು ಪಾಲಾಗಲೇಬೇಕು. ಏಕೆಂದರೆ ಸೈಟು ಆಕಾಂಕ್ಷಿಗಳಿಗೆ ಕೊಡಲು ಅಷ್ಟೊಂದು ದುಡ್ಡೆಲ್ಲಿದೆ?

ದಿಢೀರ್ ಖ್ಯಾತಿ, ದಿಢೀರ್ ಶ್ರೀಮಂತಿಕೆಗಳ ಬೆನ್ನು ಹತ್ತಿದ ತೆವಲುಗಾರ ಶಾಸಕನೀಗ ಪೋಲೀಸರ ಕಣ್ತಪ್ಪಿಸಿ ಬಚ್ಚಿಟ್ಟುಕೊಳ್ಳಬೇಕಾಗಿ ಬಂದಿದೆ.

ಮಾಡಿದ್ದುಣ್ಣೋ ಮಹಾರಾಯ!

ಕಾಂಗ್ರೈ 'ನೀರಾವರಿ'ಗೆ ನೀರೆರೆದ ಜೆಡಿಎಸ್!

ಹೌದು, ಕಾಂಗ್ರೆಸ್‌ನ 'ನೀರಾವರಿ'ಗೆ ಜೆಡಿಎಸ್‌ನಿಂದ ಅಭೂತಪೂರ್ವ ಸ್ವಾಗತ, ಬೆಂಬಲ ದೊರೆತಿದೆ.

ಒಳಮೀಸಲಾತಿ ಕುರಿತು 'ಚಿಂತಿಸುತ್ತಲೇ' ಇರುವ ದೇವೇಗೌಡರು ಮೀಸಲಾತಿಯ ಕುರಿತು ವ್ಯಾಪಕ ಚರ್ಚೆ ನಡೆದಿರುವಾಗ ಗಪ್ ಚುಪ್ ಇದ್ದು ಬಿಟ್ಟಿದ್ದಾರೆ. ಮೊನ್ನೆ ಎಂಎಲ್‌ಸಿ ಚುನಾವಣೆಯಲ್ಲಿ ಅದ್ವೇಗೋ ಗೌಡರಿಗೆ ಮತ್ತೆ ಒಳಮೀಸಲಾತಿ ತಲೆಗೆ ಬಂದಿದೆ. ಯಾರೋ ಉಪ್ಪಾರ ಜನಾಂಗದ ಸಮಾವೇಶಕ್ಕೆ ಹೋಗಿ ಬಂದವರು ಉಪ್ಪಾರ ಜನಾಂಗಕ್ಕೆ ಪ್ರಾತಿನಿಧ್ಯ ನೀಡಲು ಹೇಳಿದ್ದಾರೆ. ಪಾರ್ಟಿಯಲ್ಲಿನ ಉಪ್ಪಾರ ನಾಯಕರಿಗಾಗಿ



ನೀರಾವರಿ


ಹುಡುಕಾಡಿದ ದೇವೇಗೌಡರಿಗೆ ಸಿಕ್ಕಿದ್ದು ಹುಬ್ಬಳ್ಳಿಯ ಲಕ್ಷ್ಮಣ ಉಪ್ಪಾರ ಎಂಬ ಏಕೈಕ ವ್ಯಕ್ತಿ! ಲಕ್ಷ್ಮಣ ಉಪ್ಪಾರನೂ ಅಷ್ಟು ತೂಕವಿಲ್ಲದ ವ್ಯಕ್ತಿ ಎಂದೆನಿಸಿದೆ ಗೌಡರಿಗೆ. ಉಪ್ಪಾರ ಜನಾಂಗದ ಸಮಾವೇಶದಲ್ಲಿ ಮಿಂಚಿದ್ದ ಎಚ್.ಸಿ. ನೀರಾವರಿ ಎಂಬ ನಿವೃತ್ತ ಅಧಿಕಾರಿಯ ಬಗ್ಗೆ ಮತ್ಯಾರೋ ಗೌಡರಿಗೆ ಹೇಳಿದ್ದಾರೆ. ಮಧ್ಯರಾತ್ರಿ ಹೊತ್ತಿನಲ್ಲಿ ಎಚ್.ಸಿ. ನೀರಾವರಿಯವರ ಮನೆಗೆ ಬಂದ ಗೌಡರ ದೂತರು ಎಂಎಲ್‌ಸಿ ಪಟ್ಟದ ಕುರಿತು ಹೇಳಿದ್ದೇ ತಡ ಎಚ್.ಸಿ. ನೀರಾವರಿಗೆ ಅತ್ಯಾಶ್ಚರ್ಯ ಮತ್ತು ಅತ್ಯಾನಂದವಾಗದೇ ಇರುತ್ತಾ?

ಪೊಯ್ಸಳಯವರ ನಿಷ್ಠ ಅಧಿಕಾರಿಯಾಗಿ ಸೇವೆ ಸಲ್ಲಿಸಿ ನಿವೃತ್ತರಾದ ನೀರಾವರಿ ಸದಾ ಕಾಂಗ್ರೈಗೆ ನಿಷ್ಠರಾಗಿದ್ದುಕೊಂಡು ಬಂದವರೇ! ಇಂತಹ ನೀರಾವರಿಗೆ ಗೌಡರು ಆದ್ಯತೆ ನೀಡಿದ್ದರ ಹಿಂದಿನ ಗುಟ್ಟೇನು?

V R ಫಾರ್ ಸುದರ್ಶನ್!

ನಮ್ಮ ರಾಜಕೀಯ ಪಕ್ಷಗಳ ನಾಯಕರಿಗೆ ಅದೇನು ಗ್ರಹಣ ಹಿಡಿದಿದೆಯೋ? ಮೊನ್ನೆ ನಡೆದ ಎಂಎಲ್‌ಸಿ ಚುನಾವಣೆಯಲ್ಲಿ ಸಿದ್ಧರಾಮಯ್ಯನವರ ಎಐಪಿಜೆಡಿ ಬಣದ 9 ಮತಗಳು ಕಾಂಗ್ರೆಸ್‌ಗೆ ಸಲ್ಲುವುದರ ಮೂಲಕ ಕಾಂಗ್ರೆಸ್‌ನ ನಾಲ್ಕನೇ ಅಭ್ಯರ್ಥಿಯಾಗಿ ವಿ.ಆರ್. ಸುದರ್ಶನ್ ಆಯ್ಕೆಯಾಗಿಬಿಟ್ಟಿದ್ದಾರೆ.

ದೇವೇಗೌಡ ಮತ್ತು ಕುಮಾರಸ್ವಾಮಿಗಳ 'ವಿಪ್' ಎಂಬ ಬಚ್ಚೆ ಹಾವಿಗೆ ಹೆದರದೇ ಒಂಭತ್ತು ಜೆಡಿ(ಎಸ್) ಸದಸ್ಯರು (ವಿಧಾನಸೌಧದ ಹೊರಗೆ ಎಐಪಿಜೆಡಿ ಸದಸ್ಯರು!) ಕಾಂಗ್ರೆಸ್ ಬೆಂಬಲಿಸಿದ್ದು, ದೇವೇಗೌಡ ಮತ್ತು ಪುತ್ರರ ಅಹಂಗೆ ಪೆಟ್ಟು ನೀಡಿದ್ದಂತೂ ಸತ್ಯವೇ. ಆದರೆ ಇದನ್ನೇ ದಿಗ್ವಿಜಯ ಎಂಬಂತಾಡುತ್ತಿರುವ ಸಿದ್ಧರಾಮಯ್ಯನವರು ಸಾಧಿಸಿದ್ದಾದರೂ ಏನು ಎಂಬ ಪ್ರಶ್ನೆ ಉದ್ಭವಿಸುತ್ತದೆ. 2004 ರ ಜನಾದೇಶ ಕಾಂಗ್ರೆಸ್ ಪಕ್ಷದ ವಿರುದ್ಧವಿದ್ದಿದ್ದರಿಂದಲೇ ಅಲ್ಲವೆ ಸಿದ್ಧರಾಮಯ್ಯ ಮತ್ತಿತರರು ವಿಧಾನಸಭೆ ಪ್ರವೇಶಿಸಲು ಸಾಧ್ಯವಾಗಿದ್ದು? ಈಗ ಕಾಂಗ್ರೆಸ್‌ಗೆ ಸಹಕರಿಸಿ ಅದರ ಅಭ್ಯರ್ಥಿ ಗೆಲುವಿಗೆ ಸಹಾಯ ಮಾಡುವುದು 2004ರ ಜನಾದೇಶಕ್ಕೆ ವಿರುದ್ಧವಲ್ಲವೆ?



ಸುದರ್ಶನ್

2004 ರ ಜನಾದೇಶ ಉಲ್ಲಂಘಿಸಿ ಬಿಜೆಪಿಗಳ ಜೊತೆ ಸೇರಿ ಸರ್ಕಾರ ರಚಿಸಿದ 'ಹುಂಬ' ಕುಮಾರಸ್ವಾಮಿಯನ್ನು ವಿರೋಧಿಸುವ ನೈತಿಕ ಹಕ್ಕನ್ನು ಕಾಪಾಡಿಕೊಂಡು ಬರಲಾದರೂ ತಟಸ್ಥ ನಿಲುವು ತೆಗೆದುಕೊಳ್ಳಬಹುದಿತ್ತಲ್ಲವೆ ಸಿದ್ಧರಾಮಯ್ಯ & ಕಂಪನಿ?


ಒಂದು ಕಡೆ ಅಧಿಕೃತವಾಗಿ ಜೆಡಿ(ಎಸ್) ಸದಸ್ಯರಾಗಿರುವ ಸಂದಿಗ್ಧತೆ, ಇನ್ನೊಂದು ಕಡೆ ಕಾಂಗ್ರೆಸ್ ಒಳಕ್ಕೆ ಹೋಗಲು ಹಿಂಜರಿಕೆ...

ಇನ್ನೂ ವೇಳೆ ಇದೆ, ಅವಕಾಶ ಇದೆ, ಈಗಲಾದರೂ ಒಂದು ಸ್ಪಷ್ಟ ಕಾರ್ಯಕ್ರಮ ರೂಪಿಸಿ, ಕಾಂಗ್ರೈ, ಬಿಜೆಪಿ, ಜೆಡಿ(ಎಸ್)ಗಳ ವಿರುದ್ಧದ ಒಂದು ಹೊಸ ರಾಜಕೀಯ ಸಂಘರ್ಷ ಆರಂಭಿಸಬಹುದಲ್ಲ ಸಿದ್ಧರಾಮಯ್ಯನವರೇ?

ಜೆಡಿಎಸ್‌ನ ವಿಪ್ ವೀರರು

ಬಿಜೆಪಿ ಬ್ರದರ್ಸ್ ಸಹಾಯದಿಂದ 49 ಸದಸ್ಯರ ಜೆಡಿಎಸ್‌ಗೆ ಮೂರು ಎಂಎಲ್‌ಸಿಗಳಷ್ಟೇ ದಕ್ಕಲು ಸಾಧ್ಯ ಎಂಬ ಸತ್ಯ ಗೊತ್ತಿದ್ದೂ 4 ನೇ ಅಭ್ಯರ್ಥಿಯಾಗಿ ಅಮರನಾಥ ಶೆಟ್ಟಿಯನ್ನು ನಿಲ್ಲಿಸುವ ಧೈರ್ಯ ಮಾಡಿದ್ದು ಕುದುರೆ ವ್ಯಾಪಾರ ನಡೆಯುತ್ತದೆ ಎಂಬ ವಿಶ್ವಾಸದಿಂದಲೋ ಅಥವಾ ಸಿದ್ಧು ಬಣ ಜೆಡಿಎಸ್‌ಗೆ ಓಟು ಮಾಡುತ್ತದೆ ಎಂಬ ಭ್ರಮೆಯಿಂದಲೋ ಎಂಬುದಿನ್ನೂ ಗೊತ್ತಾಗದ ವಿಷಯ. ಮನಸ್ಸಿಗೆ ತೋಚಿದಾಗಲೆಲ್ಲ 'ವಿಪ್' ನೀಡುವ ಜಾಯಮಾನ ಬೆಳೆಸಿಕೊಳ್ಳುತ್ತಿರುವ ನಮ್ಮ ರಾಜಕೀಯ ಪಾರ್ಟಿಗಳಿಗೆ ಸಂವಿಧಾನದ ಪಾಠಗಳನ್ನು ಮತ್ತೊಮ್ಮೆ ಹೇಳಿಕೊಡಬೇಕೇನೋ?

ಸದನದ ಒಳಗೆ ನಿರ್ಣಯಗಳನ್ನು ತೆಗೆದುಕೊಳ್ಳುವಾಗಲಷ್ಟೇ 'ವಿಪ್' ಜಾರಿ ಮಾಡಿದರೆ ಅದಕ್ಕೆ ಅರ್ಥವಿರುತ್ತದೆ. ಸದನದ ವ್ಯಾಪ್ತಿಯಾಚೆಯ ಎಂಎಲ್‌ಸಿ ಚುನಾವಣೆಯಲ್ಲಿ ತಮ್ಮ ಸದಸ್ಯರಿಗೆ 'ವಿಪ್' ನೀಡಿ ಬೆದರಿಸುವ ಮೂಲಕ ದೇವೇಗೌಡ, ಕುಮಾರಸ್ವಾಮಿ, ಎಂ.ಪಿ. ಪ್ರಕಾಶ್‌ಗಳು ಹಾಸ್ಯಾಸ್ಪದರಾಗಿದ್ದಾರೆ. ಸಿದ್ಧು ಬಣದವರು ತಮ್ಮನ್ನು ಬೆಂಬಲಿಸುತ್ತಾರೆಂದು ಭ್ರಮೆ ಇರಿಸಿಕೊಳ್ಳುವುದನ್ನು ದೇವು & ಗ್ಯಾಂಗ್ ಈಗಲಾದರೂ ಮರೆಯುವುದು ಒಳ್ಳೆಯದೇನೋ?




ಟಿ.ಎನ್.ಸೀತಾರಾಮ್ ಎಂಬ 'ಸರ್ಪ'


ಅಲ್ಪಸಂಖ್ಯಾತರನ್ನು ಕಂಡರೆ ಸಾಕು ತನ್ನ ಹಿಂದೂತ್ವವಾದಿ ಲಾಠಿ ಬೀಸಲಾರಂಭಿಸುವ ಕಾರ್ಕಳದ ಚೆಡ್ಡಿ ಶಾಸಕ ಸುನೀಲ್ ಕುಮಾರ್‌ಗೂ, ನಟನೆಗೂ, ಟಿ.ಎನ್. ಸೀತಾರಾಮ್ ಎಂಬ 'ಸಮಾಜವಾದಿ' ನಿರ್ದೇಶಕರಿಗೂ ಎತ್ತಿಂದೆತ್ತಣ ಸಂಬಂಧ?

ಸಂಬಂಧವಿದೆ. ಅದೇನೆಂದರೆ ಸೀತಾರಾಮ್‌ರವರು ನಿರ್ದೇಶಿಸುತ್ತಿರುವ, ಮುಕ್ತಾಯವೇ ಇಲ್ಲದಂತಿರುವ 'ಮುಕ್ತ' ಧಾರಾವಾಹಿಯಲ್ಲಿ ಸುನೀಲ್ ಕುಮಾರ್ ಎಂಬ ಚೆಡ್ಡಿ ಚತುರ ರಾಜಕೀಯ ಪಕ್ಷವೊಂದರ ಯುವ ನಾಯಕನ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾನೆ.

ರಾಜಕಾರಣಿಗಳಿಗೆ ನಟನೆ ಬರಲ್ಲ ಎಂಬುದು ನಮ್ಮ ವಾದವಲ್ಲ.(ದೇವೇಗೌಡರ ಇತ್ತೀಚಿನ ಅತ್ಯದ್ಭುತ ನಟನೆಯನ್ನು ನಾವೆಲ್ಲ ನೋಡಿಲ್ಲವೇ?). ಅಥವಾ ರಾಜಕಾರಣಿಗಳಿಗೂ ನಟನೆಗೂ ಸಂಬಂಧ ಇಲ್ಲ ಎಂಬುದೂ ನಮ್ಮ ನಿಲುವಲ್ಲ. ಆದರೆ ಧರ್ಮದ ಹೆಸರಲ್ಲಿ ಕೋಮು ದ್ವೇಷವನ್ನು ಬಿತ್ತುವ, ಮೈಕ್ ಕಂಡರೆ ಮೈಮೇಲೆ ದೆವ್ವ ಹೊಕ್ಕಂತೆ ಎಗರಾಡುವ ಸುನೀಲ್ ಕುಮಾರನಂತಹ ಹಿಂದೂತ್ವವಾದಿಯನ್ನೇ ಆಯ್ಕೆ ಮಾಡಿಕೊಳ್ಳುವ ಜರೂರತ್ತೇನಿತ್ತು ಸೀತಾರಾಮ್‌ರವರಿಗೆ? ಈ ಪ್ರಶ್ನೆ ಏಕೆಂದರೆ ಸುನೀಲ್ ಕುಮಾರ್ ಓರ್ವ ಒಳ್ಳೆಯ ನಟ ಎಂಬುದಕ್ಕೆ ಯಾವ ಪುರಾವೆಗಳೂ ಇಲ್ಲ, ಅಥವಾ ಆತನೇ ಅನಿವಾರ್ಯ ಆಗಿದ್ದ ಎಂಬುದಕ್ಕೆ ನಮ್ಮ ರಾಜ್ಯದಲ್ಲಿ ನಟರ ಅಭಾವವೇನೂ ಇಲ್ಲ, ಆದರೂ ಸೀತಾರಾಮ್ ಆತನನ್ನೇ ರಾಜಕೀಯ ಪಕ್ಷದ ಯುವ ನಾಯಕನ ಪಾತ್ರಕ್ಕೆ ಆರಿಸುತ್ತಾರೆಂದರೆ, ಆ ಮೂಲಕ ಕೋಮುವಾದಿಯೊಬ್ಬನಿಗೆ ಪ್ರಚಾರ ನೀಡುತ್ತಾರೆಂದರೆ, ಸೀತಾರಾಮ್‌ಗೆ ಏನಾಗಿದೆ ಎಂದು ಪ್ರಶ್ನಿಸಲೇಬೇಕಿದೆ.



ಸುನೀಲ್ ಕುಮಾರ್



ಸೀತಾರಾಮ್

ಈಗಾಗಲೇ ಸೀತಾರಾಮ್‌ರವರ ಎಲ್ಲಾ ಧಾರಾವಾಹಿಗಳ ಪ್ರಮುಖ ಪಾತ್ರಗಳಲ್ಲಿ ನಟಿಸುವವರೆಲ್ಲಾ ಬ್ರಾಹ್ಮಣ ಜಾತಿಗೆ ಸೇರಿರುವವರೇ ಎಂಬುದು ಇಡೀ ರಾಜ್ಯಕ್ಕೆ ಗೊತ್ತಿದೆ. ಇದನ್ನು ಕಂಡೇ ಹಲವರು "ಸೀತಾರಾಮ್ ತಂಡದಲ್ಲಿ ಕಾರ್ ಡ್ರೈವರ್‌ಗಳೂ ಬ್ರಾಹ್ಮಣರೇ" ಎಂದು ಲೇವಡಿ ಮಾಡಿದ್ದೂ ಉಂಟು. ಅದು ಸುಳ್ಳೋ, ನಿಜವೋ ಅದು ಸೀತಾರಾಮ್‌ಗೆ ಬಿಟ್ಟಿದ್ದು. ಅದೆಲ್ಲ ಬದಿಗಿರಲಿ.

ವಿವಿಧ ವಲಯದ ಪ್ರಮುಖರನ್ನು ತಮ್ಮ ಧಾರಾವಾಹಿಗಳಿಗೆ ಆಯ್ಕೆ ಮಾಡುವುದು ಸೀತಾರಾಮ್ ಬಹಳ ವರ್ಷಗಳಿಂದ ಅನುಸರಿಸಿರುವ ಗಿಮಿಕ್. ತಮ್ಮ 'ಮನ್ವಂತರ' ಧಾರಾವಾಹಿಯಲ್ಲಿ ಮಾಜಿ ಜನತಾದಳ ಹಾಲಿ ಕಾಂಗ್ರೆಸ್ ನಾಯಕ ರಮೇಶ್‌ಕುಮಾರ್‌ರವರಿಗೆ ಮುಖ್ಯಮಂತ್ರಿಯ ಪಾತ್ರ ನೀಡಿದ್ದರು.

ರಮೇಶ್‌ಕುಮಾರ ಸೀತಾರಾಮ್‌ರಂತೆ ಕೋಲಾರ ಜಿಲ್ಲೆಯವರು ಎಂಬುದು ಇದಕ್ಕೆ ಒಂದು ಕಾರಣವಾದರೆ, ಅವರೂ ಬ್ರಾಹ್ಮಣ ಎಂಬುದು ಮತ್ತೊಂದು ಕಾರಣ ಎಂದು ಆಗ ಹಲವರು ನಟಿಕೆ ಮುರಿದಿದ್ದು ಉಂಟು.

ಈ ಆರೋಪದಿಂದ 'ಮುಕ್ತ'ರಾಗಲೆಂದೋ ಏನೋ ತಮ್ಮ 'ಮುಕ್ತ' ಧಾರಾವಾಹಿಯಲ್ಲಿ ಶರಣೆ ರಾಣಿ ಸತೀಶ್‌ಗೂ, ಸಾಹಿತಿ ಕೆ. ಮರುಳಸಿದ್ಧಪ್ಪನವರಿಗೂ ಜಡ್ಜ್ ಪಾತ್ರಗಳನ್ನು ನೀಡಿದ್ದರು. ಆನಂತರ ಅದೇ ಜಡ್ಜ್ ಚೇರಿನಲ್ಲಿ ಕುಂತ ಪತ್ರಕರ್ತ ರವಿ ಬೆಳಗೆರೆ ಕೂಡ ವಕೀಲ CSP (ಸೀತಾರಾಮ್)ಯ ಅಂತ್ಯಗೊಳ್ಳದ ವಾದ ವಿವಾದಗಳಿಂದ ಬೋರ್ ಹೊಡೆದು ಎದ್ದು ಹೋದರು. ಚೂಯಿಂಗ್‌ಗಮ್‌ನಂತೆ ಪ್ರತಿನಿತ್ಯ ಎಳೆದಾಡಿ, ಇತ್ತೀಚೆಗೆ ಸಂಪೂರ್ಣವಾಗಿ ಬೋರ್ ಹೊಡೆಸಲಾರಂಭಿಸಿರುವ 'ಮುಕ್ತ' ಇನ್ನೇನು ಮುಗಿಯುತ್ತೆ ಎಂದು ಭಾವಿಸಿರುವಾಗಲೇ ಅದಕ್ಕೆ ಇನ್ನೊಂದು ತಿರುವು ನೀಡಿ, ಸುನೀಲ್ ಕುಮಾರ್ ಎಂಬ ಚೆಡ್ಡಿಯನ್ನು ಸೇರಿಸಿಕೊಂಡು ಮುಂದುವರೆಸುತ್ತಿದ್ದಾರೆ.

ಕೋಮುವಾದಿ ಬಿಜೆಪಿ ಪಕ್ಷ ರಾಜ್ಯದಲ್ಲಿ ಅಧಿಕಾರಕ್ಕೆ ಬಂದ ನಂತರ ಇಡೀ ಕರಾವಳಿ ಪ್ರದೇಶದಲ್ಲಿ ಚೆಡ್ಡಿಗಳ ಅಟ್ಟಹಾಸ ಗಗನಕ್ಕೇರಿದೆ. ಈಗ ಇದು ಯಾವ ಹಂತ ತಲುಪಿದೆ ಎಂದರೆ ಅಲ್ಲಿ ಪ್ರತಿನಿತ್ಯ ಅಲ್ಪಸಂಖ್ಯಾತರ (ಕ್ರಿಶ್ಚಿಯನ್ ಮತ್ತು ಮುಸ್ಲಿಮ್) ಮೇಲೆ ಹಲ್ಲೆಗಳು ನಡೆಯುತ್ತಿವೆಯಲ್ಲದೆ ಕಳೆದ ವಾರ ಒಬ್ಬ ಹಿಂದೂವನ್ನೇ ಸಂಘ ಪರಿವಾರದ ನಾಯಕರು ಬಲಿ ತೆಗೆದು ಕೊಂದಿದ್ದಾರೆ. ಇಂತಹ ಕೊಲೆಗಡುಕರಿಗೆ ನೆರವು, ಪ್ರೋತ್ಸಾಹ, ನೈತಿಕ ಬೆಂಬಲ ನೀಡುವ ಸುನೀಲ್ ಕುಮಾರನಿಗೆ ಸೀತಾರಾಮ್ ತಮ್ಮ ಧಾರಾವಾಹಿಯಲ್ಲಿ ಪಾತ್ರ ಪ್ರಚಾರ ನೀಡುತ್ತಾರೆಂದರೆ.... ಸೀತಾರಾಮ್‌ರಂತಹ ಸರ್ಪಗಳಿಂದ ರಾಜ್ಯದ ಜನ ದೋಷಮುಕ್ತರಾಗಬೇಕಿದೆ ಎಂದೇ ಹೇಳಬೇಕಾಗುತ್ತದೆ. ●

ಸಿನಿಮಾ ಹುಚ್ಚಲ್ಲಿ ಸೋನಿಯಾ ಸಿಸ್ಟರು!



ಸೋನಿಯಾ ಗಾಂಧಿಗಂತೂ ಖಂಡಿತ ಸಿನಿಮಾ ಕ್ರೇಜ್ ಇಲ್ಲವೇ ಇಲ್ಲ, ಆದರೆ ಒಂದು ಚಲನಚಿತ್ರದ ಬಗ್ಗೆ ಸೋನಿಯಾಗೆ ತುಂಬಾ ಕುತೂಹಲ, ಚಡಪಡಿಕೆಗಳಿವೆ... ಸೋನಿಯಾ ಗಾಂಧಿ ಮೇಲೆ ಚಿತ್ರ ತಯಾರಿಸುತ್ತಿರುವ ಲಾಸ್ ಏಂಜಲಿಸ್‌ನ ಜಗಮೋಹನ್ ಮುಂಧ್ರಾ ಯಾವ ಪಾತ್ರಕ್ಕೆ ಯಾರನ್ನು ಆಯ್ಕೆ ಮಾಡಿದ, ಚಿತ್ರಕಥೆ ಹೇಗೆ ಮಾಡಿದ್ದಾನೆ ಎಂದೆಲ್ಲ ವಿಚಾರಿಸುತ್ತಲೇ ಇದ್ದಾರೆ ಸೋನಿಯಾ ಮೇಡಂ. ನಿರ್ಮಾಪಕ ಮುಂಧ್ರಾ ಮೋನಿಕಾ ಬೆಲ್ಲುಸ್ಸಿಯನ್ನು ಸೋನಿಯಾ ಪಾತ್ರಕ್ಕೆ, ಪೆರಿಜಾದ್ ಝೊರಾಬಿಯನ್‌ಳನ್ನು ಇಂದಿರಾ ಪಾತ್ರಕ್ಕೆ, ಬ್ರಿಟನ್ನಿನ ಝುಬಿನ್ ವರ್ಲಾನನ್ನು ರಾಜೀವ್ ಗಾಂಧಿ ಪಾತ್ರಕ್ಕೆ ಹಾಗೂ ಸಂಜಯ ಖಾನ್ ಪುತ್ರ ಝಾಯೇದ್ ಖಾನ್‌ನನ್ನು ಸಂಜಯ ಗಾಂಧಿ ಪಾತ್ರಕ್ಕೆ ಆಯ್ಕೆ ಮಾಡಿದ್ದಾನೆ.

ಆದರೆ ಸೋನಿಯಾಗೆ ತನ್ನ ಪಾತ್ರವನ್ನು ಅದ್ಹೇಗೆ ನಿರೂಪಿಸುತ್ತಾರೋ ಏನೋ ಎಂಬ ಭಯವಂತೆ... ಕಮರ್ಷಿಯಲ್ ಚಿತ್ರವಾದ್ದರಿಂದ ತನ್ನ ಪಾತ್ರ ವಿರೂಪಗೊಳ್ಳುವ ಸಾಧ್ಯತೆಗಳಿವೆ ಎಂದುಕೊಂಡು ತುಂಬಾ ಕಾಳಜಿ ವಹಿಸಿ ಎಲ್ಲವನ್ನೂ ಗಮನಿಸುತ್ತಿದ್ದಾರಂತೆ.

ಕಾಂಗ್ರೆಸ್‌ನ ಹಿರಿಯ ನಾಯಕರು "ಹಾಗೇನಾದರೂ ಆದರೆ ನೀವು ಏನೂ ಮಾಡಲಾಗುವುದಿಲ್ಲ, ಇಂದಿರಾ ಗಾಂಧಿ ಕುರಿತು ಬಂದ ಚಿತ್ರಕ್ಕೆ ಕೆಲವು ಆಕ್ಷೇಪಗಳಿದ್ದರೂ ಸೆನ್ಸಾರ್ ಗ್ರೀನ್ ಸಿಗ್ನಲ್ ನೀಡಿತ್ತು" ಎಂದು ಸೋನಿಯಾಗೆ ಹೇಳುತ್ತಿದ್ದಾರೆ.

ಮುಂಧ್ರಾ ಪ್ರಕಾರ ಇದೊಂದು ಲವ್‌ಸ್ಟೋರಿಯಂತೆ! ಯುವತಿಯಾಗಿದ್ದಾಗ ರಾಜೀವ್ ಪ್ರೇಮದ ಕಾರಣಕ್ಕಾಗಿ ಭಾರತಕ್ಕೆ ಬರುವ ಸೋನಿಯಾ, ನಂತರ ದೇಶ ಪ್ರೇಮಕ್ಕಾಗಿ ಇಲ್ಲಿ ನೆಲೆಯೂರುತ್ತಾಳೆ ಎಂಬರ್ಥದ ಕಥೆಯಂತೆ!


-ಮಲ್ಲಿ

ನಾವು ಅಮರನಾಥಶೆಟ್ಟಿ ನಿಲ್ಲಿಸಿದ್ದು ತಮಾಷೆಗೆ ಕಂಡ್ರಿ!

ಥೂತ್ತೇರಿ

ವಿ.ಆರ್. ಸುದರ್ಶನ್ ಎಂಬ ತಬ್ಬಲಿ ರಾಜಕಾರಣಿಯನ್ನು ಬಲಿಷ್ಠ ರಾಜಕಾರಣಿಗಳು ಕೈ ಹಿಡಿದು ಮೇಲೆತ್ತುತ್ತ ಬರುತ್ತಿರಬೇಕಾದರೆ, ಕರ್ನಾಟಕದಲ್ಲಿ ಅಂಥ ಯುಗ ಸೃಷ್ಟಿಸಲು ಹಗಲು ರಾತ್ರಿ ಹೆಣಗುತ್ತಿರುವ ಅಪ್ಪ ಮಕ್ಕಳು ಅವರನ್ನು ಶತಾಯಗತಾಯ ಸೋಲಿಸಲು ಯತ್ನಿಸಿದರಂತಲ್ಲಾ. ಅಪ್ಪ-ಮಗನ ತಂತ್ರಗಾರಿಕೆಯನ್ನು ಮೊಟ್ಟ ಮೊದಲ ಬಾರಿಗೆ ಮೂದಲಿಸಿದ ಧರ್ಮಸಿಂಗ್ "ನಾವು ದೇವೇಗೌಡನ ಅಪ್ಪನ ರಾಜಕೀಯ ಮಾಡ್ತಿವಿರಿ" ಎಂದರಂತಲ್ಲಾ, ಧರ್ಮಸಿಂಗರ ಈ ಅಭಿಪ್ರಾಯದಿಂದ ಬೆಚ್ಚಬಿದ್ದ ಪುಟ್ಟಸ್ವಾಮಿ ಗೌಡ "ರೀ ಸ್ವಾಮಿ, ದೇವೇಗೌಡನ ಅಪ್ಪನ ರಾಜಕಾರಣ ಮಾಡಕ್ಕೋದಿರ. ಅವರಪ್ಪ ಪಡುವಲ ಹಿಪ್ಪೆ ಅತ್ರ ಹೊಲ ಹುತ್ತು ಹೆಂಡತಿ ತಂದುಕೊಟ್ಟ ತಂಗಳ ಮುದ್ದೆ ತಿಂದು ಹೊಂಗೆ ಮರದ ನೆರಳಲ್ಲಿ ಮಲಗುತ್ತಿದ್ದ, ಇನ್ನೆಲ್ಲಾ ಜವಾಬ್ದಾರಿನೂ ಅವನೆಂಡ್ತಿ ಅಂದ್ರೆ ದ್ಯಾವೇಗೌಡನವ್ವ ನೋಡಿಕೊತಿದ್ದು ಗೊತ್ತೆ?" ಎಂದರಂತಲ್ಲಾ, ಥೂತ್ತೇರಿ!

* * * * * * * * *



ಪ್ರಮೋದ್ ಮುತಾಲಿಕ್ ಎಂಬುವನ ತಲೆ ಪೂರಾ ಕೆಟ್ಟುಹೋಗಿದೆಯೆಂದೂ, ಇನ್ನು ಅದರ ರಿಪೇರಿ ಸಾಧ್ಯವಿಲ್ಲವೆಂದೂ ಈ ತುದಿಯಿಂದ ಸಾಬರು, ಆ ತುದಿಯಿಂದ ಬಜೆಪಿಗಳು ಕೂಗುತ್ತಿದ್ದಾರಂತಲ್ಲಾ, ಯಾಕೆ ಇಂತಹ ಒಕ್ಕೊರಲ ಕೂಗು ಎಂದು ವಿಚಾರಿಸಿದರೆ "ಟಿಪ್ಪು ದೇಶದ್ರೋಹಿ, ಹಿಂದೂ ದ್ರೋಹಿ, ದೇವಸ್ಥಾನ ದ್ರೋಹಿ, ಪೂಜಾರಿಗಳ ವೈರಿ" ಎಂದು ಕೂಗುತ್ತಿರುವ ಮುತಾಲಿಕ್ ಅದೇ ಸಮಯದಲ್ಲಿ "ಬಜೆಪಿಯೂ ಹಿಂದೂ ದ್ರೋಹಿ, ಮಂದಿರ ದ್ರೋಹಿ, ಮುತಾಲಿಕ್ ದ್ರೋಹಿ" ಎಂದು ಬೊಬ್ಬೆ ಹಾಕುತ್ತಿದ್ದಾನಂತಲ್ಲಾ, "ಹಾಗಾದರೆ ಕಾಂಗ್ರೆಸ್‌ನವರು ಪರವಾಗಿಲ್ಲವೆ?" ಎಂದು ಕೇಳಿದರೆ, "ಅವರು ಹುಟ್ಟಾ ದೇಶದ್ರೋಹಿಗಳು. ಇವತ್ತಿನ ಈ ಸ್ಥಿತಿಗೆ ಅವರೇ ಕಾರಣ" ಎಂದನಂತಲ್ಲಾ, "ಹಾಗಾದರೆ ಎಡಪಕ್ಷಗಳು?" ಎನ್ನುತ್ತಿದ್ದಂತೆಯೇ "ಅವರ ಹುಟ್ಟಡಗಿಸಬೇಕು" ಎಂದು ಕೆಂಡಮಂಡಲವಾದ ಮುತಾಲಿಕ್ "ದೇಶವೆಂದರೆ ನಾವು, ನಾವೂ ಅಂದರೆ ಹಿಂದೂ ದೇಶ. ನಾವು ಬರುತ್ತೇವೆ. ಬಂದೇ ಬರುತ್ತೇವೆ. ಬಂದ ಕೂಡಲೇ ಗೋಹತ್ಯೆ ನಿಷೇಧಿಸುತ್ತೇವೆ. ನಂತರ ಸತಿ ಪದ್ಧತಿಯನ್ನು ಪ್ರೋತ್ಸಾಹಿಸುತ್ತೇವೆ. ಹಿಂದೂಗಳ ಹತ್ಯೆ ನಿಶಿದ್ಧಗೊಳಿಸುತ್ತೇವೆ. ನಂತರ ಪರಿಶುದ್ಧ ಹಿಂದೂಸ್ತಾನ್ ನಿರ್ಮಿಸುತ್ತೇವೆ" ಎಂದು ಬಡಬಡಿಸುತ್ತಾ ಹೊರಟನಂತಲ್ಲಾ, ಮುತಾಲಿಕ್‌ನನ್ನು ನೋಡಿದ ಬಜೆಪಿ ಹೈದರು ಆತನಿಗೆ ಶ್ರಾದ್ಧ ಮಾಡಿಬಿಡುವ ಬಗ್ಗೆ ಚರ್ಚೆ ಮಾಡುತ್ತಿದ್ದಾರಂತಲ್ಲಾ, ಥೂತ್ತೇರಿ!!!

* * * * * * * * *

"ಅಗ್ರಹಾರ ಕೃಷ್ಣಮೂರ್ತಿ ಕಡೆಗೂ ಗೆದ್ದಿದ್ದಾರೆ. ಇನ್ನೇನು ಕೇಂದ್ರ ಸಾಹಿತ್ಯ ಅಕಾಡೆಮಿ ಕಾರ್ಯದರ್ಶಿಯಾಗುತ್ತಾರೆ. ಅವರ ದೆಸೆಯಿಂದ ಜಗಳವಾಡಿಕೊಂಡಿದ್ದ ಕನ್ನಡ ಸಾಹಿತಿಗಳು ಇನ್ನಾದರೂ ಹಾವು, ಚೇಳು ಆಡಿಸಿಕೊಂಡು ಸುಮ್ಮನಿರಬಲ್ಲರು" ಎಂದು ನಿಟ್ಟುಸಿರು ಬಿಡುತ್ತಿರುವಾಗಲೇ, ಮರೆತೇ ಹೋಗಿದ್ದ ರಾಮಚಂದ್ರ ದೇವ ಎಂಬ ಸಾಯಿತಿ "ನನ್ನ ಹ್ಯಾಮ್ಲೆಟ್ ಅನುವಾದವನ್ನು ಪ್ರಸನ್ನ ಕದ್ದು ನಾಟಕವಾಡುತ್ತಿದ್ದಾರೆ" ಎಂದು ಬೊಬ್ಬೆ ಹಾಕತೊಡಗಿದ್ದಾನಂತಲ್ಲಾ.

ಇದರಿಂದ ಒಂದಿಷ್ಟೂ ವಿಚಲಿತರಾಗದ ಪ್ರಸನ್ನ ಮಾಲತಿ ಕಡೆಯವರನ್ನು ಪರಿಗಣಿಸಿದಂತೆ ಸುಮ್ಮನಿರಲಾಗಿ ಅನುಮಾನಗಳು ದೇವನ ಕಡೆಗೇ ತಿರುಗುತ್ತಿವೆಯಂತಲ್ಲಾ. ಈ ದೇವ ಹಿಂದೊಮ್ಮೆ ಲಂಕೇಶ್ ಬರೆದ 'ಗುಬ್ಬಚ್ಚಿ ಗೂಡು' ನನ್ನದೇ ಎಂದಿದ್ದ. ಆಗ ಲಂಕೇಶರ ಅಂಗರಕ್ಷಕರು ಕರಾರುವಾಕ್ಕಾದ ಉತ್ತರ ಕೊಟ್ಟ ನಂತರ ತೆಪ್ಪಗಾಗಿದ್ದನಂತಲ್ಲಾ.


ಈಗ ದೇವನ ಆರೋಪಕ್ಕೆ ಉತ್ತರವಾಗಿ ಹಲವಾರು ಜನ ಹವ್ಯಕರು "ಹ್ಯಾಮ್ಲೆಟ್ ದೇವನ ಕೃತಿಯಲ್ಲ, ಅನುವಾದ ಕೃತಿ. ದೇವ ಪ್ರಸನ್ನ ಒಂದೇ ಮೂಲದಿಂದ ಬಂದವರಾದ್ದರಿಂದ ಅನುವಾದದ ಭಾಷೆ, ಭಾವ, ಶಿಲ್ಪದಲ್ಲಿ ಸಾಮ್ಯತೆಯಿದ್ದರೆ ಅದು ಶೇಕ್ಸ್‌ಪಿಯರ್‌ನದೇ ತಪ್ಪು, ನಮ್ಮ ಹುಡುಗರದಲ್ಲಾ" ಎಂದು ನಕ್ಕ ಎರಿಸಿದರಂತಲ್ಲಾ, ಥೂ ಥೂ ಥೂತ್ತೇರಿ!!!

ಅವರಿವರ ಬೆಂಬಲದಿಂದಾಗಿ ಅಂತೂ ಸುದರ್ಶನ ಗೆದ್ದ ಖುಷಿಯಲ್ಲಿರುವ ಧರ್ಮಸಿಂಗ್ ಸಾಧ್ಯವಾದಷ್ಟೂ ದೇವೇಗೌಡನ ಅಪ್ಪನ ಮುಖಭಾವದೊಂದಿಗೆ ವರ್ತಿಸಲು ಹೆಣಗುತ್ತಿರುವುದನ್ನು ನೋಡಿದ ಕುಮಾರಸ್ವಾಮಿ "ನಾವು ಅಮರನಾಥ ಶೆಟ್ಟನ ಸುಮ್ಮನೆ ತಮಾಸೆಗೆ ನಿಲ್ಸಿದ್ದೊ ಕಂಡ್ರಿ. ಅದಕ್ಕೆ ಇವರು ಸೀರಿಯಸ್ಸಾಗೆ ಸುದರ್ಶನ್ ನಿಲ್ಲಿಸಿ ಬಿಡೋದೆ? ನಿಲ್ಸೊ ಮುನ್ನ ಅವ್ರುರೆಲ್ಲಾ ಬಂದು ನನ್ನನ್ನ ಒಂದು ಮಾತು ಕೇಳೋದು ಬೇಡವೇ? ಮುಖ್ಯಮಂತ್ರಿಯಾಗಿ ನಾನ್ಯಾಕಿರದಿಲ್ಲಿ? ಅಷ್ಟಕ್ಕೂ ನಾವು ತಮಾಸೆಗಾಗಿ ಸ್ಪರ್ಧೆ ಮಾಡಿದ್ದರಿಂದ ಸೋತು ಹೋದದ್ದು ಅವಮಾನವಾಗಿಲ್ಲ, ನಮಗೆ ಎಷ್ಟು ಜನ ಶಾಸಕರ ಬೆಂಬಲ ಇದೆ ಅನ್ನುವುದು ಖಚಿತವಾಗಿ ಗೊತ್ತಾಗಬೇಕಿತ್ತು, ಈಗ 148 ಜನ ಶಾಸಕರು ನಮ್ಮೊಟ್ಟಿಗಿದ್ದಾರೆ. ನಮಗೆ ಇದೇ ಬೇಕಿದ್ದುದ್ದು. ಇನ್ನು ಮುಂದೆ ಈ 148 ನ್ನು 200ರವರೆಗೂ ಏರಿಸಿಕೊಂಡು ಹೋಗ್ತೀವಿ" ಎಂದರಂತಲ್ಲಾ, "ಅಷ್ಟು ಸಂಖ್ಯೆಯನ್ನು ಹೇಗೆ ಸಂಗ್ರಹಿಸಬಲ್ಲಿರಿ?" ಎಂದು ಪತ್ರಕರ್ತ ಕೇಳಲಾಗಿ "ನೀವೇ ನೋಡ್ತಾಯಿರಿ. ಮುಂದಿನ ಪರದೆಯಂತೂ ಖಾಲಿಯಿದೆ. ಆದರೂ ನಾವು ಹಣಬಲ, ಅಧಿಕಾರದ ಬಲ ಮತ್ತು ತೋಳ್ಬಲವಿಲ್ಲದೆ ಶಾಸಕರನ್ನು ಕ್ರಯಿಸ್ತೀವಿ" ಎಂದರಂತಲ್ಲಾ, ಥೂತ್ತೇರಿ!!!

* * * * * * * * *

-ಯಾಮೂ

ಬಿಜೆಪಿ ವಿಮಲಾಗೌಡ ನಿನಗೆ ಸೊಸೆ ಆಗಬೇಕು ದ್ವಡಪ್ಪ!



ಮುಂಗಾರು ಮಳೆ ಎಲ್ಲಾ ಆತಂಕವನ್ನು ನಿವಾರಿಸಿದ್ದರಿಂದ ಕಾಳಮಾವನ ಮುಖದಲ್ಲಿ ಸಮಾಧಾನ ಕುಳಿದಾಡುತ್ತಿತ್ತು, ಆಗ ಜುಮ್ಮಿ,

"ಇದ್ಯಾವ ಮಳೆ ಮಾವ?" ಎಂದಳು.

"ರೋಯಿಣಿ ಮಳೆ ಇರ ಬೇಕು ಕಂಡ್ಯ ಇದು."

"ಮಂಗಳೂರು ಕಡಿಕೆ ಚೆನ್ನಾಗಿ ಚಚ್ಚದಂತೆ?" ಎಂದ ಸೀರ.

"ಚಚ್ಚದೇನು ಸಮುದ್ರ ಉಕ್ಕಿ ಬಂದು ದಡದಲ್ಲಿದ್ದ ಮನೆ ಗ್ವಾಡೆನ್ನೆಲ್ಲ ತಗಂಡೋಗ್ಯದಂತೆ" ಎಂದ ಉಗ್ರಿ.

"ಅದ್ಯಾಕ್ ಸಮುದ್ರಗಂಟ ಹೋಗಬೇಕು ಆನಿಸಿ ಗಂಡು? ಇರಬೇಕಾದೋಟು ದೂರದಲ್ಲಿ ಇದ್ದರಾಗದೆ" ಎಂದ ಕಾಳಮಾವ.

"ಜನಗಳಿಗೆ ಯಾವನಾರ ಹೇಳಕ್ಯಾದತೆ ಮಾವ, ಅವುರ್‍ಯಾವತ್ತೂ ಅಂಗೆಯ. ಹಳ್ಳದ್ದಡದಲ್ಲಿ ಮನೆಕಟ್ಟದು, ಸಮುದ್ರದತ್ತುಕೆ ಹೋಗಿ ಗುಡುಸ್ಲಾಕದು, ಮಳೆ ಬಂದು ಚಚ್ಚದಾಗ ಬಾಯಿಬಡಕಳದು, ಇವುರೊಡೋಗಿ ಪರಿಯಾರ ಕೊಡದು, ಇದು ಕಾಲದಿಂದ ನ್ಯಡಕಂಡು ಬಂದದೆ" ಎಂದ ಉಗ್ರಿ.

"ಆಗ್ಲೆ ಕುಮಾರಸ್ವಾಮಿ ಅಲ್ಲಿಗ್ಯಲ್ಲ ಹೋಗಿದ್ದನಂತೆ" ಎಂದಳು ಜುಮ್ಮಿ.

"ಅವುರಪ್ಪ ಕೊತಗಂಡು ಕ್ಯಲಸ ಮಾಡು ಅಂದ್ರು ಅಲ್ಯಲ್ಲ ತಿರುಗ್ತಯಿದ್ದನವನು?" ಎಂದ ಕಾಳಮಾವ.

"ತಿರುಗ್ದೆ ಯಿನ್ನೇನು ಮಾಡ್ತನೆ ಮಾವ, ಪಾಪ ಕೂತಗಂಡು ಕ್ಯಲಸ ಮಾಡಿ ಗೊತ್ತಿಲ್ಲ. ಅದರಲ್ಲೂ ಪೈಲು ನೋಡಿ ಟಿಪ್ಪಣಿ ಬರಿಬೇಕು, ಟಿಪ್ಪಣಿ ಯಂಗೆ ಬರಿಬೇಕು ಅಂತನೂ ಗೊತ್ತಿಲವೇನೊ. ಆದಕಿಂತ ಬಸ್ಸು ಮಾಡಿಕಂಡು ತಿರಗಿದ್ರೆ ಕರ್ನಾಟಕ ನೋಡಿದಂಗೂ ಆಯ್ತು, ಮುಖ್ಯಮಂತ್ರಿ ನಾನು ಅಂತ ಬೀಗಿದಂಗೂ ಆಯ್ತು, ಅದ್ಕೆ ಕುಮಾರ ಕುತಗಂಡು ಕ್ಯಲಸ ಮಾಡ್ದೆ ತಿರುಗ್ತ ಅವುನೆ."

"ಅಂಗರೆ ಕುಮಾರಸ್ವಾಮಿ ಬಸ್ಸಲ್ಲೋದನೇನ್ಲ?"

"ಊ ಕಣೆ, ಅದೇನೊ ಬಸ್ಸಿಡುದುಬುಟ್ಟವುನೆ, ಯಾಕೆ ಅಂತಿಯಾ? ಯಾವತ್ತವುನು ಯಮ್ಮೆಲ್ಲೆನ್ಯಲ್ಲ ಬಸ್ಸಿಗೆ ತುಂಬಿಕಂಡು ಕರಕಂಡೋಗಿ ಕರಕಂಡು ಬಂದು ಮುಖ್ಯಮಂತ್ರಿಯಾದ್ನೊ ಅವತ್ತಿಂದ ಬಸ್ಸಿಡದವುನೆ."

"ಅದು ವಳ್ಳೆದೆ ಬುಡು. ಆ ಜಾಗದ ಎಮ್ಮೆಲ್ಲೆ ಅಧಿಕಾರಿಗಳನ್ನೆಲ್ಲ ತುಂಬಿಕಂಡು ಹೋಗಬವುದು" ಎಂದು ಕಾಳಮಾವ, ಕುಮಾರಸ್ವಾಮಿ ಆಡಳಿತ ವೈಖರಿಯನ್ನು ಸಮರ್ಥಿಸಿಕೊಂಡ.

"ಈ ಬಿಜೆಪಿ ಆಪೀಸ್ ಮ್ಯಾಲೆ ಸಾಬರು ಬಾಂಬಾಕಿ ದ್ದರಂತೆ ನಿಜವೇನ್ಲ ಉಗ್ರಿ" ಎಂದ ಸೀರ.

"ಬಿಜೆಪಿ ಆಪೀಸಲ್ಲ ಕಣೊ, ಆರೆಸೆಸ್ ಆಪೀಸ್ ಮ್ಯಾಲೆ ಬಾಂಬಾಕಕ್ಕೇ ಅಂತ ಹೋಗಿದ್ರಂತೆ, ಪೋಲೀಸ್ ನೋರು ಪತ್ತೆ ಮಾಡಿ ಸಾಯಿಸಿದರಂತೆ."

"ಆ ಸಾಬರಿಗೆ ತಿಗಮುಚಗಂಡಿರಕ್ಕೇನಾಗ್ಯದೆ?" ಎಂದ ಕಾಳಮಾವ.

"ಇವುರು ಉಗ್ರಗಾಮಿಗಳು ಕಣಮಾವ, ಆ ಲ್ಯಾಡನ್ ಕಡಿಯೋರಂತೆ. ಆ ನನಮಕ್ಕಳು ಸಾಯಕ್ಕೆ ತಯಾರಾಗ್ಯವುರೆ ಏನು ಮಾಡೀ?"

"ಅಂಥೋರನ್ನೆಲ್ಲ ಸಾಬರೆ ಗುರುತಿಡುದು ಹಿಡಿದುಕೊಡಕ್ಯಾಗದೆ?"

"ಅದು ನೀನೇಳವಷ್ಟು ಸುಲಬನೇ?"

"ಲೈ ಮನಸು ಮಾಡಿದ್ರೆ ಯಲ್ಲ ಆಯ್ತದೆ ಕಂಡ್ಯ. ನಮ್ಮೂರಲ್ಲೊಬ್ಬ ಕಳ್ಳವುನೆ ಅಂದ್ರೆ ನಮಿಗೊತ್ತಾಗದಿಲವೆ. ಅಂಥ ನನಮಗನ್ನ ಹಿಡಿದುಕೊಟ್ರಾಯ್ತು. ಅಂಗೆ ಸಾಬರ್‍ಯಲ್ಲ ಮನುಸು ಮಾಡ್ಬಿ ಗಲಾಟೆ ಇರದಿಲ್ಲ ನೋಡು" ಎಂದು ಕಾಳಮಾವ ಉಗ್ರಗಾಮಿಗಳ ಹುಟ್ಟಡಗಿಸುವ ಸಂಚನ್ನು ಹೇಳಿಕೊಡುತ್ತಿರುವಾಗ ಇದನ್ನು ಕೇಳಿಸಿಕೊಂಡು ಬಂದ ವಾಟಿಸ್ಸೆ.

"ನಮ್ಮ ದ್ವಡಪ್ಪನ ಸಜೇಶನ್ ತಗಬವುದು, ಆದ್ರೆ ಸೀಕ್ರೆಟ್ ಬುಟ್ಟು ಕೊಟ್ಟ ಸಾಬರ ಮನೆ ಉಳಿದತೆ ದ್ವಡಪ್ಪ?"

"ಬ್ಯಾಡ ಮಸೀದಿ ಮುಖಂಡ್ರೆ ಹಿಡಿದುಕೊಡ್ಲಿ."

"ಆಗ ಮಸೀದಿಗೇ ಬಾಂಬಾಕ್ತರೆ."

"ಅಂಗಂತಿಯಾ?"

"ಊ ದ್ವಡಪ್ಪ, ಈ ಬಿಜೆಪಿಗಳು ಬಾಬ್ರಿ ಮಸೀದಿ ಕೆಡವಿದ್ರು, ಬಾಬ್ರಿ ಮಸೀದಿ ಕೆಡವಿದ್ರು ಅಂತ ಹತ್ತೊರ ಸದಿಂದ ಕೂಗ್ತಳೆ ಈ ಕಾಂಗ್ರೆಸ್‌ಗಳು. ಆದ್ರೆ ಸಾಬ್ರೆ ಮಸೀದಿ ಮ್ಯಾಲೆ ಮೂರು ನಾಕು ಸತಿ ಬಾಂಬಾಕಿ ಸಾಬರನ್ನೆ ಕೊಂದ್ರು ಗೊತ್ತೆ?"

"ಥೂ ಅದ್ಯಾವ ಸೀಮೆ ತಲೆಕೆಟ್ಟ ಜನಾಂಗನ್ಲ ಅದು?"

"ತಲೆ ಕೆಟ್ಟೋರೆ ಮತ್ತೆ, ತಲೆ ನ್ಯಟ್ಟಗಿದ್ರೆ ಆರೆಸೆಸ್ ಆಪೀಸತ್ರಕೊಯಿತ್ತಿದ್ರೆ? ಅದಾಳಬಿದ್ದೊಗ್ಲಿ ದ್ವಡಪ್ಪ ಯಲಕ್ಷನ್ ರಿಜಲ್ಟು ಕೇಳಿದಾ?" ಎಂದ ವಾಟಿಸ್ಸೆ.

"ಯಾವ ಯಲಕ್ಷನ್ನಾ?"

"ವಿಧಾನಸಭೆಯಿಂದ ವಿಧಾನ ಪರಿಷತ್ತಿಗೆ ಯಲಕ್ಷನ್ ನ್ಯಡಿತದೆ ದ್ವಡಪ್ಪ, ಯಮ್ಮೆಲ್ಲೆಗಳೆಲ್ಲಾ ಸೇರಿ ಎಮ್ಮೆಲ್ಸಿ ಆರಿಸಿ ಕಳುಸ್ತರೆ. ಆದರಲ್ಲಿ ನಮ್ಮ ತಾಲೋಕಿನೊಳೆ ಒಬ್ಬಳು ಗೆದ್ದವುಳೆ. ಹುಡುಕಿದ್ರೆ ನಿನಿಗೆ ಸೊಸೆ ಆಗಬೇಕೇನೋ?"

"ಅವುಳ್ಯಾರ್ಲ ನಾನು ಕಾಣದಂಗೆ ನನ್ನ ಸೊಸೆ?"

"ವಿಮಲಾಗೌಡ ಅಂತ ವಳ್ಳೆ ಯದಿಗಾರೆಣ್ಣು ಏನು ಮಾಡ್ತಿ ಬಿಜೆಪಿಲವುಳೆ ದ್ವಡಪ್ಪ"

"ಎಲ್ಯಾರ ಇರ್ಲಿ ಗೆದ್ದವುಳಲ್ಲ ಬುಡು. ಸಮಂದ ಬುಟ್ಟೋದತೇ, ಹೆಂಗುಸ್ರು ಯಾವ ಪಾರ್ಟಿಲಿದ್ರೇನು ಅವುರೇನು ಮಾಡಂಗಿದ್ದರು. ಅದೇನೊ ಇಂದ್ರಾಗಾಂಧಿದು ನ್ಯಡಿತು ನ್ಯಡಿಸಿದ್ಲು, ಅಂಗಂತ ಯಲ್ಲಾ ಹೆಂಗುಸ್ರು ಇಂದ್ರಾಗಾಂಧಿಯಂಗಾಗಕ್ಯಾದತೆ?"

"ಅದು ನಿಜ ಕಣ ಮಾವ, ಯಾರೋ ತಿಳದೋರು ಹೆಂಗಸರ ಮಾತಿಗೆ ಬ್ಯಲೆ ಕೊಡ್ತರೆ. ತಿಳಿದೆಯಿರೊ ಸೂಳೆಮಕ್ಕಳು ನಿನಿಗೇನೂ ಗೊತ್ತಾಗದಿಲ್ಲ ಸುಮ್ಮಿರು ಅಂತರೆ" ಎಂದಳು ಜುಮ್ಮಿ.

"ಡೆಸ್‌ಪರೇಟಾಗಬ್ಯಾಡ ಕಣಕ್ಕ. ನಾವು ಇದುವರಿಗು ನಿನ್ನ ಯಾವಮಾತ ತಗದಾಕಿದ್ದಿವಿ? ಅದೋಗ್ಲಿ ನಿನಿಗೂ ಒಂದು ಚಾನ್ಸ ಕೊಟ್ಟು ಯಲಕ್ಷನ್ನಲ್ಲಿ ಯರಡು ಸತಿ ಗೆಲ್ಲಿಸಿದ್ದಿವಿ. ಯಾಕೆ ಅಂದ್ರೆ ನೀನಂಗಿದ್ದಿ. ಆ ಬಿಜೆಪಿಲೂ ವಿಮಲಾಗೌಡ ಅಂಗಿರೋವತ್ತಿಗೆ ಯರಡು ಸತಿ ಗೆಲ್ಲಿಸ್ಯವುರೆ. ಎಮ್ಮೆಲ್ಸಿ ಮಾಡ್ಯವುರೆ. ಯಾಕೆ ಅಂದ್ರೆ ಅವುಳಂಗವುಳೆ ಕಣಕ್ಕ. ರಿಯಲಿ ಸಿ ಈಸ್ ರೈಟ್ ಉಮನ್."



"ಯಂಗಿದ್ದಳವುಳೂ?"

"ಯಾವ ತರ ಕೇಳ್ತಯಿದ್ದಿ ನೀನೂ?"

"ನನ್ನಂಗಿದ್ದಳೊ, ಇಲ್ಲ ಕಾಳಮಾವನೆಡ್ತಿಯಂಗಿದ್ದಳೊ ಅಂತ?"

"ಅಂಗೂಯಿಲ್ಲ ಹಿಂಗೂಯಿಲ್ಲ ಮಹಾತಾಯಿ ಯಂಗವುಳೆ. ಅವುರ ಮನೆಲಿ ಒಂದನೆ ಕ್ಲಾಸಿಂದ ಹಿಡಿದು ಎಸೆಸೆಲ್ಸಿವರಿಗೂ ಒಂದು ಸ್ಕೂಲಿಗೆ ಊಟ ಬಟ್ಟೆ ಕೊಡ್ತರೆ ಗೊತ್ತೆ?"

"ಅದ್ಕೆ ಕಣೊ ಬಿಜೆಪಿಗಳು ಹಿಡಕಂಡಿರದು ಅವುಳ" ಎಂದ ಉಗ್ರಿ.

"ಬಿಜೆಪಿಗಳು ಹಿಡಿಯದೆ ಅಂತ ದಪ್ಪಾಗಿರೆ... ಕುಳುಗಳ ಕಣೊ ಉಗ್ರಿ. ನೀನು ಬರಿಗೈಲಿ ರಾಜಕಾರಣ ಮಾಡದೇನಿದ್ರು ಕಾಂಗ್ರೆಸಿನಲ್ಲಿ, ಬಿಜೆಪಿಲಿ ನಿನ್ನ ಜೇಬು ದಪ್ಪಾಗಿರಬೇಕು ಇಲ್ಲ, ನಿನ್ನ ಮನೆ ಆಗಲಾಗಿರಬೇಕು... ದಳದಲ್ಲಿ ರಾಜಕಾರಣ ಮಾಡದಾದ್ರೆ, ಒಂದೋ... ದ್ಯಾವೇಗೌಡನ ಜಪ ಮಾಡಬೇಕು, ಇಲ್ಲ ಕುಮಾರನಿಂ... ನಿಂತಿರಬೇಕು ಅಷ್ಟೇ."

"ಅಂಗರೆ ಅಮರನಾಥಶೆಟ್ಟಿ ದ್ಯಾವೇಗೌಡ್ರು ಜ... ಮಾಡತಿದ್ದ ಅನ್ನು?"

"ಅಮರನಾಥ ಶೆಟ್ಟಿ ಯಾರ್ಲ?" ಎಂದ... ಕಾಳಮಾವ.

"ದ್ವಡಪ್ಪ ಅವುನೊಬ್ಬ ಯಕ್ಷಗಾನದ ಸೈಡಾಕ್ಟ್ರು... ಗವುನೆ. ಒಂಥರಾ ಮೊಯ್ಲಿ ತಮ್ಮನಂಗೆ ಕಾಣ್ತ... ಇದ್ದಕ್ಕಿದ್ದಂಗೆ ನಿಮ್ಮ ದ್ಯಾವೇಗೌಡ್ರಿಗೆ ಮಂಗಳೂರ... ಕಡಿಯೋರ ಮ್ಯಾಲೆ ಮಮಕಾರ ಬಂದುಬುಟ್ಟ... ಅದ್ಕೆ ಸದಾನಂದ ಗೌಡ ಬಿಜೆಪಿ ಅಧ್ಯಕ್ಷಾಗಂ... ನೋಡಿಕಂಡ. ಈಗ ಅಮರನಾಥ ಶೆಟ್ಟಿ ತಂದು... ಎಮ್ಮೆಲ್ಸಿ ಯಲಕ್ಷನ್ನಿಗೆ ನಿಲ್ಲಿಸಿದ್ದ."

"ಗೆದ್ನೆ ಅವುನು?"

"ಅದ್ಯಂಗೆಲ್ತನೆ ದ್ವಡಪ್ಪ, ಇರೋವೋಟು... ನಾಕು, ಗೆಲ್ಲಕ್ಕೆ ಬೇಕಿರೊ ಓಟು ಹದುನಾಕು... ಪಾಪ ಆ ಶೆಟ್ಟಿ ಕಾಲು ನವ್ವ ಮಾಡಿಕಂಡು... ಯಣ್ಣೆ ತಿಕ್ಕಿಸಿಕಂಡು ಮನೆಲಿ ಕುಂತಿದ್ದ. ಈ... ಅಪ್ಪಮಕ್ಕಳು ಪೋನು ಮಾಡಿದ್ರು ಅಂತ ಒಂದು... ಉಸುರಿಗೆ ಓಡಿ ಬಂದು ವಿಧಾನಸಭೆ ಬಾಗಲ... ಹದುಮೂರು ಗಂಟೆ ಕೂತಿದ್ದು ಸೋತ... ಹೋದ ಅತ್ತಗೆ."

"ಯಲಕ್ಷನ್ನು ಅಂದ ಮ್ಯಾಲೆ ಯಾರು... ಗೆಲ್ತರೆ. ಇನ್ಯಾರಾರ ಸೋಲ್ತರೆ ಬುಡು ಅ... ಏನಂಗಾಡಿಕಂಡಿ."

"ಆಡಿಕಳದಲ್ಲ ದ್ವಡಪ್ಪ, ಈಗ ಜನ ಏನಂ... ಗೊತ್ತೆ? ಅಪ್ಪ ಅಡ್ಡಾಡಿ, ಮಗ ಮತಿಗೇ... ಅದ್ಕೆ ಹಿಂಗಾಯ್ತು ಅಂತಾ ಅವುರೆ ಇ... ಕೇನೇಳ್ತಿ?"

"ಯಾವನ್ಲ ಅಂಗನ್ನೋನು ಕರಕಂಬಾರ್ಲ ಇ... ಸಿಗದಮ್ಯಾಲ್ವದಿತಿನಿ."

"ಇನ್ಯಾರು ಪುಡಸಾಮಿಗೌಡನೊ ಶ್ರೀಕಂಠಯ್ಯನೊ... ಅಂದಿರತರೆ ಇನ್ಯಾರನ್ನಕೋದರು" ಎಂದ ಉಗ್ರಿ.

"ಅವುರೂ ಅಲ್ಲ."

"ಅಂಗರೆ ಅಹಿಂದ ಬಡ್ಡಿಮಕ್ಕಳೇ ಯಿರಬೇಕ... ಬುಡು."

"ಇವುರು ಮಾಡದು ಅಂಗೆಯ, ಅವುರನ್ನದ... ಅಂಗೆಯ ಸರಿಯಾಯ್ತು ಬುಡು" ಎಂದ ಸೀರ.

"ಎಜ್ಜಾಕ್ಟ್ಲಿ ಕರಟ್ ಚಿಗಪ್ಪ."

–ಬಿ. ಚಂದ್ರೇಗೌಡ

Zero Hour ಮುನ್ನಿ

1. ಸ್ನೇಕ್ ರಾಜ, ಬೆಕ್ಕಿನ ಕಣ್ ರಾಜೇಂದ್ರ, ಕರಡಿ ವೆಂಕಟೇಶ, ಕೋಳಿ ಫಯಾಜ್ ಗಳೆಂದರೆ....
   a) ಕೆಲವರ ಪಾಲಿಗೆ ಸ್ವಾತಂತ್ರ್ಯ ಯೋಧರಿದ್ದಂತೆ
   b) ಪ್ರಾಣಿದಯಾ ಸಂಘದ ಸದಸ್ಯರು
   c) ಮೈಸೂರು Zoo ನವರಿಗೆ ಒಳ್ಳೆ ಸೆನ್ಸ್ ಇದೆ; ನಾಮಕರಣ ಸರಿಯಾಗಿಯೇ ಮಾಡಿದ್ದಾರೆ
   d) a) ಮತ್ತು c) ಸರಿ
2. "ಎಂಎಲ್‌ಸಿ ಚುನಾವಣೆಯಲ್ಲಿ ಕುದುರೆ ವ್ಯಾಪಾರ ನಡೆದಿಲ್ಲ" ಎಂಬ ದೇವೇಗೌಡರ ಹೇಳಿಕೆಯ ಅರ್ಥವೇನು?
   a) ಕುದುರೆಗಳ ಚಾಲ್ತಿ ಹೆಚ್ಚಿದೆ
   b) ಬರೀ ಕತ್ತೆಗಳೇ ಇರುವಾಗ ಕುದುರೆ ವ್ಯಾಪಾರದ ಮಾತೇ ಬರುವುದಿಲ್ಲ
   c) ರೆಸಾರ್ಟ್ ಕುದುರೆಗಳನ್ನು ಸವಾರಿ ಮಾಡುವುದು ಕಷ್ಟ
   d) ಕುದುರೆಗಳು ಮಿಂಚಿನ ಓಟದಲ್ಲಿದ್ದವು
3. ಈ ಕೆಳಗಿನವುಗಳಲ್ಲಿ ಯಾವುದನ್ನು ನಂಬಬಹುದು?
   a) ಪ್ರೆಸ್‌ಕ್ಲಬ್‌ನಲ್ಲಿ ಕುಳಿತು ಪೇಪರ್ ಆರಂಭಿಸ್ತೀನಿ ಎನ್ನುವುದು...
   b) ಸಾಹಿತ್ಯ ಪರಿಷತ್ತಿನಲ್ಲಿ ಕುಳಿತು ಕಾವ್ಯ ರಚಿಸ್ತೀನಿ ಎನ್ನುವುದು....
   c) ಸರ್ವೋದಯ ಪಕ್ಷದಲ್ಲಿದ್ದು ಹೋರಾಟ ಮಾಡ್ತೀನಿ ಎನ್ನುವುದು...
   d) ರೈತನೊಬ್ಬ ಹೊಲದಲ್ಲಿ ನಿಂತು ಬೆವರು ಹರಿಸ್ತೀನಿ ಎನ್ನುವುದು.
   e) ರವೀಂದ್ರ ಕಲಾಕ್ಷೇತ್ರದ ಮೆಟ್ಟಲು ಮೇಲೆ ಕುಳಿತು ನಾಟಕ ಡೈರೆಕ್ಟ್ ಮಾಡ್ತೀನಿ ಎನ್ನುವುದು....
4. 'ನೀರಾವರಿಗೆ ಜೆಡಿಎಸ್ ಆದ್ಯತೆ' ಎಂದರರ್ಥ
   a) ದೇವೇಗೌಡರ 'ಪ್ರೀತಿಯ' ನೀರಾವರಿ ಯೋಜನೆಗಳ ಜಾರಿಗೆ ಕುಮಾರಸ್ವಾಮಿ ಹಣ ತೊಟ್ಟರು
   b) ಎಂಎಲ್‌ಸಿ ಚುನಾವಣೆಯಲ್ಲಿ 'ನೀರಾವರಿ'ಯನ್ನು ಜೆಡಿಎಸ್ ಎತ್ತಿ ಹಿಡಿಯಿತು
   c) 'ಕೋಟಿ ವಿದ್ಯೆಗಿಂತ ಮೇಟಿ ವಿದ್ಯೆ ಮೇಲು' ಎಂಬುದೇ ಜೆಡಿಎಸ್ ತತ್ವ
   d) ಹೊರೆ ಹೊತ್ತ ಮಹಿಳೆಯ ಗಂಡನಿಗೆ ನೆರವಾಗಲು ನೀರಾವರಿ ಸೌಕರ್ಯ ಕಲ್ಪಿಸಲಾಗುವುದು
5. ಅಳುತ್ತಿರುವ ವಿಮಲಾಗೌಡ, ನಗುತ್ತಿರುವ ಅಮರನಾಥ ಶೆಟ್ಟಿಗಳ ಚಿತ್ರವಿದೆ. ಈ ಚಿತ್ರಕ್ಕೆ ಒಂದು ತಲೆಬರಹ ನೀಡಿ
   a) ಸೋತು ಅತ್ತವಳು; ಗೆದ್ದೂ ನಕ್ಕವನು
   b) "ಎಂಎಲ್‌ಸಿ ಚುನಾವಣೆ ಇಷ್ಟೊಂದು ಗಲೀಜಾ"
   c) ಗೆದ್ದೂ ಅತ್ತವಳು; ಸೋತೂ ನಕ್ಕವನು
   d) ಕಣ್ಣೀರಧಾರೆ ಇದೇಕೆ?




ಉತ್ತರಗಳು 1.d 2.b 3.d 4.b 5.c

ಕಾವ್ಯಭಾಷೆ ತುಂಬ ಹಿತವಾದ ರೀತಿಯಲ್ಲಿ ಭಾವಗಳನ್ನು ವ್ಯಂಜಿಸಬಲ್ಲದು -ಯು.ಆರ್. ಅನಂತಮೂರ್ತಿ

ಅಂತರಂಗದ ರಿಪೇರಿ

"ನಾನು ಪುರುಷ ಶ್ರೇಷ್ಠ, ಪುರುಷೋತ್ತಮ!" ಎಂದು ಈತ ಹೇಳಿಕೊಳ್ಳುತ್ತಿದ್ದ; ಬಾಕ್ಸಿಂಗ್‌ನಲ್ಲಿ ಇವನು ದಾಖಲೆ ಸ್ಥಾಪಿಸಿದ್ದ. ಇವನ ಎದುರು ರಿಂಗ್‌ನಲ್ಲಿ ಬಲಿಯುದು ನಿಲ್ಲಲಾಗ ಲಿಲ್ಲ; ಕರಿಯರು ತಲೆ ಎತ್ತಲಾಗಲಿಲ್ಲ. ಈತ ಕವಿ ಕೂಡ. ಕ್ರಿಶ್ಚಿಯನ್ನಾಗಿ ಕ್ಯಾಸಿಯಸ್ ಕ್ಲೇ ಆಗಿದ್ದವನು ಮುಸ್ಲಿಂ ಆಗಿ ಮಹಮದ್ ಆಲಿ ಆದ. ಇವನಿಗೆ ದುಂಬಾಲು ಬೀಳುವ ಹೆಂಗಸರು, ಇವನ ಪರಿಚಯಕ್ಕಾಗಿ ಕಾತರಿಸುವ ಗಂಡಸರು ಅಪಾರ ಸಂಖ್ಯೆಯಲ್ಲಿದ್ದರು. ಇವನ ಮಾತು ಕತೆಯಾಗಿ ಹುಟ್ಟುತ್ತಿತ್ತು; ಈತನನ್ನು ಸ್ಪರ್ಶಿಸಿದವರು ಪುನೀತರಾದಂತೆ ಹೇಳಿಕೊಳ್ಳುತ್ತಿದ್ದರು. ಹಸ್ತಾಕ್ಷರ, ಹೊಗಳಿಕೆ, ಸ್ಪರ್ಶ, ಖ್ಯಾತಿ–ಇವೆಲ್ಲ ಈತನಿಗೆ ಮಾಡಿದ್ದು ವಿಚಿತ್ರವಾಗಿದೆ.

ಮನುಷ್ಯ ಸಂಘಜೀವಿ, ಕೇವಲ 'ಸಂಗ'ಜೀವಿ ಎಂದು ಪೋಲಿಗಳು ಹೇಳುವುದುಂಟು. ಸದಾ ಸಂಗದಲ್ಲಿರುವ, ಇಡೀ



ಬದುಕನ್ನು ಬಹಿರಂಗ ಒಡನಾಟದಲ್ಲೇ ಕಳೆಯುವ, ಅಪ್ಪುಗೆ, ಕೈಕುಲುಕು, ಭಾಷಣ, ಅಬ್ಬರದಲ್ಲೇ ಕಳೆಯುವ ಮನುಷ್ಯ ಕುತೂಹಲಕರ ಬದಲಾವಣೆಗೆ ಒಳಗಾಗುತ್ತಾನೆ. ಈತನ ಅಂತರ್ಯ ಇವನಿಗೆ ಜೀವ ನೀಡುವುದನ್ನು ನಿಲ್ಲಿಸುತ್ತದೆ; ಮನುಷ್ಯರ ಸ್ಪರ್ಶವೇ ರೋಗವಾಗಿ ತಗುಲುತ್ತದೆ. ಮಹಮದ್ ಆಲಿಗೆ ಹಾಗಾಯಿತು. ಈತನ ದೇಹ ಜಡವಾಗತೊಡಗಿತು; ಮನಸ್ಸು ಮಂಕಾಯಿತು. ಇವನ ಅನುಯಾಯಿಗಳು ಇವನಿಂದ ಸಲ್ಲದ ವ್ಯವಹಾರಗಳಲ್ಲಿ ಹಣ ಹೂಡಿ ಲೂಟಿ ಹೊಡೆಯತೊಡಗಿದರು. ಪುರುಷೋತ್ತಮ ಆಲಿ ಉಡುಗಿ ಹೋಗತೊಡಗಿದ.


ಗಾಂಧೀಜಿ ಇದನ್ನು ಗ್ರಹಿಸಿದ್ದರು. ಈತನ ಕತೆಯನ್ನು ಎಲ್ಲರೂ ಬಲ್ಲರು. ಗಾಂಧೀಜಿ ಭಾರತಕ್ಕೆ ಬರುವಷ್ಟರಲ್ಲೇ ದಕ್ಷಿಣ ಆಫ್ರಿಕಾದಲ್ಲಿ ಹೀರೋ ಆಗಿದ್ದರು; ಅವರು ಭಾರತಕ್ಕೆ ಕಾಲಿಟ್ಟೊಡನೆ ಅವರನ್ನು ನೋಡಲು ಲಕ್ಷಾಂತರ ಜನ ಕಾದಿದ್ದರು. ಹೋದಲ್ಲೆಲ್ಲ ಗಾಂಧೀಜಿ ಮಿಂಚುತ್ತಿದ್ದರು. ಜನ ಘೇರಾಯಿಸುತ್ತಿದ್ದರು. ಆದರೆ ಗಾಂಧೀಜಿ ತಮ್ಮ ಜೀವನ ಬಹಿರಂಗಗೊಂಡು ಜನರ ಸ್ಪರ್ಶ, ಹೊಗಳಿಕೆ, ಜಂಗುಳಿಯ ಉದ್ವೇಗದಲ್ಲಿ ನಾಶ ಹೋಗುವ ಮುನ್ನ ಎಚ್ಚರಗೊಂಡರು, ತಮ್ಮ ಏಕಾಂತದ ಗಂಟೆಗಳನ್ನು ಪಡೆದುಕೊಂಡರು. ಮೌನ, ಉಪವಾಸ ಆಚರಿಸಿ ಜನರನ್ನು ದೂರ ಇಡುತ್ತಿದ್ದರು. ಅಂತರಂಗದ ಕಾರಂಜಿಯ ದುರಸ್ತಿ ಮಾಡಿಕೊಳ್ಳುತ್ತಿದ್ದರು.

ಇದೆಲ್ಲ ಏಕಾಂತತೆ ಕಾಪಾಡದಿದ್ದಾಗ ಜೈಲು ವಾಸ ಇದ್ದೇ ಇತ್ತು. ಚಿಂತಿಸಲು, ಓದಲು, ಯೋಜನೆ ಹಾಕಿಕೊಳ್ಳಲು ಗಾಂಧೀಜಿಗೆ ಜೈಲುವಾಸ ನೆರವಾಗುತ್ತಿತ್ತು, ಜೈಲಿನಿಂದ, ಮೌನದಿಂದ ಹೊರಬಂದಾಗ ಗಾಂಧೀಜಿಯ ವ್ಯಕ್ತಿತ್ವ ಚೈತನ್ಯ ಪಡೆದಿರುತ್ತಿತ್ತು. ಖಾಸಗಿ, ಸ್ವಂತ ಚಿಂತನೆ ಇಲ್ಲದವನ ಬಹಿರಂಗ ಬದುಕು ಕೂಡ ಬಂಜೆ.

ಸಂಗಜೀವಿಯಾದ ಮನುಷ್ಯ ತನ್ನ ಸಾಂಗತ್ಯಕ್ಕೆ ಖಾಸಗಿ ಕ್ಷಣಗಳನ್ನು ತರಬೇಕು; ಅಂತರಂಗ ಮತ್ತು ಬಹಿರಂಗ ಸಾಮರಸ್ಯ ಪಡೆದಾಗ ಮಾತ್ರ ಆರೋಗ್ಯವಂತ ವ್ಯಕ್ತಿತ್ವ ಸಾಧ್ಯ.

ಮಹಮದ್ ಆಲಿ ಬಹಿರಂಗವನ್ನು ನೆಚ್ಚಿ ಆಲಸ್ಯ ಜಡತೆ ಪಡೆದ; ಅನೇಕರು ಅಂತರಂಗದಲ್ಲೇ ಇದ್ದು ಐಲು ಪಡೆದು ಕೊಳೆತು ಹೋಗುತ್ತಾರೆ.

ಕವಿ ವರ್ಡ್ಸ್‌ವರ್ತ್ ಬಗ್ಗೆ ಒಂದು ಮಾಹಿತಿ ಇದೆ. ಈತ ತರುಣನಾಗಿದ್ದಾಗ ತೀವ್ರ ಅಂತರ್ಮುಖಿಯಾಗಿದ್ದ; ಹೊರಗಿನ ಏನನ್ನೂ ಗಮನಿಸಲು ಆಗುತ್ತಲೇ ಇರಲಿಲ್ಲ. ಇದರಿಂದ ವರ್ಡ್ಸ್‌ವರ್ತ್‌ಗೆ ದಿಗಿಲಾಯಿತು. ಉದ್ದೇಶಪೂರ್ವಕವಾಗಿ ನೋಡುತ್ತ, ಕಾಣುತ್ತ, ಮುಟ್ಟುತ್ತ ವರ್ಣಿಸುತ್ತಾ ಹೋದ. ಹೊರ ಜಗತ್ತಿನೊಂದಿಗೆ ಸೇತುವೆ ನಿರ್ಮಿಸಿಕೊಂಡ–ಕಾವ್ಯವಾಗಿ ತನ್ನ ಕಾಣ್ಕೆ ರೂಪಿಸಿದ. ಮನಸ್ಸಿನ, ದೇಹದ ಆರೋಗ್ಯ ಬೆಳೆಸಿಕೊಂಡ. ಆರೋಗ್ಯವಂತ ಕಾವ್ಯ ನೀಡಿದ.



ಏಪ್ರಿಲ್ 10, 1988

ಗೋಡಂಬಿ ಸುಗಂಧ

ಈ ಗೋಡಂಬಿ ಮಾವಿನ ಜಾತಿಗೆ ಸೇರಿದ್ದು, ಮಾವಿನ ಹೋಟೆ ಹಣ್ಣಿನ ಒಳಗಿರುತ್ತದೆ. ಗೋಡಂಬಿ ಬೀಜ ಹಣ್ಣಿನ ಹೊರಗಿರುತ್ತದೆ. ಗೋಡಂಬಿ ಎಲೆ ಮಾವಿನಷ್ಟು ಚೆಂದವಲ್ಲ ಆದರೆ ಅದರ ಹೂವು ಸುಗಂಧದಲ್ಲಿ ಮಾವನ್ನು ಮೀರಿಸುತ್ತದೆ.

ದೊಡ್ಡ ಕುಣಿಗಲ್‌ನಿಂದ ಆಚೆಗೆ ಚನ್ನರಾಯಪಟ್ಟಣಕ್ಕೆ ಹೋಗುವ ರಸ್ತೆಯಲ್ಲಿರುವ 'ಗಾಂಧಿ ಶತಮಾನ ತೋಟ'ಕ್ಕೆ ಹೋಗಿದ್ದೆ, 1970ರಲ್ಲಿ–ಅಂದರೆ ಗಾಂಧಿ ಶತಮಾನೋತ್ಸವದ ಮಾರನೆ ವರ್ಷ–ಸರ್ಕಾರ ರೂಪಿಸಿದ ತೋಟ. ಪೇರಲ, ಸಪೋಟ ಅಸಂಖ್ಯವಾಗಿರುವ ತೋಟದಲ್ಲಿ ಗೋಡಂಬಿ, ಮಾವು ಸಾಕಷ್ಟಿವೆ: ಮಾವಿನ ಹೂ ಬಿಡುವ ಕಾಲದಲ್ಲೇ ಗೋಡಂಬಿ ಹೂ ಬಿಡುತ್ತವೆ. ನಾನು ಹೋದಾಗ ಹೀಚು, ಹೂ ಗೊಂಚಲು ತೂಗುತ್ತಿದ್ದವು. ಕುತೂಹಲಕ್ಕೆ ಗೋಡಂಬಿಯ ಹೂ ಗೊಂಚಲು ಹತ್ತಿರ ಹೋದೆ. ನಸು ನೀಲಿ ಬಣ್ಣ; ಮಾವಿನ ಹೆಣೆಯಂತೆ ಬಿಳುಪು ಅಥವಾ ಕೆಂಚು ಹೂವಲ್ಲ, ಒಗರಿಗಿಂತ ಹೆಚ್ಚು ಸಿಹಿ, ಘಾಟು ಪಡೆದ ಸುಗಂಧ. ಗೋಡಂಬಿ ಕೊಂಬೆ ಕೂಡ ಮಾವಿನಂತೆ ನೆಲಕ್ಕೆ ಬಾಗುತ್ತವೆ. ಉತ್ತರ, ದಕ್ಷಿಣ ಕನ್ನಡದ ರಸ್ತೆಗಳ ಪಕ್ಕದಲ್ಲೆಲ್ಲ ತಾನೇತಾನಾಗಿ ಬೆಳೆದ ಗೋಡಂಬಿ ಮರಗಳು.



ಅಂದಹಾಗೆ, ವಾಸನೆಯನ್ನು ಹೇಗೆ ವರ್ಣಿಸುವುದು? ಇಂಥ ಪ್ರಶ್ನೆಗಳಿಂದಲೇ ಜನ ಮೂರ್ತಿಪೂಜಕರಾಗುವುದು. ಆಘ್ರಾಣಿಸಿದ್ದನ್ನು, ಸ್ಪರ್ಶಿಸಿದ್ದನ್ನು, ಸುಮಧುರ ಧ್ವನಿಯನ್ನು, ಸದ್ದನ್ನು, ಕಂಡದ್ದನ್ನು ತೋರಿಸಿ ವರ್ಣಿಸುವ ಮನುಷ್ಯನ ಪರಿಕರಗಳು ಎಷ್ಟು ಸೀಮಿತ!

"ನಿನ್ನ ಧ್ವನಿ ಜಾಮೂನಿನಂತೆ ಅಥವಾ ಗೋಡಂಬಿ ಹಲ್ವಾದಂತೆ!" ಎಂದರೆ ಆಕೆ ನಲಿಯಬಹುದು. ಆದರೆ ಧ್ವನಿ ಮಾತ್ರ ಧ್ವನಿಯೇ.

ಈಗ ದೇವೇಗೌಡರು ಕುಮಾರನಿಗೇ 'ಪ್ರೇಮಪತ್ರ' ಬರೆಯುತ್ತಿದ್ದಾರಲ್ಲಾ?

ಎಚ್.ಸಿ. ಮಹಾದೇವ್, ಬಳ್ಳಾರಿ
ಇಪ್ಪತ್ತು ತಿಂಗಳ ನಂತರ CM ಆಗಲಿರುವ ಯಡ್ಡಿಗೆ ಈಗ ರಾಜೀನಾಮೆ ಯೋಚನೆ ಏಕೆ?
* ಯತ್ನಾಳ್ ಜೊತೆ 'ರಾಜಿ' ಸಾಧ್ಯವಾಗಿಲ್ಲದಿದ್ದಕ್ಕೆ.

ಬಿ.ಎಂ. ಪರಶಿವಮೂರ್ತಿ, ಬೆಂಗಳೂರು
'...ಸುತ್ತಾಡಿದ್ದು ಸಾಕು; ವಿಧಾನಸೌಧದಲ್ಲಿ ಕುಂತು ಕೆಲಸ ಮಾಡಿ' ಅಂದವ್ರ ದೇವೇಗೌಡರು?
* ಚೆಲುವ ಚನ್ನಿಗರು ರೆಸಾರ್ಟ್‌ಗಳನ್ನು ಬಿಟ್ಟು ಬಂದರೆ ತಾನೇ ಕೆಲಸದ ಮಾತು ಬರುವುದು.

ಜಿ.ಡಿ. ಲಕ್ಷ್ಮಿನಾರಾಯಣ್, ಗದ್ದಂಬಚ್ಚಹಳ್ಳಿ
ಗಂಡಸರು ಸೆಖೆ ಆದರೆ ಅಂಗಿ ಬಿಚ್ಚುತ್ತಾರೆ? ಹೆಂಗಸರು?
* Fan on ಮಾಡುತ್ತಾರೆ, ಪೆದ್ದ.

ಪೂರ್ಣಿಮಾ, ಹಗರಿಬೊಮ್ಮನಹಳ್ಳಿ
ದೇವರಾಜ ಅರಸ್ ಚೀಫ್ ಮಿನಿಸ್ಟರ್, ಕುಮಾರಸ್ವಾಮಿ....?
* 'ಮಿಸ್‌ಚೀಫ್' ಮಿನಿಸ್ಟರ್ ಅಂತ ಧರಂ ಗರಂ ಆಗಿದ್ದಾರೆ.

ಬಸವರಾಜ್ ಬೆಸ್ತರ್, ಹರಪನಹಳ್ಳಿ
ಪಾಪು(ಇಶಾ)ಗೂ, ಬೇಬಿ(ಕವಿತಾ)ಗೂ ಇರುವ ವ್ಯತ್ಯಾಸ?
* ಪಾಪು ಮುತ್ತು ಕೊಟ್ಟರೆ ಬೇಬಿ ಮಾತು ಕೊಡ್ತಾಳೆ.

ಪಿ.ಎ.ಖಲಂದರ್ ಅಜೀಜ್, ಜಾವಗಲ್
ಪುಸ್ತಕ ಹಿಡಿಯಬೇಕಾದ ಕೈಗಳು ಬೀಡಿ, ಸಿಗರೇಟು, ಬ್ರಾಂದಿ ಹಿಡಿಯುತ್ತಿವೆ. ಹೀಗಾದರೆ ಮುಂದಿನ ಗತಿ?
* ನಮ್ಮ ಮಲ್ಲನಗೌಡರ್ ಎಡಗ್ಯೆಯಲ್ಲಿ ಗ್ಲಾಸ್ ಹಿಡಿದು ಬಲಗ್ಯೆಯಲ್ಲಿ ಪುಸ್ತಕ ಹಿಡಿದಿರುತ್ತಾನೆ, ಗೊತ್ತಾ?

ಪಿ.ವೆಂಕಟೇಶ್, ದೇವದುರ್ಗ
ಸೋತರೂ ಆನಂದ ಪಡುವ ಆಟ ಯಾವುದು?
* ಮಕ್ಕಳೊಂದಿಗೆ ಮೋಸದ ಆಟವಾಡಿ ಸೋತರೂ ಆನಂದಪಡುವುದಿಲ್ಲವೆ ವೆಂಕಟೇಶ್.

ಮಹೇಶ್ ಹೆಗಡೆ, ಹೆಗಲೆ

ಬುದ್ಧಿಜೀವಿಗಳಿಗೆ ಬುದ್ಧಿ ಎಲ್ಲಿರುತ್ತೆ?
* ಚಿಮೂ ಪ್ರಕಾರ ಬುದ್ಧಿ ಚೆಡ್ಡಿಯಲ್ಲಿರುತ್ತೆ.

ಓದು ಸಿದ್ದೇಗೌಡ, ಕಬ್ಬೇಹಳ್ಳಿ
ತಸ್ಲೀಮಾಗೆ ಸರ್ಪದೋಷ ಕಾಡುತ್ತಿರಬಹುದೇ?
* ಆಕೆ ಕಂಡಿರೋದು 'ಪುರುಷ' ಎಂಬ ವಿಷ ಸರ್ಪವನ್ನಷ್ಟೇ!

ಬಿ.ಎಸ್. ಇಮ್ಮಾನುವೇಲ, ಮಸರಕಲ
ಖ್ಯಾತ ನಾಯಕ ನಟರು ಸತ್ತಾಗ ಸರ್ಕಾರವೇ ಮಣ್ಣು ಮಾಡುತ್ತದೆ. ಖ್ಯಾತ ಖಳ ನಾಯಕ ನಟರು ಸತ್ತಾಗ ಯಾರು ಮಣ್ಣು ಮಾಡುತ್ತಾರೆ?
* ಸರ್ಕಾರ ಅವಾಗ ಮಣ್ಣು ತಿನ್ನುತ್ತಿರುತ್ತದೆ.



ವೆಂಕಟೇಶ್ ಎಸ್, ಕಾರೇಹಳ್ಳಿ
ರಾಜಕಾರಣಿಗಳ ಮಕ್ಕಳಿಗೆ ಮಾತ್ರ ಅಧಿಕಾರ ಎಂಬ ಮೀಸಲಾತಿ ಪರ ಹೋರಾಟಕ್ಕೆ ಬೆಂಬಲ ನೀಡುತ್ತೀರಾ?
* ಎಚ್.ಡಿ. ರೇವಣ್ಣ ತನಗೆ ಒಳಮೀಸಲಾತಿ ಬೇಕೆಂದು ಕುಮಾರನ ಜೊತೆ ತಕರಾರೆತ್ತಿದ್ದಾನಂತೆ, ಇನ್ನು ನಾವ್ಯಾವ ಲೆಕ್ಕ.

ವಿಜಯಕುಮಾರ್, ಬಿಳಿದಾಳೆ
'ಪಾಂಚಾಲಿ' ಶಾರದೆ ನಾಪತ್ತೆ ಆಗಿದ್ದಾಳಲ್ಲಾ?
* ಯಾವನೋ NRI ರಾವಣ ಅವಳನ್ನು ಹಾರಿಸಿಕೊಂಡು ಹೋದ ಅಂತಾ ಕಬೀರ್ ಅಳುತ್ತಾ ಅವನಂತೆ.

ನಾಗರಾಜ್ ಮಠ, ಮಾನ್ವಿ
ಈ 'Zero Hour'ನ ಧಾರವಾಡದ ತಲೆಹರಟೆ ಮುನ್ನಿ ಯಾರು?
* ಆಕೆ ನೀಲು ಮಗಳಾದ ನಿಮ್ಮಿಯ ತಂಗಿಯ ಗಂಡನ ಅಣ್ಣನ ಕೋಬ್ರದರ್‌ನ ಮಗಳಾದ ಶಾರದೆಯ ಕ್ಲೋಸ್ ರಿಲೇಷನ್ ಅಂತೆ.

ಎಂ. ನಿಸರ್ಗ, ದಾವಣಗೆರೆ
'ಕಂಡಹಾಗೆ' ಅಂಕಣದಲ್ಲಿ ಗೌರಿಯ ನಗುಮೊಗ ಓಕೆ-ಆದ್ರೆ 'ಈ ಚಿತ್ರ ನೋಡಬೇಕೆ' ಅಂಕಣದಲ್ಲಿ ಕವಿತಾಳ ಸಿಡುಕು ಮೋರೆ ಯಾಕೆ?
* ಕೆಟ್ಟ ಕನ್ನಡ ಸಿನಿಮಾಗಳನ್ನು ನೋಡಿದ್ದರ ಪರಿಣಾಮ.

ಕೆ.ಶ್ರೀನಿವಾಸ್, ಮಂಡ್ಯ
ಕಮಲದ ಪಕ್ಷ ಕೆಸರು ಮೆತ್ತಿಕೊಂಡ ಕಮಲವಾಗುತ್ತಿರುವುದು ಯಾರಿಗೆ ಶೋಭೆ?
* ಯಡ್ಡಿಗಂತೂ ಕ್ಷೋಭೆ.

ಆರ್. ಗೋವಿಂದರಾಜು, ಬೆಂಗಳೂರು
ಈಗಿನ ಹುಡುಗಿಯರು ಮದುವೆಯಾಗುವುದಾದರೆ ಐಟಿ ಕಂಪನಿ ವರನನ್ನೇ ಮದುವೆ ಆಗುವುದಾಗಿ ಪಟ್ಟು ಹಿಡಿಯುತ್ತಾರಲ್ಲಾ?
* Sen`sex' ಭ್ರಮೆ ಆ ಪೆದ್ದಿಯರಿಗೆ.

ಪಿ.ಎಸ್. ಶ್ರೀವತ್ಸ, ಬೆಂಗಳೂರು
ವಿಜಯ ಸಂಕೇಶ್ವರ ವಿಜಯ ಕರ್ನಾಟಕವನ್ನು ಮಾರುತ್ತಿದ್ದಾನಂತಲ್ಲಾ?
* ಅದು ಮಾರಾಟ ಅಲ್ಲ, ಹರಾಜು!

ಬಹುಮಾನಿತ ಪ್ರಶ್ನೆ

ನಾಗಪ್ರಸಾದ್, ಮಾಗಡಿ
ಈಗ ದೇವೇಗೌಡರು ಕುಮಾರನಿಗೇ 'ಪ್ರೇಮಪತ್ರ' ಬರೆಯುತ್ತಿದ್ದಾರಲ್ಲಾ?
* ಆತನೇ ಅವರ 'ಪ್ರೇಮಪುತ್ರ' ಆಗಿರುವುದರಿಂದ.

ಧೀಂ ತುಂಟಿ!

ಪಂಜಾಬ್‌ನಲ್ಲಿ ಇಂಜಿನಿಯರ್ ಆಗಿದ್ದ ರಾಮಪ್ಪ ತನ್ನ ಮಗ ಕೃಷ್ಣನೊಂದಿಗೆ ಬೆಂಗಳೂರಿನ ತನ್ನ ಮಾವನ ಮನೆಗೆ ಬಂದ. ಮಾವನ ಕೊನೆಯ ಮಗಳು ಉಷಾ ಕೃಷ್ಣನ ವಯಸ್ಸಿನವಳು. ಇಬ್ಬರೂ ತುಂಬಾ ಅನ್ಯೋನ್ಯವಾಗಿದ್ದರು.

ಪುಟ್ಟ ಹುಡುಗಿ ಉಷಾ ಒಂದು ದಿನ ಕೃಷ್ಣನನ್ನು ಕರೆದುಕೊಂಡು ಬೆಂಗಳೂರಿನ ಹೊರವಲಯದಲ್ಲಿದ್ದ ಕೆರೆಗೆ ಈಜಲು ಹೊರಟಳು. ಸ್ನಾನವಾಯಿತು. ಇಬ್ಬರೂ ದಡಕ್ಕೆ ಬಂದು ಬಟ್ಟೆ ಹಾಕಿಕೊಳ್ಳುವ ಮುನ್ನ ಉಷಾ ಕೃಷ್ಣನನ್ನು ಒಂದು ಕ್ಷಣ ಕಾಲಿನಿಂದ ಮುಖದವರೆಗೆ ದುರುಗುಟ್ಟಿ ನೋಡಿ "ಪಂಜಾಬ್ ಜನಕ್ಕೂ ಬೆಂಗಳೂರಿನ ಜನಕ್ಕೂ ಇಷ್ಟು ವ್ಯತ್ಯಾಸ ಅಂತ ನನಗೆ ಗೊತ್ತಿರಲಿಲ್ಲ?"



ನಮ್ಮ ಪ್ರಶ್ನೆಗೆ ನಿಮ್ಮ ಉತ್ತರ!!

ಈ ವಾರದ ಪ್ರಶ್ನೆ:
ಮೇಲುವರ್ಗದ ಬಡವರಿಗೂ ಮೀಸಲಾತಿ ಬೇಕೆಂದು ಬಿಜೆಪಿ ಹೇಳಿದೆಯಲ್ಲ?

ಕಳೆದ ವಾರದ ಪ್ರಶ್ನೆ: ಪಾರ್ಟಿ ವಿತ್ ಡಿಫರೆನ್ಸ್ ಹಾಗೂ ಪಾರ್ಟಿ ಇನ್ ಡಿಫರೆನ್ಸ್ ವ್ಯತ್ಯಾಸವೇನು?
ನಮ್ಮ ಉತ್ತರ: ಬಹುಮತವಿದ್ದರೆ ಪಾರ್ಟಿ ವಿತ್ ಡಿಫರೆನ್ಸ್, ಭಿನ್ನಮತವಿದ್ದರೆ ಪಾರ್ಟಿ ಇನ್‌ಡಿಫರೆನ್ಸ್ ಅಷ್ಟೇ ವ್ಯತ್ಯಾಸ.
ಉತ್ತರ ಕಳುಹಿಸಿ ಬಹುಮಾನ ಪಡೆದಿರುವವರು: ಸಿ. ನಾಲಸ್ವಾಮಿ, ಬೆಂಗಳೂರು

ಲಂಕೇಶ್

ಸರ್ವಸಮಾನ ಸಮಾಜ ನಿರ್ಮಾಣದ ಆಶಯಗಳ ಮೀಸಲಾತಿಯ ವಿರುದ್ಧ ಪ್ರತಿಭಟಿಸುತ್ತಿರುವವರು ಎರಡು ಬಗೆಯ ಅಜ್ಞಾನಗಳಿಂದ ನರಳುತ್ತಿದ್ದಾರೆ. ಮೀಸಲಾತಿಯು ಮೂಲಕ ಶೋಷಿತ ಜನಾಂಗ ಪವರಿಗೆಲ್ಲಾ (ಶೋಷಿತ ಜನಾಂಗದವರಿಗಷ್ಟೇ) ಅವಕಾಶಗಳು ಸಿಕ್ಕಿ, ತಮ್ಮ 'ಮೆರಿಟ್'ಗೆ ಅನ್ಯಾಯವಾಗುತ್ತದೆ. ಹಾಗೆಯೇ 'ಪ್ರತಿಭಾವಂತರಲ್ಲದ' ಮೀಸಲು ಕೋಟಾದವರಿಂದ ದಕ್ಷತೆ ಕುಸಿಯುತ್ತದೆ!

ಪರೀಕ್ಷಾ ಮೆರಿಟ್ ಒಂದನ್ನೇ ನೈಜ ಮೆರಿಟ್ ಎಂದು ಭ್ರಮಿಸಿರುವ ಭಾರತದ ಮೇಲ್ಜಾತಿಗಳ ಯುವ ಜನತೆಗೆ ಜಾತಿ ಕೇಂದ್ರಿತ ಈ ಸಮಾಜದಲ್ಲಿ ಸಾಮಾಜಿಕ ಅನುಕೂಲತೆ/ಅನಾನುಕೂಲತೆಗಳನ್ನು ಗಣನೆಗೆ ತೆಗೆದುಕೊಳ್ಳದೇ ಹೋದರೆ ಅದು ಶೋಷಿತರನ್ನು ಇನ್ನಷ್ಟು ಶೋಷಣೆಗೊಳಪಡಿಸಿದಂತಾಗುತ್ತದೆ ಎಂಬ ಸತ್ಯವನ್ನು ಅರಗಿಸಿಕೊಳ್ಳುವುದೇ ಕಷ್ಟವಾಗಿಬಿಟ್ಟಿದೆ.

ಸಾಮಾಜಿಕ ಅನ್ಯಾಯ, ಅಸಮಾನತೆಗಳ ಇತಿಹಾಸದ ಈ ಸಮಾಜದಲ್ಲಿ 'ಪ್ರತಿಭೆ' ಎನ್ನುವುದೇ ಒಂದು ಸಾಮಾಜಿಕ ರಚನೆ (Social Construct) ಆಗಿರುವಾಗ, 'ಮೀಸಲಾತಿಯಿಂದ ಪ್ರತಿಭೆಗೆ ಅನ್ಯಾಯ' ಎಂಬ ವಾದವೇ ಅರ್ಥರಹಿತವಾದದ್ದು.

ಸಾಮಾಜಿಕ ನ್ಯಾಯದ ಹಾದಿಯಲ್ಲಿ ಜಾತಿ ಆಧಾರಿತ ಮೀಸಲಾತಿಯ ಅನುಷ್ಠಾನ ಸಾಂವಿಧಾನಿಕ ಅಗತ್ಯ ಕೂಡ. ಮೀಸಲಾತಿ ಎಂಬುದು ಅಸಮಾನತೆಯಿಂದ ಕೂಡಿರುವ ಸಾಮಾಜಿಕ ರಚನೆಯನ್ನು ಪ್ರಜ್ಞಾಪೂರ್ವಕವಾಗಿ ಪುನರ್ ರೂಪಿಸುವ ದಾರಿ; ಸಾಂಪ್ರದಾಯಿಕವಾಗಿ ತುಳಿತಕ್ಕೊಳಗಾದ ಸಾಮಾಜಿಕ ಗುಂಪುಗಳಿಗೆ ಸೇರಿದ ವ್ಯಕ್ತಿಗಳಿಗೆ ತಮ್ಮ ಸಾಮರ್ಥ್ಯವನ್ನು ಸಾಬೀತುಗೊಳಿಸಲು ಮತ್ತು ಲಭ್ಯ ಸಂಪತ್ತಿನಲ್ಲಿ ತಮಗೂ ಪಾಲಿದೆ ಎಂಬುದನ್ನು ಕಂಡುಕೊಳ್ಳಲು ಸಹಾಯವಾಗುವ ಕ್ರಮ ಎಂಬುದನ್ನು ನಮ್ಮ ಸರ್ಕಾರಗಳು ಕಂಡುಕೊಳ್ಳಲೇ ಇಲ್ಲ. ಕೇವಲ ಓಟ್‌ಬ್ಯಾಂಕ್ ರಾಜಕಾರಣಕ್ಕೆ ಸೀಮಿತಗೊಂಡ, ಜಾತಿ ರಾಜಕಾರಣಕ್ಕಷ್ಟೇ ಅಂಟಿಕೊಂಡ ನಮ್ಮ ವೃತ್ತಿ ರಾಜಕಾರಣಿಗಳ ಅವಕಾಶವಾದಿತನವೂ ಮೀಸಲಾತಿಯ ಸುತ್ತ ತಪ್ಪು ಕಲ್ಪನೆಗಳುಂಟಾಗಲು ಕಾರಣವಾಗಿದೆ.

ವೈವಿಧ್ಯಮಯ ಮತ್ತು ಸಂಕೀರ್ಣವಾಗಿರುವ ಈ ಭಾರತೀಯ ಸಮಾಜದಲ್ಲಿ ಮೀಸಲಾತಿ ನೀತಿಯನ್ನು ಕೇವಲ ಜಾತಿ ಆಧಾರಿತವಾಗಿ ರೂಪಿಸುವುದು ಅಷ್ಟು ಸರಳವಲ್ಲದ ಕೆಲಸ. ಸಾಮಾಜಿಕ ಗೋಡೆಗಳು ಹಾಗೂ ಅವಕಾಶಗಳ ನಿರಾಕರಣೆಯನ್ನು ತೆಗೆದು ಹಾಕುವ ಇತರೆಲ್ಲ ನೀತಿಗಳೊಂದಿಗೆ ನಡೆದಾಗಷ್ಟೇ ಜಾತಿ ಆಧಾರಿತ ಮೀಸಲಾತಿ ತನ್ನ ಉದ್ದೇಶ ಈಡೇರಿಕೆಯಲ್ಲಿ ಸಫಲಗೊಳ್ಳಬಲ್ಲದು.

ಅಂದು ವಿಶ್ವನಾಥ ಪ್ರತಾಪ್‌ಸಿಂಗ್ ಮಾಡಿದ್ದಂತೆ ಈ ಸರ್ಕಾರವೂ ಪೂರ್ವಭಾವಿ ಸಿದ್ಧತೆ, ಎಚ್ಚರದ ಅಧ್ಯಯನ, ಜನಾಭಿಪ್ರಾಯ ರೂಪಿಸುವಿಕೆಗಳನ್ನು ಮಾಡದೇ ದಿಢೀರನೇ ಮಂಡಲ್ II ಬಗ್ಗೆ ಘೋಷಿಸಿದ್ದು ಅಜ್ಞಾನವೇ! ಹಾಗೆಯೇ ರಸ್ತೆ ಗುಡಿಸುವುದು, ಶೂ ಪಾಲಿಶ್ ಮಾಡುವುದರ ಮೂಲಕ ಕೆಳವರ್ಗ/ಜಾತಿಗಳಷ್ಟೇ ಇಂತಹ ಕೆಲಸಗಳಿಗೆ ಅರ್ಹರು ಮತ್ತು ತಾವು ಮಾತ್ರ ಉನ್ನತ ಕೆಲಸಗಳ ಹಕ್ಕುದಾರರು ಎಂಬಂತೆ ವರ್ತಿಸಿದ ಮೇಲ್ಜಾತಿಯ ವಿದ್ಯಾರ್ಥಿಗಳು ತಮ್ಮ ಬುದ್ಧಿಗೇಡಿತನ, ಸಾಮಾಜಿಕ ನ್ಯಾಯದ ಕುರಿತ ತಮ್ಮ ಮೇಲ್ಜಾತಿ ಅಸಹನೆ ಪ್ರದರ್ಶಿಸಿಬಿಟ್ಟರು.

ಮೀಸಲಾತಿ: ಭಿನ್ನ ಪ್ರಯೋಗದ ಹೊಸ ಹೆಜ್ಜೆಯತ್ತ....

ಮೀಸಲಾತಿಯ ಹೊಸ ಸಾಧ್ಯತೆಗಳತ್ತ, ಹೊಸ ಪ್ರಯೋಗಗಳತ್ತ 'ಲಂಕೇಶ್' ಬಳಗದವರು ಮತ್ತು 'ಲಂಕೇಶ್' ಹಿತೈಷಿಗಳೆಲ್ಲಾ ಚರ್ಚಿಸಿದ್ದರ ಫಲವಾಗಿ ಮೂಡಿದ ವಿಚಾರಗಳನ್ನು ಇಲ್ಲಿ ನಮ್ಮ ಮಲ್ಲನಗೌಡರ್ ಬರೆದಿದ್ದಾರೆ.

ಹಿಂದೆ ಹಲವಾರು ಸಂದರ್ಭಗಳಲ್ಲಿ ಮೀಸಲಾತಿ ಪರ ನಿಂತು ಲಿಂಗಾಯತ-ಒಕ್ಕಲಿಗರ ಮೀಸಲಾತಿ ವಿರೋಧಿ ನೀತಿಯನ್ನು ಖಂಡಿಸಿದ್ದು ಪಿ.ಲಂಕೇಶ್ ಮತ್ತು ಪತ್ರಿಕೆ. ಪಿ. ಲಂಕೇಶರ ಕೂಸು ಈ ನಿಮ್ಮ 'ಲಂಕೇಶ್' ಸಹ ಜಾತಿ ಆಧಾರಿತ ಮೀಸಲಾತಿಯ ಪರವಿದ್ದು, ನೀವೆಲ್ಲಾ ನಿಮ್ಮ ವಲಯಗಳಲ್ಲಿ ಈ ಚರ್ಚೆ ಆರಂಭಿಸುತ್ತೀರೆಂದು ಆಶಿಸುತ್ತಾ....


-ಗೌರಿ ಲಂಕೇಶ್

ಸದ್ಯದ ಅಸಮಾನತೆಯಿಂದ ಕೂಡಿದ ಸಾಮಾಜಿಕ ಜೀವನ ಮೇಲ್ಜಾತಿಗಳ ಪ್ರಭಾವದಲ್ಲಿದ್ದು, ಅದು ಮೀಸಲಾತಿ ಎಂಬುದನ್ನು ಒಪ್ಪಿಕೊಳ್ಳದಂತಹ ಮನೋಸ್ಥಿತಿಗೆ ಬಂದುಬಿಟ್ಟಿದೆ.

4 ಸಾವಿರ ಐಐಟಿ ಸೀಟುಗಳಿಗಾಗಿ 3 ಲಕ್ಷದಷ್ಟು ವಿದ್ಯಾರ್ಥಿಗಳು ಸ್ಪರ್ಧಿಸುವಾಗ ಮೆರಿಟ್ ಎಂಬುದು ಕೇವಲ ರ‍್ಯಾಂಕ್‌ಗಳಿಗಷ್ಟೇ ಸೀಮಿತಗೊಂಡುಬಿಡುತ್ತದೆ. ಶೇ. 85 ಅಂಕ ಗಳಿಸಿದ ಇಂಜಿನಿಯರ್, ಶೇ. 80 ಅಥವಾ ಶೇ. 75 ಅಂಕ ಗಳಿಸಿದ ಇಂಜಿನಿಯರ್‌ಗಳಿಗಿಂತ ಶ್ರೇಷ್ಠ ಎಂದು ನಿರ್ಧರಿಸಲು ಸಾಧ್ಯವೇ? ಕಟ್-ಆಫ್ ಮಾರ್ಕ್ಸ್‌ಗಳು ಮತ್ತು ದಶಾಂಶ ಸ್ಥಾನಗಳ (0.1, 0.2 etc) ಅಂತರದ ಮಾರ್ಕ್ಸ್‌ಗಳು ಮೆರಿಟ್ ಗುಣಗಾನದ ಈ ಕ್ರೇಜಿ ಯುಗದಲ್ಲಿ ಪ್ರಾಧಾನ್ಯತೆ ಪಡೆದುಕೊಂಡು ಸಾಮಾಜಿಕ ನ್ಯಾಯದ ಮೆರಿಟ್‌ಗೆ ಅನ್ಯಾಯ ಎಸಗುತ್ತಲೇ ಇರುತ್ತವೆ.

88 ವರ್ಷಗಳ ಹಿಂದೆಯೇ ಕರ್ನಾಟಕದಲ್ಲಿ ಕೃಷ್ಣರಾಜ ಒಡೆಯರ್ ಆಳ್ವಿಕೆಯಲ್ಲಿ (ಆಗಿನ ಮೈಸೂರು ರಾಜ್ಯ) ಜಸ್ಟಿಸ್ ಲೆಸ್ಲಿ ಮಿಲ್ಲರ್ ಸಮಿತಿಯ ಆಧಾರದ ಮೇಲೆ ಹಿಂದುಳಿದ ವರ್ಗಗಳಿಗೆ ಶೇ. 75 ರಷ್ಟು ಮೀಸಲಾತಿ ಕಲ್ಪಿಸಲಾಗಿತ್ತು, ಹಾವನೂರ್ ವರದಿ, ವೆಂಕಟಸ್ವಾಮಿ ವರದಿ, ಚಿನ್ನಪ್ಪ ರೆಡ್ಡಿ ವರದಿಗಳಿಗೆ ಕರ್ನಾಟಕದ ಲಿಂಗಾಯತರು, ಒಕ್ಕಲಿಗರು ಪ್ರತಿಭಟಿಸುವಂತೆ ಹಾದಿ ತಪ್ಪಿಸಿದ್ದು ಆ ಜಾತಿಗಳ ದುಷ್ಟ ರಾಜಕಾರಣಿಗಳು. ಇಂತಹ ಸಂದರ್ಭಗಳಲ್ಲೆಲ್ಲಾ ಶೋಷಿತರ ಪರ ನಿಂತು, ಅತ್ಯಂತ ಸ್ಪಷ್ಟವಾಗಿ ತನ್ನ ಅಭಿಪ್ರಾಯ ಮಂಡಿಸಿದ್ದು ಲಂಕೇಶ್ ಮೇಷ್ಟ್ರು ಮತ್ತು ಅವರ ಈ 'ಪತ್ರಿಕೆ' ಒಂದೇ.

ವೆಂಕಟಸ್ವಾಮಿ ವರದಿಯನ್ನು ಹೆಗಡೆ ಸರ್ಕಾರ ತಿರಸ್ಕರಿಸಿದಾಗ "ವರದಿ ಕುರಿತು ಒಂದು ಸ್ವಗತ" ಎಂಬ ಟೀಕೆ ಟಿಪ್ಪಣಿಯಲ್ಲಿ ಲಂಕೇಶ್ ಬರೆದ ಈ ಸಾಲುಗಳನ್ನು ಇವತ್ತು ಜಾತಿ ಆಧಾರಿತ ಮೀಸಲಾತಿ ವಿರೋಧಿಸುತ್ತಿರುವವರಿಗೆ ಮತ್ತೊಮ್ಮೆ ನೆನಪಿಸಬೇಕಾಗಿದೆ: "ಜಾತಿಯ ಆಧಾರದ ಮೇಲೆ ಸವಲತ್ತು, ಮೀಸಲಾತಿ ಒದಗಿಸಲು ಮುಖ್ಯ ಕಾರಣವನ್ನು ನಮ್ಮ ಜನ ಮತ್ತೆ ಮತ್ತೆ ನೆನೆಸಿಕೊಳ್ಳಬೇಕಾಗಿದೆ. ನಮ್ಮ ಇಡೀ ಸಾಮಾಜಿಕ, ಆರ್ಥಿಕ ಹಂದರವನ್ನು ವರ್ಣಭೇದದ ಮೇಲೆ ಕಟ್ಟಿದ ನಮ್ಮ ಪೂರ್ವಿಕರು ಒಂದು ಕೊನೆಯಲ್ಲಿ, ವರ್ಣವ್ಯವಸ್ಥೆಯಿಂದ ಹೊರಗಿಡಲ್ಪಟ್ಟ ಹರಿಜನರನ್ನು ಇನ್ನೊಂದು ಕೊನೆಯಲ್ಲಿ ಅಕ್ಷರ, ಅಧಿಕಾರ ಸಂಪತ್ತನ್ನುಳ್ಳ ಬ್ರಾಹ್ಮಣರನ್ನೂ ಪಡೆದ ವ್ಯವಸ್ಥೆ ನಿರ್ಮಿಸಿ ಹಲವು ಜಾತಿಗಳಿಗೆ ಹಲವು ಸ್ತರಗಳನ್ನೇ ನಿರ್ಮಿಸಿದರು. ಒಬ್ಬ ಊರಿನ ಹರಿಜನ, ತಳವಾರನನ್ನು ತೆಗೆದುಕೊಂಡು ನೋಡಿದರೆ ಇದು ಗೊತ್ತಾಗುತ್ತದೆ. ಆರ್ಥಿಕ, ಸಾಮಾಜಿಕ, ಮಾನಸಿಕ ಈ ಮೂರೂ ಅಸಹಾಯಕತೆಯನ್ನು ಪಡೆದ ಈತ ಕೈ ಹಿಡಿದು ಎತ್ತುವವರಿಲ್ಲದೆ ಏಳಲಾರದ ಸ್ಥಿತಿಯಲ್ಲಿರುತ್ತಾನೆ...." (ಸೆಪ್ಟೆಂಬರ್ 28, 1986)



ದಿ. ಪ್ರೊ. ವೆಂಕಟಗಿರಿಗೌಡರಂತವರೂ ಒಕ್ಕಲಿಗರ ಪರ ನಿಂತು, ವೆಂಕಟಸ್ವಾಮಿ ವರದಿ ಅವೈಜ್ಞಾನಿಕವೆಂದು ಬಡಬಡಿಸಿದಾಗಲೂ 'ಪತ್ರಿಕೆ'ಯೇ ಇದಕ್ಕೆ ಸ್ಪಷ್ಟ ಉತ್ತರ ನೀಡುತ್ತಾ ಬಂದಿತ್ತು. "ಸುಪ್ರೀಂಕೋರ್ಟಿನ ಮಾರ್ಗಸೂಚಿಗಳ ಹಿನ್ನೆಲೆಯಲ್ಲಿ ವೆಂಕಟಸ್ವಾಮಿ ಆಯೋಗ ತಯಾರಿಸಿರುವ ಹಿಂದುಳಿದವರ ಪಟ್ಟಿಯಲ್ಲಿನ ಒಂದೆರಡು ಪಂಗಡಗಳನ್ನೇ ಉದಾಹರಿಸಬಹುದು. 'ಎ' ಗುಂಪಿನಲ್ಲಿರುವ ಅಗಸ, ಬಾವಾಜಿ ಅಥವಾ ನಾಯಿಂದ ಪಂಗಡಗಳಾಗಲಿ ಮತ್ತು 'ಬಿ' ಗುಂಪಿನ ಪಟ್ಟಿಯಲ್ಲಿರುವ ಬೇಡ, ಬೆಸ್ತ ಬುಡುಬು... ಹಾಲಕ್ಕಿ ಒಕ್ಕಲುಗಳಾಗಲಿ ಸುಪ್ರೀಂಕೋರ್ಟಿನ ಮ... ಆದೇಶ ಅಂದರೆ "ಹರಿಜನ ಗಿರಿಜನರನ್ನು ಹೋಲು... ಎಂಬ ವ್ಯಾಖ್ಯಾನಕ್ಕೆ ಅನುಗುಣವಾದ ಹಿಂದುಳಿದಿರು... ಪಡೆದಿಲ್ಲವೆ? ಇವೆಲ್ಲ ಪಂಗಡಗಳಿಗೆ ದಲಿತರಿಗುಂಟರುವ... ಸಾಮಾಜಿಕ ಕೀಳರಿಮೆ ಕಾಡುತ್ತಿಲ್ಲವೆ? ಅಗಸ... ನಾಯಿಂದರು ಹಾಗೂ ಬೆಸ್ತರಿಗಿಂತ ಇದೀಗ ಹಿಂದು... ಲೇಬಲ್ಲಿಗಾಗಿ ಹಣಾಹಣಿ ನಡೆಸಿರುವ ಒಕ್ಕಲಿಗರು ಹಾ... ಲಿಂಗಾಯತರು ಪರಿಶಿಷ್ಟ ಜನಾಂಗಗಳ ಸ್ಥಿತಿಗತಿಗಳೊಂ... ಹೆಚ್ಚಿನ ಸಾಮ್ಯತೆ ಹೊಂದಿದ್ದಾರೆಯೇ?" (ರವೀಂದ್ರ ರೇ... ಲೇಖನ, ಅಕ್ಟೋಬರ್ 12. 1986) ಎಂ... ಮೇಲ್ಜಾತಿಗಳಿಗೆ ಪ್ರಶ್ನಿಸುತ್ತಾ ಸಂಘಟಿತ ಸಾಮರ್ಥ್ಯವೆಂಬು... ವ್ಯಕ್ತಿಯೋರ್ವನ ಜಾತಿಯ ಜೊತೆಗೆ ಆತ ಕಲಿತ ಶೈಕ್ಷ... ಪರಿಸರ, ಆತನ ಹಿಂದಿನ ತಲೆಮಾರಿನವರ ವಿದ್ಯಾಭ್ಯಾ... ಆತನ ಲಿಂಗ (gender) ಇತ್ಯಾದಿ ಸಾಮಾ... ಅನಾನುಕೂಲತೆ/ ಅನುಕೂಲತೆಗಳನ್ನೆಲ್ಲ ಒಳಗೊಂ... ವುದರಿಂದ ಜಾತಿ ಆಧಾರಿತ ಮೀಸಲಾತಿ ವೈಜ್ಞಾ... ವಾದದ್ದು ಎಂಬುದನ್ನು ಆವತ್ತು ಕರ್ನಾಟಕದ ಮೇಲ್... ಗಳಿಗೆ ಮತ್ತೊಮ್ಮೆ ಈ 'ಪತ್ರಿಕೆ'ಯೇ ಜ್ಞಾಪಿಸಿತ್ತು. ಆ... 'ಪತ್ರಿಕೆ' ಮಂಡಿಸಿದ್ದ ನಿಲುವುಗಳಿಗೆ ತುಸು ಹತ್ತಿರವಿರು... ಕಾಣುವ ಎರಡು 'ಸುಧಾರಿತ ಮೀಸಲಾತಿ' ಪದ್ಧತಿಗಳ... ವಿವರಿಸುವ ಬರಹಗಳು 'ತೆಹೆಲ್ಕಾ' ಮತ್ತು ... ಹಿಂದೂ'ವಿನಲ್ಲಿ ಪ್ರಕಟಗೊಂಡಿವೆ. ತೆಹೆಲ್ಕಾದ... ಪುರುಷೋತ್ತಮ್ ಅಗರವಾಲ್ (JNU ದೆಹಲಿ) ಎಸ್... ಎಸ್.ಟಿ., ಒಬಿಸಿ ವರ್ಗಗಳಿಗೆ ಶೇ. 70 ರಷ್ಟು ಮೆರಿ... ಅಂಕ, ಶೇ. 30 ರಷ್ಟು ಸಾಮಾಜಿಕ ಅನಾನುಕೂ... ಅಂಕಗಳನ್ನು ಕೊಡುವ ಮಾನದಂಡ ಅನುಸರಿಸಿ... 'ದಿ ಹಿಂದೂ'ವಿನಲ್ಲಿ (JNU ದೆಹಲಿ) ಸತೀಶ್ ದೇಶಪಾ... ಯೋಗೇಂದ್ರ ಯಾದವ (CSDS ದೆಹಲಿ)ಯವ... ಒಬಿಸಿಗಳಿಗೆ ಶೇ. 80 ಮೆರಿಟ್, ಶೇ. 20 ಸಾಮಾ... ಅನಾನುಕೂಲತೆಯ ಅಂಕಗಳ ಮಾನದಂಡವ... ವಿವರಿಸಿದ್ದಾರೆ.

ಈ ಎರಡೂ ವಿಶ್ಲೇಷಣೆಗಳೂ ವಿಶಾಲ ವ್ಯಾಪ್ತಿಯ... ಶೈಕ್ಷಣಿಕ ಪರಿಸರ, ತಲೆಮಾರುವಾರು ಶಿಕ್ಷಣ, ... ಇತ್ಯಾದಿ ಮಾನದಂಡಗಳನ್ನು ಒಳಗೊಂಡಿವೆ ಮ... ಮೀಸಲಾತಿ ಕುರಿತ ಹೊಸ ಚರ್ಚೆಗಳಿಗೆ ದ... ಮಾಡಿಕೊಡಲಿವೆ.


ಆದರೆ ಇವತ್ತು ಉನ್ನತ ಶಿಕ್ಷಣವೇ ಖಾಸಗಿಕ... ಗೊಂಡಿರುವಾಗ, ಶೈಕ್ಷಣಿಕ ಶುಲ್ಕವೆಂಬುದು ಗ...

'ದಿ ಹಿಂದೂ'ನಲ್ಲಿ ಸತೀಶ್ ದೇಶಪಾಂಡೆ, ಯೋಗೇಂದ್ರ ಯಾದವ್ ಮಂಡಿಸಿದ ಪ್ರಸ್ತಾಪದ ಸಂಕ್ಷಿಪ್ತ ವಿವರವಿಲ್ಲಿದೆ. ಈ ನೀತಿಯನ್ನು ದೆಹಲಿಯ ಜವಹರಲಾಲ್ ನೆಹರು ವಿ.ವಿ.ಯಲ್ಲಿ ಬಹುವರ್ಷಗಳಿಂದ ಜಾರಿ ಮಾಡಲಾಗಿದೆ.


ಯೋಗೇಂದ್ರ

ಈ ಪ್ರಸ್ತಾವನೆಯಲ್ಲಿ ಎರಡು ವಿವಿಧ ಅಂಕಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳಲಾಗುತ್ತದೆ. 1) ಅಕಾಡೆಮಿಕ್ ಮೆರಿಟ್(ಶೇ.80) 2) ಸಾಮಾಜಿಕ ಅನಾನುಕೂಲತೆ ಅಂಕ (ಶೇ. 20). ಈ ಎರಡನ್ನೂ ಸೇರಿಸಿ ಮೀಸಲಾತಿ ನಿರ್ಧಾರ ಮಾಡಲಾಗುತ್ತದೆ.

'ಅಕಾಡೆಮಿಕ್ ಮೆರಿಟ್'ನ್ನು ಪರೀಕ್ಷಾ ಅಂಕಗಳು ಒದಗಿಸುತ್ತವೆ. ಸಾಮಾಜಿಕ ಅನಾನುಕೂಲತೆ ಅಂಕಗಳನ್ನು ನಿರ್ಧರಿಸಲು ಇಲ್ಲಿ ತುಲನಾತ್ಮಕ ಸಾಮಾಜಿಕ ಅನಾನುಕೂಲತೆ (Comparative Social Disadvantages)ಗಳನ್ನು ಸಮೂಹ ಅನಾನುಕೂಲತೆ (Group disadvantages) ಮತ್ತು ವೈಯಕ್ತಿಕ ಅನಾನುಕೂಲತೆ (Individual disadvantage) ಎಂಬ ಎರಡು ವಿಧಗಳಲ್ಲಿ ಪರಿಗಣಿಸಲಾಗುತ್ತದೆ.


ದೇಶಪಾಂಡೆ

ಸಮೂಹ ಅನಾನುಕೂಲತೆ ಪರಿಗಣಿಸುವಾಗ ವರ್ಗ/ಜಾತಿ, ಲಿಂಗ, ಪ್ರದೇಶಗಳನ್ನು ಗಣನೆಗೆ ತೆಗೆದುಕೊಳ್ಳಲಾಗುತ್ತದೆ.

ಇದನ್ನು ನಿರ್ಧರಿಸುವಾಗ ಉನ್ನತ ಶಿಕ್ಷಣದಲ್ಲಿನ ಜಾತಿವಾರು, ಪ್ರದೇಶವಾರು, ಲಿಂಗ ಆಧಾರಿತ ವಿದ್ಯಾರ್ಥಿಗಳ ಅಂಕಿಅಂಶಗಳನ್ನು ಗಣನೆಗೆ ತೆಗೆದುಕೊಳ್ಳಬೇಕು.

ವೈಯಕ್ತಿಕ ಅನಾನುಕೂಲತೆಗಳಲ್ಲಿ ಕುಟುಂಬದ ಇತಿಹಾಸ, ತಲೆಮಾರುವಾರು ಶಿಕ್ಷಣ, ವರಮಾನ, ಓದಿದ ಶಾಲೆಯ ಗುಣಮಟ್ಟ ಮುಂತಾದ ಅಂಶಗಳನ್ನು ಪರಿಗಣಿಸಬಹುದು. ಸದ್ಯದ ಪ್ರಸ್ತಾವನೆಯಲ್ಲಿ ಎರಡು ಅಂಶಗಳನ್ನು ಗಣನೆಗೆ ತೆಗೆದುಕೊಳ್ಳಲಾಗಿದೆ. 1) ಹೈಸ್ಕೂಲ್‌ವರೆಗೆ ಓದಿದ ಶಾಲೆಯ ಗುಣಮಟ್ಟ 2) ತಂದೆ-ತಾಯಿಗಳ ವಿದ್ಯಾಭ್ಯಾಸ, ವರಮಾನ.

ಮುಂದಿನ ನೀಡಿರುವ 3 ಕೋಷ್ಟಕಗಳ ಆಧಾರದ ಮೇಲೆ ಈ ವಿಧಾನ ಹೇಗೆ ಜಾರಿಗೆ ಬರುತ್ತದೆ ಎಂಬುದನ್ನು ಇಲ್ಲಿ ವಿವರಿಸಲಾಗಿದೆ:

ಕೋಷ್ಟಕ-1(ಸಮೂಹ ಅನಾನುಕೂಲತೆ)ರಲ್ಲಿ ಮೂರು ಅಂಶಗಳನ್ನು ಪರಿಗಣಿಸಲಾಗಿದೆ.

1) ಅಭ್ಯರ್ಥಿಯ ವಾಸದ ಪ್ರದೇಶದ ತುಲನಾತ್ಮಕ/ಹೋಲಿಕೆಯಾತ್ಮಕ ಹಿಂದುಳಿದಿರುವಿಕೆ. 2) ಅಭ್ಯರ್ಥಿಯ ಜಾತಿ ಮತ್ತು ಸಮುದಾಯ. 3) ಅಭ್ಯರ್ಥಿಯ ಲಿಂಗ.

ಮೀಸಲಾತಿ: ಹೀಗೊಂದು ಪ್ರಯೋಗ

ಇಲ್ಲಿ ಪ್ರದೇಶವೆಂದರೆ ಒಂದು ರಾಜ್ಯ ಅಥವಾ ರಾಜ್ಯದ ಉಪವಿಭಾಗವಿರಬಹುದು. ವಿಭಾಗ-1 ಅತಿ ಹಿಂದುಳಿದ ಪ್ರದೇಶವಾದರೆ, ವಿಭಾಗ-4 ಅತಿ ಅಭಿವೃದ್ಧಿ ಹೊಂದಿದ ಪ್ರದೇಶವಾಗಿರುತ್ತದೆ. ಕೋಷ್ಟಕದ ಎಡಭಾಗದಲ್ಲಿ ಅಂಕಗಳು ಗರಿಷ್ಠವಾಗಿದ್ದು, ಬಲಕ್ಕೆ ಹೋದಂತೆ ಕಡಿಮೆಯಾಗುತ್ತವೆ.

ಕೆಳ ಒಬಿಸಿ, ಅತಿ ಹಿಂದುಳಿದ ಜಾತಿಗಳು, ಒಬಿಸಿ ಮುಸ್ಲಿಮರು, ಅತಿ ಹೆಚ್ಚು ಸಾಮಾಜಿಕ ಅನಾನುಕೂಲತೆ ಹೊಂದಿದ ವಿಭಾಗದಲ್ಲಿದ್ದು, ಮೇಲ್ಜಾತಿಯ ಒಬಿಸಿ (ಮೇಲ್ಜಾತಿ ಹಿಂದುಗಳು), ಜೈನ್, ಸಿಖ್, ಕ್ರಿಶ್ಚಿಯನ್, ಪಾರ್ಸಿಗಳನ್ನು ಹೆಚ್ಚು ಮುಂದುವರೆದ ಗುಂಪಲ್ಲಿ ಸೇರಿಸಲಾಗಿದೆ. ಆದ್ದರಿಂದ ಅನಾನುಕೂಲತೆ ಅಂಕಗಳು ಮೇಲಿನಿಂದ ಕೆಳಕ್ಕೆ ಹೋದಂತೆ ಕಡಿಮೆಯಾಗುತ್ತವೆ. ಪ್ರದೇಶ, ಜಾತಿಯನ್ನು ಪರಿಗಣಿಸಿ ಮಹಿಳೆಯರಿಗೆ ಹೆಚ್ಚಿನ ಅಂಕ ನೀಡಲಾಗಿದೆ.

ಹಿಂದುಳಿದ ಪ್ರದೇಶ(ವಿಭಾಗ-4)ದಿಂದ ಬಂದ ಕೆಳ ಒಬಿಸಿ, ಅತಿ ಹಿಂದುಳಿದ ಜಾತಿ (MBC), ಮುಸ್ಲಿಂ ಒಬಿಸಿಗೆ ಸೇರಿದ ಮಹಿಳೆ ಗರಿಷ್ಠ 12 ಅಂಕ ಪಡೆಯುತ್ತಾಳೆ. ಹಾಗೆಯೇ ಅತಿ ಅಭಿವೃದ್ಧಿ ಹೊಂದಿದ ಪ್ರದೇಶದಲ್ಲಿರುವ ಮುಂದುವರೆದ ಜಾತಿಯ ಪುರುಷನಿಗೆ ಸೊನ್ನೆ ಅಂಕಗಳು ಲಭ್ಯವಾಗುತ್ತವೆ.

B ಮತ್ತು C ಕೋಷ್ಟಕಗಳು ಇದೇ ವಿಧದ... ಕಾರ್ಯ ನಿರ್ವಹಿಸುತ್ತವೆ. ವೈಯಕ್ತಿಕ ಅನಾನುಕೂಲತೆ... ಸಂಬಂಧಿಸಿದ ಈ ಕೋಷ್ಟಕಗಳಲ್ಲಿ ಸಮೂಹ... ಅನಾನುಕೂಲತೆಯ ಎಲ್ಲ ಅಂಶಗಳನ್ನು ಕೈಬಿಡಲಾಗಿದೆ...

ಕೋಷ್ಟಕ B ಪ್ರಕಾರ ಹಳ್ಳಿ ಅಥವಾ ಚಿ... ಪಟ್ಟಣದಲ್ಲಿ ಶಾಲೆ ಕಲಿತವರೆಲ್ಲರೂ ಗರಿಷ್ಠ 5 ಅಂ... ಪಡೆಯುತ್ತಾರೆ. ಕೋಷ್ಟಕ Cಯಲ್ಲಿ ತಂದೆತಾಯಿಗ... ಶೈಕ್ಷಣಿಕ ಅರ್ಹತೆ, ಮತ್ತು ವರಮಾನಗಳನ್ನು ಆಧ... ಅನಾನುಕೂಲತೆ ಅಂಕ ನೀಡಲಾಗುವುದು. ತಂದೆ-ತಾಯಿ... ಇಬ್ಬರೂ ವರಮಾನ ತೆರಿಗೆ ಕಟ್ಟದಿದ್ದರೆ ಗರಿಷ್ಠ ... ಅಂಕಗಳು, ತಂದೆ-ತಾಯಿ ಇಬ್ಬರೂ ಮ್ಯಾನೇಜರ... ಬ್ಯುಸಿನೆಸ್‌ಮೆನ್, ವೃತ್ತಿಪರ ನೌಕರ ಅಥವಾ ಕ್ಲಾಸ್ II ಆಫೀಸರಾಗಿದ್ದರೆ ಅಂಥವರಿಗೆ ಸೊನ್ನೆ ಅಂ... ಲಭ್ಯವಾಗುತ್ತದೆ.

ಹೀಗೆ ಈ ಮೂರೂ ಕೋಷ್ಟಕಗಳ ಆಧಾರ... ಮೇಲೆ ಗರಿಷ್ಠ 20 ಅಂಕಗಳಿಗೆ ಮೌಲ್ಯಮಾಪನ ಮಾ... ಶೇ 80 ಅಕಾಡೆಮಿಕ್ ಮೆರಿಟ್ ಸೇರಿಸಿ, ಅಂತಿಮ... ಸ್ಕೋರನ್ನು ನಿರ್ಧರಿಸಬಹುದಾಗಿದೆ.

ಮುಂದಿನ ಪುಟದಲ್ಲಿ ಕೋಷ್ಟಕಗಳನ್ನು ನೀಡಲಾಗಿ...


ವಿ.ವಿ:'ಕೋ'ಗೊಂದು 'ಜಾ'ಗೊಂದು

ಕೋ-ಜಾ ಸರ್ಕಾರದ ಕೋ-ಜಾ ಪಕ್ಷಗಳು ಕರ್ನಾಟಕದ ಎರಡು ಪ್ರತಿಷ್ಠಿತ ವಿಶ್ವವಿದ್ಯಾಲಯಗಳನ್ನು ನನಗೊಂದು-ನಿನಗೊಂದು ಎಂಬಂತೆ ಹಂಚಿಕೊಂಡಿವೆ. ಈ ಮೂಲಕ ಬೆಂಗಳೂರು ವಿ.ವಿ ಮತ್ತು ಕುವೆಂಪು ವಿ.ವಿ.ಗಳು ಇಬ್ಬರು ಸರಳ ವ್ಯಕ್ತಿಗಳನ್ನು ಕುಲಪತಿಗಳಾಗಿ ಕಾಣುವಂತಾಗಿವೆ. ಈ ಹಿಂದಿದ್ದ ಬೆಂಗಳೂರು ವಿವಿಯ ವೇದಗಳ ಕುಳ, ಫೋಟೋ ಪ್ರತಿಭೆ ತಿಮ್ಮಪ್ಪ ಮತ್ತು ಕುವೆಂಪು ವಿವಿಯ ಜಾತಿಕುಳ, ಬೌದ್ಧಿಕ ಬಡತನದ ಚಿದಾನಂದ ಗೌಡರು ತಮ್ಮ ತೆವಲು-ಐಲುಗಳಿಂದ ಗಬ್ಬೆಬ್ಬಿಸಿದ್ದ ಈ ಎರಡೂ ವಿ.ವಿ.ಗಳು ಈಗ ತಣ್ಣಗೆ ಶಿಕ್ಷಣದ ಕಡೆ ಗಮನ ಕೊಡುತ್ತವೋ ನೋಡಬೇಕು.

ಮುಖ್ಯಮಂತ್ರಿ ಕುಮಾರಸ್ವಾಮಿ ನಮಗೊಂದು-ನಿಮಗೊಂದು ಅಂದಾಗ ಮರಣಾನಂದ ಪಟ್ಟ ಚೆಡ್ಡಿಗಳು ತಮ್ಮ ಐಲು-ಪೈಲು ವಿಚಾರಗಳನ್ನು ಯುವ ಜನತೆಯ ತಲೆಗೆ ಬಿತ್ತಲು, ಶಿಕ್ಷಣಕ್ಕೂ ಕೇಸರಿಗೂ ವ್ಯತ್ಯಾಸವೇ ಇಲ್ಲದಂತೆ ಮಾಡಲು ಆಸೆಪಟ್ಟು ಆ ಜವಾಬ್ದಾರಿಯನ್ನು ಶಂಕರಮೂರ್ತಿಗೆ ವಹಿಸಿದರು. ರಾಜ್ಯದ ಅದೆಷ್ಟೋ ತಲೆಗಳ ಒಳಗೆ ಚೆಡ್ಡಿ ಮತ್ತು ಜನಿವಾರಗಳನ್ನು ತಡಕಿ ಸುಸ್ತಾದ ಶಂಕರಮೂರ್ತಿ ಮತ್ತು ವಿಎಸ್.ಆಚಾರ್ಯ ಜೋಡಿ ಕೊನೆಗೆ ಸಾಮಾಜಿಕ, ಆರ್ಥಿಕ, ರಾಜಕೀಯವಾಗಿ ತೀರಾ ಹಿಂದುಳಿದ ಸಮುದಾಯವೊಂದರ ಪ್ರೊ. ಶೇರೀಗಾರರನ್ನು ಹುಡುಕಿ ಕುಲಪತಿ ಮಾಡಿ ಕೈತೊಳೆದು ಕೊಂಡಿತು. ಶಂಕರಮೂರ್ತಿಯ ಕ್ಯಾಂಡಿಡೇಟ್ ಎಂಬ ಕಾರಣಕ್ಕೆ ಶೇರೀಗಾರ್ ಚೆಡ್ಡಿ ಎಂದು ಭ್ರಮಿಸಿದ ಜನ ಕುವೆಂಪು ವಿ.ವಿ.ಗೆ ಕೇಸರಿ ಬಣ್ಣ ಬಳಿಯುವುದು ಗ್ಯಾರಂಟಿ ಎಂಬ ಆತಂಕದಲ್ಲಿದ್ದರು. ಆದರೆ ಈ ಶೇರೀಗಾರ್ ಮಾಜಿ ಕಾಮ್ರೇಡ್ ಎಂಬ ವಿಷಯ ಬಹಳ ಜನಕ್ಕೆ ಗೊತ್ತಿಲ್ಲ.

ಅತೀ ಹಿಂದುಳಿದ ದೇವಾಡಿಗ ಸಮುದಾಯದ ಒಳಪಂಗಡವೊಂದಕ್ಕೆ ಸೇರಿದ ಪ್ರೊ. ಶೇರೀಗಾರ್ ಮಂಗಳೂರು ವಿ.ವಿ.ಯಿಂದ ಕೆಲಸ ಆರಂಭಿಸಿದರು. ರಸಾಯನ ಶಾಸ್ತ್ರದ ಪ್ರೊಫೆಸರ್ ಆದ ಇವರು ಶಿವಮೊಗ್ಗಕ್ಕೆ ಬರುವ ಹೊತ್ತಿಗೆ ಮಂಗಳೂರು, ಮೈಸೂರು ಎಂದೆಲ್ಲಾ ಓಡಾಡಿ ದಣಿದಿದ್ದರು. ಮೂಲತಃ ಕಮ್ಯೂನಿಸ್ಟ್ ಆದ ಶೇರೀಗಾರ್‌ರವರು ಕೊಂಚ ಅಧೈರ್ಯವಂತ, ಯಾರ್‍ಯಾರು ಏನೇನು ಹೇಳುತ್ತಾರೋ ಅದನ್ನೆಲ್ಲಾ ಕೇಳುವ ಪ್ರವೃತ್ತಿಯವರೆಂಬುದೇ ಬಿಜೆಪಿಗಳು ಇವರನ್ನು ಒಪ್ಪುವುದಕ್ಕೆ ಇರುವ ಅರ್ಹತೆಗಳು. ಇಷ್ಟನ್ನು ಹೊರತುಪಡಿಸಿದರೆ ಶೇರೀಗಾರ್ ಚಿದಾನಂದಗೌಡರಿಗಿಂತ ಬೆಟರ್.

ಸ್ವಾಮಿಗಳ ಕಾಲಿಗೆ ಬೀಳುವುದು, ಪಾದಪೂಜೆ ಮಾಡಿ, ಪ್ರವಚನ ಕೇಳುವುದೇ ವೈಚಾರಿಕತೆ ಎಂದು ತಿಳಿದಿದ್ದ




ಚಿದಾನಂದಗೌಡರಿಗಿಂತ ಪ್ರಬುದ್ಧರಾಗಿರುವ ಶೇರೀಗಾರ್ ಹಿಂದೊಮ್ಮೆ ಇದೇ ಚೆಡ್ಡಿಗಳ ವಿರುದ್ಧ ಹೋರಾಟ ನಡೆಸಿದ್ದು ಶಂಕರಮೂರ್ತಿ ಪರಿವಾರಕ್ಕೆ ನೆನಪಿರಲಿಕ್ಕಿಲ್ಲ. ಹಿಂದುಳಿದ ವರ್ಗದ ವೆಂಕಟರಾಮಯ್ಯ ವಿ.ಸಿ. ಆಗಿದ್ದಾಗ ಚಿಲ್ಲರೆ ಕಾರಣಗಳನ್ನು ನೀಡಿ ಅವರನ್ನು ಕಿತ್ತು ಹಾಕಿಸಿದ್ದ ಚೆಡ್ಡಿಗಳು ಆಗಲೇ ಕುವೆಂಪು ವಿವಿಯನ್ನು ತಮ್ಮ ಗರ್ಭಗುಡಿ ಮಾಡಿಕೊಳ್ಳಲು ಹೊರಟಿದ್ದರು. ಆಗ ವೆಂಕಟರಾಮಯ್ಯನವರ ಪ್ರಬಲ ಬೆಂಬಲಿಗರಾಗಿದ್ದು, ಚೆಡ್ಡಿಗಳ ವರಾತಗಳನ್ನು ಪ್ರಶ್ನಿಸಿ ಗೌರ್ನರ್‌ವರೆಗೂ ಓಡಾಡಿದ್ದರು ಶೇರೀಗಾರ್. ಇಂಥವರನ್ನೇ ಚೆಡ್ಡಿಗಳು ಇಂದು ಇಲ್ಲಿ ತಂದು ಕೂಡಿಸಿರುವುದರ ಹಿಂದೆ ಅನುಮಾನಗಳೇಳುತ್ತಿವೆ. ಜನಿವಾರ ಮತ್ತು ಚೆಡ್ಡಿಗಳಲ್ಲಿಯೇ ಪ್ರತಿಭೆ ಇರುವುದು ಎಂದು ನಂಬಿರುವ ಬಿಜೆಪಿಗಳು ಮೀಸಲಾತಿ ಕಮ್ಯುನಿಟಿಯ ಶೇರೀಗಾರರನ್ನು ಕುಲಪತಿ ಮಾಡಿರುವುದರ ಗುಟ್ಟೇನೆಂಬುದು ಹೊರಬೀಳಬೇಕಾಗಿದೆ.

ಶೇರೀಗಾರ್ ಕುಲಪತಿ ಆದ ತಕ್ಷಣ ಪತ್ರಿಕೆಗಳಿಗೆ ನೀಡಿದ ಸಂದರ್ಶನದಲ್ಲಿ ತಮ್ಮ ವಿವಿಯ ನಕ್ಸಲೀಯ ಚಟುವಟಿಕೆಗಳ ಬಗೆಗಿನ ಪ್ರಶ್ನೆಗೆ ಉತ್ತರಿಸುತ್ತಾ "ನಕ್ಸಲೀಯರ ಸಿದ್ಧಾಂತಗಳನ್ನು ಒಪ್ಪಿರುವವರು, ಅವರ ಬಗ್ಗೆ ಮಾತಾಡುವವರು ನಮ್ಮ ವಿವಿಯಲ್ಲಿರಬಹುದು, ಆದರೆ ಅವರನ್ನು ತಯಾರಿ ಮಾಡುವವರ್‍ಯಾರೂ ಇಲ್ಲಿಲ್ಲ" ಎಂದಿದ್ದರು. ಈ ಮಾತುಗಳನ್ನು ಶಂಕರಮೂರ್ತಿ ಮೊದಲಾದ ಚೆಡ್ಡಿಗಳು ಕೇಳಿಸಿಕೊಂಡು ಪಾಪಮುಕ್ತರಾಗಬೇಕಿದೆ.

ಚಿದಾನಂದಗೌಡರು ಮಾಡಿರುವ ಸಾಲ ಮತ್ತು ಬೋಧಕೇತರ ವರ್ಗದ ಗುಂಪುಗಾರಿಕೆ-ಚೆಡ್ಡಿ ಚಟುವಟಿಕೆಗಳನ್ನು ತಹಬಂದಿಗೆ ತಂದು ಉತ್ತಮ ಆಡಳಿತ ಕೊಡುತ್ತಾರಾ ಶೇರೀಗಾರ್ ಕಾಯ್ದು ನೋಡಬೇಕು.

ಬೆಂಗಳೂರು ವಿ.ವಿ. ರಂಗನಾಥ್



ಬೆಂಗಳೂರು ವಿ.ವಿ.ಯ ಹೊಸ ಕುಲಪತಿ ರಂಗನಾಥ್ ಹಾಸನದವರು. ಮೈಸೂರು ವಿ.ವಿ.ಯಲ್ಲಿನ ಬಾಟನಿ ಪ್ರೊಫೆಸರ್. ಇವರನ್ನು ಬೆಂಗಳೂರಿಗೆ ತಂದ ದೇವೇಗೌಡರ ಕುಟುಂಬ ರಾಜಮಾತೆ ಚೆನ್ನಮ್ಮರ ಆಣತಿಯಂತೆ ರಂಗನಾಥ್‌ರನ್ನು ಕುಲಪತಿ ಸೀಟಿಗೆ ತಂದು ಕೂರಿಸಿದೆ. ಅಂದಹಾಗೆ ಈ ರಂಗನಾಥ್ ಚೆನ್ನಮ್ಮರ ಹತ್ತಿರದ ಸಂಬಂಧಿ. ನೋಡಲು ಹಸುವಿನಂತೆ ಕಾಣುವ ಇವರು ಸ್ವಭಾವತಃ ಮೃಧು ವ್ಯಕ್ತಿತ್ವದವರು. ಅಕಾಡೆಮಿಕ್ ಗಟ್ಟಿತನವಿರುವ ಇವರಿಗೆ ಒಂದು ವಿವಿಯನ್ನು ನಿಭಾಯಿಸುವಷ್ಟು ಆಡಳಿತದ ಗಟ್ಟಿತನವಿಲ್ಲ ಎಂಬುದು ಹಲವರ ಅಭಿಪ್ರಾಯ. ಆದರಲ್ಲೂ ಗೊಂದಲಗಳ ಗೂಡಾಗಿರುವ ಬೆಂಗಳೂರು ವಿ.ವಿ.ಯ ಶೈಕ್ಷಣಿಕ ಸಿಕ್ಕುಗಳ ಒಳಗೆ ಸಿಕ್ಕಿ ನರಳುವ ಅಪಾಯ ಕುಮಾರಸ್ವಾಮಿಗಾಗಲೀ, ಅವರ ಕುಟುಂಬಕ್ಕಾಗಲೀ ಅರ್ಥವಾಗುವುದಿಲ್ಲ.

ಈ ಹಿಂದೆ ವಿ.ಸಿ.ಯಾಗಿದ್ದ ತಿಮ್ಮಪ್ಪ ವಿ.ವಿ.ಯ ಯಾವುದಕ್ಕೂ ತಲೆ ಕೆಡಿಸಿಕೊಳ್ಳದೆ, ಪತ್ರಿಕೆಗಳಿಗೆ ಪೋಜು ಕೊಡುತ್ತಾ, ಹೋದ ಹೋದಲೆಲ್ಲಾ ವೇದಗಳ ಶ್ಲೋಕಗಳನ್ನು ಪಠಿಸುತ್ತಾ ದೇವಮಾನವನಂತೆ ಇದ್ದೂ ಇಲ್ಲದಂತಿದ್ದರು. ಮುಖದಲ್ಲೇ ಅಕಾಡೆಮಿಕ್ ಶಿಸ್ತನ್ನು ಅಂಟಿಸಿಕೊಂಡಿದ್ದ ಈ ವ್ಯಕ್ತಿ ದಲಿತರ ಉದ್ಧಾರದ ಮಾತುಗಳ ಕೊನೆಯಲ್ಲಿ ವೇದಗಳ ಶ್ಲೋಕ ಹೇಳುವ, ಪ್ರಾಯ್ಡ್‌ನನ್ನು ಭಾರತೀಕರಿಸುವ ಕೆಲಸಗಳಲ್ಲಿ ಬ್ಯೂಸಿಯಾಗಿದ್ದರು. ಕಲಾ ವಿಭಾಗಗಳ ಟಾಯ್ಲೆಟ್ಟುಗಳೆಲ್ಲಾ ಚರಂಡಿಗಳಾಗಿ ಹೋಗಿದ್ದರೂ ವಿಜ್ಞಾನ ವಿಭಾಗಗಳ ಹೈಫೈ ವಿದ್ಯಾರ್ಥಿಗಳ ಬಟ್ಟೆ ಕೊಳೆಯಾಗದಂತೆ ಒಳ್ಳೆಯ ದೆಸ್ಕುಗಳನ್ನು ಒದಗಿಸಿ ಪಾವನರಾಗಿದ್ದರು. ಈ ನಡುವೆ ನಿರಂತರ ನಡೆಯುತ್ತಲೇ ಇದ್ದ ಹಾಸ್ಟೆಲ್ ವಿದ್ಯಾರ್ಥಿಗಳ ಗಲಾಟೆ, ಜಾತಿ ನಿಂದನೆಯ ಘಟನೆಗಳು, ಮೈಲಾರಪ್ಪಗಳ ವರಾತ, ಇಂಗ್ಲಿಷ್ ಡಿಪಾರ್ಟ್‌ಮೆಂಟಿನ ಬರ್ಬರ ಚಿಂತನೆಗಳು ಇವೆಲ್ಲವೂ ತಿಮ್ಮಪ್ಪನವರ ಪಾದಕ್ಕೆ ಅರುಹಾಗಲೇ ಇಲ್ಲ.

ಇವರು ಹೋದ ನಂತರ ಪ್ರಭಾರಿ ಕುಲಪತಿಯಾದ ಸುಧಮ್ಮ ಹುಡುಗಿಯರು ಮತ್ತು ಹುಡುಗರು ಎಲ್ಲಿ ಪಕ್ಕಪಕ್ಕ ಕೂರುತ್ತಾರೆ, ಯಾವ ರೀತಿ ಡ್ರೆಸ್ ಮಾಡ್ತಾರೆ ಅಂತ ಕಂಡಿಡಿದು ಅದಕ್ಕೇ ಅಂತ ಒಂದು ಕಾನೂನು ಮಾಡಲು ಓಡಾಡಿದ್ದು ಬಿಟ್ಟರೆ, 'ಪಾಪ ಅಯಮ್ಮ ಏನ್ಮಾಡುತ್ತೆ ಹಂಗ್ ಬಂತು, ಹಿಂಗ್ ಓಯ್ತು' ಅನ್ನುವಂತೆ ಕಾಲ ಕಳೆದುಬಿಟ್ಟರು. ಇವೆಲ್ಲವುಗಳ ಮಧ್ಯೆ ಕುಲಪತಿಯಾಗಿರುವ ಎಚ್.ಎ. ರಂಗನಾಥ್ ದೇವೇಗೌಡ-ಚೆನ್ನಮ್ಮರ ಫೋಟೋ ಪೂಜಿಸದಂತೆ ವಿ.ವಿ.ಯ ಶೈಕ್ಷಣಿಕ ಅಭಿವೃದ್ಧಿಯತ್ತ ಗಮನ ಕೊಡಬೇಕಾಗಿದೆ. ಅಲ್ಲಿನ ಗೋಜಲುಗಳನ್ನು ಬಿಡಿಸಬೇಕಾಗಿದೆ. ಅದಕ್ಕೆ ಅಂಟಿರುವ ಕಳಂಕಗಳನ್ನು ತೊಳೆಯಬೇಕಾಗಿದೆ. ವಿ.ವಿ.ಯನ್ನು ಜಾತಿಕುಳಗಳನ್ನು ತಯಾರಿಸುವ ಕಾರ್ಖಾನೆಯಾಗದಂತೆ ತಡೆಯಬೇಕಾಗಿದೆ.

ಈ ಮಧ್ಯೆ ಕಳೆದ ನಾಲ್ಕು ತಿಂಗಳುಗಳಿಂದ ಖಾಲಿ ಬಿದ್ದಿರುವ ಗುಲಬರ್ಗಾ ವಿ.ವಿ.ಗೂ ಯಾರನ್ನು ವಿ.ಸಿ ಮಾಡಬೇಕು ಅಂತ ಸರ್ಕಾರ ತಲೆಕೆಡಿಸಿಕೊಂಡಿದೆ. ಇದಕ್ಕೇ ಅಂತ ಒಂದು 'ಶೋಧ ಸಮಿತಿ'ಯನ್ನು ನೇಮಿಸಲಾಗಿದೆ. ಸುಮಾರು 70 ಜನ ಇಲ್ಲಿಗೆ ವಿಸಿಯಾಗುವ ಕನಸುಕಾಣುತ್ತಿದ್ದಾರೆ. ಈ 70 ಜನರಲ್ಲಿ ಒಬ್ಬರನ್ನೇ ವಿಸಿ ಮಾಡಬೇಕಾಗಿರುವುದರಿಂದ ಅವರ ಕನಸು ಅರ್ಧ ಕೇಸರಿ ಅರ್ಧ ಹಸಿರಾಗಿರಬೇಕೆಂಬ ಒಪ್ಪಂದ ಮಾಡಿಕೊಂಡಿದೆಯಂತೆ ಕೋ-ಜಾ ಸರ್ಕಾರ.

-ಹುಲಿಕುಂಟೆ ಮೂರ್ತಿ

➔

ಕುಸುಮವಾಗಿರುವಾಗ ಕೇವಲ ಶೇ. 20 ಅಥವಾ ಶೇ. 30 ರಷ್ಟು 'ಸಾಮಾಜಿಕ ಅನಾನುಕೂಲತೆ ಅಂಕ'ಗಳನ್ನು ನೀಡುವುದು ಮತ್ತೆ ಮೇಲ್ಜಾತಿಗಳಿಗೇ ಮಣೆ ಹಾಕಿದಂತಾಗುತ್ತದೆ. ಸದ್ಯದ ಅಂಕ ಆಧಾರಿತ ಮೆರಿಟ್‌ಗೂ ಸಾಕಷ್ಟು ಮಿತಿಯಿದೆ. ಭಾರತದಂತಹ ಸಂಕೀರ್ಣ ಸಮಾಜದಲ್ಲಿ ಪ್ರತಿಭೆ ಎಂಬುದು ವಿಭಿನ್ನ ರೂಪಗಳಲ್ಲಿ ಅಡಗಿರುತ್ತದೆ. ಅದನ್ನೆಲ್ಲ ಶೋಧಿಸುವ ಭಿನ್ನ ಮಾರ್ಗಗಳ ಬಗ್ಗೆ ಶಿಕ್ಷಣ ತಜ್ಞರು ಯೋಚಿಸಬೇಕಾಗಿದೆ.

ಈ ಮಿತಿಯನ್ನು ದಾಟುವ ಶೈಕ್ಷಣಿಕ ಪರಿಹಾರಗಳೂ ಕೇವಲ ಶೈಕ್ಷಣಿಕವಾಗಿರದೇ, ಸಾಮಾಜಿಕ, ಆರ್ಥಿಕ ಅಂಶಗಳನ್ನೂ ಒಳಗೊಂಡಿವೆ. ಮೀಸಲಾತಿ ಪ್ರಮಾಣ ಶೇ. 50 ದಾಟಬಾರದೆಂಬುದನ್ನು ಸುಪ್ರೀಂಕೋರ್ಟ್ ಮರುಪರಿಶೀಲಿಸಬೇಕು. ಮೀಸಲಾತಿ ಪ್ರಮಾಣವನ್ನು ಶೇ. 100 ಕ್ಕೆ ಏರಿಸಿ, ಆಯಾ ಜಾತಿಯ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿಯ ಪ್ರಮಾಣ ಹಂಚಿಕೆಯಾಗುವಂತಿರಬೇಕು. ಅನೇಕ ಅಸಂಘಟಿತ ಜಾತಿಗಳು ಗುರುತಿಸಲ್ಪಡದೇ ಹೋಗಬಹುದಾದ್ದರಿಂದ ಒಂದು ವಿಶಾಲ ವ್ಯಾಪ್ತಿಯ ಜಾತಿ ಜನಗಣನೆ ಮಾಡುವುದು ಅವಶ್ಯವಾಗಿದೆ. ಒಳಮೀಸಲಾತಿ, ಕೆನೆಪದರುಗಳನ್ನು ಉಳಿಸಿಕೊಂಡೇ ಜಾತಿವಾರು ಜನಸಂಖ್ಯಾ ಆಧರಿತ ಮೀಸಲಾತಿ ಜಾರಿಗೆ ತರುವತ್ತ ಹೊಸ ಹೆಜ್ಜೆ ಹಾಕಬಹುದು. ಮೀಸಲಾತಿಯು ಅಲಕ್ಷಿತ ಸಣ್ಣಪುಟ್ಟ ಜಾತಿಗಳಿಗೆ ತಲುಪಲು ಒಳಮೀಸಲಾತಿ ಹಾಗೂ ಮೀಸಲಾತಿ ಸೀಟು ಖಾಲಿ ಉಳಿದಾವು ಎಂಬ ನೆಪದಲ್ಲಿ ಅವನ್ನು ಜನರಲ್ ಮೆರಿಟ್‌ಗೆ ವರ್ಗಾಯಿಸುವುದನ್ನು ತಪ್ಪಿಸಲು ಕೆನೆಪದರ ನೀತಿಯನ್ನು ಹಾಗೇ ಉಳಿಸಿಕೊಳ್ಳುವುದು ಅತ್ಯಂತ ಮಹತ್ವದ ಸಂಗತಿಯಾಗಿದೆ.

ಮೀಸಲಾತಿ ಎಂಬುದು ಸಕಲ ಪರಿಹಾರಗಳನ್ನು ನೀಡುವ ಸಾಧನವಂತೂ ಅಲ್ಲವೇ ಅಲ್ಲ, ಸಾವಿರ ಹುದ್ದೆಗಳಿಗೆ 4 ಲಕ್ಷದಷ್ಟು ಜನ ಸ್ಪರ್ಧಿಸುತ್ತಿರುರಾಗ, ಶೇ. 100 ರಷ್ಟು ಮೀಸಲಾತಿ ಇಟ್ಟರೂ 3 ಲಕ್ಷ 99 ಸಾವಿರ ಜನ ನಿರುದ್ಯೋಗಿಗಳಾಗಿಯೇ ಉಳಿಯುತ್ತಾರೆ. ಮೀಸಲಾತಿಯಿಂದ ದೊರೆಯುತ್ತಿರುವ ಈ ಸಣ್ಣ ಪರಿಹಾರವನ್ನು ಹಾಗೆಯೇ ಉಳಿಸಿಕೊಂಡು, ಉಳಿದ 3 ಲಕ್ಷ 99 ಸಾವಿರ ನಿರುದ್ಯೋಗಿಗಳ ಬಗ್ಗೆ ಚಿಂತಿಸುವುದು ಈಗ ಅವಶ್ಯವಾಗಿದೆ. ಮೀಸಲಾತಿ ಎಂಬುದು ಶಿಕ್ಷಣ, ಉದ್ಯೋಗಗಳಿಗಷ್ಟೇ ಸೀಮಿತವಾಗದೇ, ಭೂಸುಧಾರಣೆಗೂ ವ್ಯಾಪಿಸಬೇಕೆಂದು ಮಂಡಲ್ ವರದಿಯಲ್ಲೇ ಹೇಳಲಾಗಿತ್ತು.

ಎಲ್ಲ ಭೌತಿಕ, ಆರ್ಥಿಕ ಸಂಪನ್ಮೂಲಗಳೂ ಸಹ ಮೀಸಲಾತಿಯ ಮೂಲಕವೇ ಹಂಚಲ್ಪಟ್ಟಾಗಲಷ್ಟೇ ಸಮಾನತೆಯ ಸಮಾಜದತ್ತ ಮುನ್ನಡೆಯಬಹುದು. ಇತ್ತೀಚಿಗೆ ಮೀಸಲಾತಿ ವಿರೋಧಿ ಪ್ರತಿಭಟನೆಗಳು ಆರಂಭವಾದಾಗಿನಿಂದ ಸತತವಾಗಿ ಮೀಸಲು ಪರ ಬರಹಗಳನ್ನು (ಗೌರಿ ಲಂಕೇಶ್, ಶಿವಸುಂದರ್ ಬರಹಗಳು) ಪ್ರಕಟಿಸುತ್ತಿರುವ 'ಲಂಕೇಶ್' ಮೀಸಲು ಕುರಿತು ಚರ್ಚೆಯನ್ನೂ ಹಮ್ಮಿಕೊಂಡಿತ್ತು, ಲಭ್ಯವಿರುವ ಮಾಹಿತಿ, ಸಾಮಾಜಿಕ ಅಸಮಾನತೆಯ ಅಂಕಿ ಅಂಶಗಳು, ಪರಿಣಿತರ ಸಲಹೆಗಳನ್ನಾಧರಿಸಿ ಮೆರಿಟ್ ಮತ್ತು ಸಾಮಾಜಿಕ ಅನಾನುಕೂಲತೆಗಳಿಗೆ ಭಿನ್ನ-ಭಿನ್ನ ಮಾನದಂಡವನ್ನು ಪರಿಗಣಿಸುವ ಜಾತಿ ಆಧಾರಿತ ಮೀಸಲಾತಿಯೇ ಭಾರತದ ಸಂಕೀರ್ಣ ವೈವಿಧ್ಯಮಯ ಸಾಮಾಜಿಕ ಸ್ಥಿತಿಗೆ ಸೂಕ್ತ ಎಂಬುದು 'ಪತ್ರಿಕೆ'ಯ ನಿಲುವು. ಈ ನಿಟ್ಟಿನಲ್ಲಿ ವೀರಪ್ಪ ಮೊಯ್ಲಿ ನೇತೃತ್ವದ ರಾಷ್ಟ್ರೀಯ ಆಯೋಗ ಆಳ ಅಧ್ಯಯನ ನಡೆಸುವುದೆಂದು ಭಾವಿಸೋಣ.

-'ಲಂಕೇಶ್' ಬಳಗ

① ಸಮೂಹ ಅನಾನುಕೂಲತೆ: ಜಾತಿ-ವರ್ಗ, ಪ್ರದೇಶ ಮತ್ತು ಲಿಂಗ

ಸಮುದಾಯ ↓	ವಿಭಾಗ ➔	ವಿಭಾಗ-1 ಅತಿ ಹಿಂದುಳಿದದ್ದು	ವಿಭಾಗ-2	ವಿಭಾಗ-3	ವಿಭಾಗ-4 ಹೆಚ್ಚು ಮುಂದುವರೆದದ್ದು
ಕೆಳ ಒ.ಬಿ.ಸಿ/ ಅತಿ ಹಿಂದುಳಿದ ವರ್ಗ/	ಹೆಣ್ಣು	12	10	8	6
	ಗಂಡು	10	8	6	4
ಮುಸ್ಲಿಂ ಒ.ಬಿ.ಸಿ. ಮೇಲ್ಜಾತಿಯ ಒ.ಬಿ.ಸಿ ಒಬಿಸಿಯಲ್ಲಿನ ಮುಸ್ಲಿಂ	ಹೆಣ್ಣು	10	8	6	4
	ಗಂಡು	8	6	4	2
ಇತರರು	ಹೆಣ್ಣು	4	3	2	1
	ಗಂಡು	2	1	0	0

② ವೈಯಕ್ತಿಕ ಅನಾನುಕೂಲತೆ : ಶಾಲೆಯ ಗುಣಮಟ್ಟ

ಹಳ್ಳಿ, ಸಣ್ಣ ಪಟ್ಟಣದ ಸಾಧಾರಣ ಶಾಲೆಯಲ್ಲಿ ಓದಿದವರಿಗೆ ಗರಿಷ್ಠ ಐದು ಅಂಕ.
ಆಧುನಿಕ ಇಂಗ್ಲಿಷ್ ಖಾಸಗಿ ಶಾಲೆಯಲ್ಲಿ ಓದಿದವರಿಗೆ ಸೊನ್ನೆ ಅಂಕ.

	ಹಳ್ಳಿ/ಪಟ್ಟಣ 50ಸಾವಿರ ಜನಸಂಖ್ಯೆವರೆಗೆ	ನಗರ 3 ಲಕ್ಷ ಜನಸಂಖ್ಯೆವರೆಗೆ	ದೊಡ್ಡನಗರ/ಮೆಟ್ರೋ
ಸಾಧಾರಣ ಸರ್ಕಾರಿ ಶಾಲೆ	5	4	3
ಖಾಸಗಿ ಶಾಲೆ (ಇಂಗ್ಲಿಷ್ ಮಾಧ್ಯಮವಲ್ಲದ)	3	2	1
ಖಾಸಗಿ ಇಂಗ್ಲಿಷ್ ಮಾಧ್ಯಮ ಶಾಲೆ	2	1	0
ವಿಶೇಷ ಸರ್ಕಾರಿ ವಸತಿ ಶಾಲೆ	1	1	0
ಅತಿ ವಿಶೇಷ/ವಸತಿ ಪಬ್ಲಿಕ್ ಶಾಲೆ	0	0	0

③ ವೈಯಕ್ತಿಕ ಅನಾನುಕೂಲತೆ : ಕುಟುಂಬದ ಹಿನ್ನೆಲೆ

ಅಸಂಘಟಿತ ಕ್ಷೇತ್ರದ ಕಡಿಮೆ ಸಂಬಳದವರಿಗೆ ಗರಿಷ್ಠ ಮೂರು ಅಂಕ.
ಮ್ಯಾನೇಜರ್, ವೃತ್ತಿಪರರು, ಕ್ಲಾಸ್-1, ಕ್ಲಾಸ್-2 ಸಂಬಳದವರಿಗೆ ಸೊನ್ನೆ ಅಂಕ.

ತಂದೆಯ ಉದ್ಯೋಗ ➔ / ತಾಯಿಯ ಉದ್ಯೋಗ ↓	ಮ್ಯಾನೇಜರ್/ದೊಡ್ಡ ವೃತ್ತಿಪರ/ ದೊಡ್ಡ ಬಿಸಿನೆಸ್/ಕ್ಲಾಸ್1, ಕ್ಲಾಸ್2	ಕ್ಲರ್ಕ್/ಸಣ್ಣ ವೃತ್ತಿಪರ/ಮಧ್ಯಮ ಬಿಸಿನೆಸ್/ ಕ್ಲಾಸ್-3, ಕ್ಲಾಸ್-4	ಇತರರು (ಆದಾಯ ತೆರಿಗೆ ಪಾವತಿಸದವರು)
ಮ್ಯಾನೇಜರ್/ದೊಡ್ಡ ವೃತ್ತಿಪರ/ ದೊಡ್ಡ ಬಿಸಿನೆಸ್/ಕ್ಲಾಸ್1, ಕ್ಲಾಸ್2	0	0	0
ಕ್ಲರ್ಕ್/ಸಣ್ಣ ವೃತ್ತಿಪರ/ಮಧ್ಯಮ ಬಿಸಿನೆಸ್/ ಕ್ಲಾಸ್-3, ಕ್ಲಾಸ್-4	0	1	2
ಇತರರು (ಆದಾಯ ತೆರಿಗೆ ಪಾವತಿಸದವರು)	0	2	3



ಬಿಜೆಪಿಯೊಳಗೆ ಇನ್ನೊಂದು ಆತ್ಮಹತ್ಯಾ ಬಾಂಬ್ ಸ್ಫೋಟಿಸಿದೆ. ದೇಶಪ್ರೇಮ, ಭಾರತೀಯ ಸಂಸ್ಕೃತಿ, ತ್ಯಾಗ ಲೊಟ್ಟೆ ಲೊಸಕೆಂದು ಭಜನೆ ಮಾಡುತ್ತಿದ್ದ ಈ ಹಿಂದೂವೀರರ ಕಿರೀಟಕ್ಕೆ ಈಗ ಇನ್ನೊಂದು ಗರಿ. ಬಿಜೆಪಿ ರಾಷ್ಟ್ರೀಯ ಯುವ ಮೋರ್ಚಾಗೆ ಇನ್ನೇನು ಉಪಾಧ್ಯಕ್ಷನಾಗಿ ನೇಮಕಗೊಳ್ಳಲಿದ್ದ ರಾಹುಲ್ ಮಹಾಜನ್ ಈಗ ಹೊಟ್ಟೆ ಭರ್ತಿ ಷಾಂಪೇನ್ ಕುಡಿದು, ಮೆದುಳೇ ಕದಡಿ ಹೋಗುವಷ್ಟು ಹೆರಾಯಿನ್ ತಿಂದು ಆಸ್ಪತ್ರೆ ಸೇರಿಕೊಂಡಿದ್ದಾನೆ.




BJP ಆತ್ಮಹತ್ಯೆ!

ಬಿಜೆಪಿಗಳಿಗಿದು ಕೆಟ್ಟಕಾಲ

ಒಂದು ಕಡೆ ಲಷ್ಕರ್-ಎ-ತೊಯಿಬಾದಂತ ಉಗ್ರಗಾಮಿ ಗುಂಪುಗಳು ಆರ್‌ಎಸ್‌ಎಸ್‌ನವರನ್ನು ಹುಡುಕುಡುಕಿ ಬಾಂಬ್ ಹಾಕುತ್ತಿದ್ದರೆ, ಮತ್ತೊಂದೆಡೆ ಸ್ವತಃ ಬಿಜೆಪಿಗಳೇ ದಿನಕ್ಕೊಂದು ಹಗರಣಗಳೆಂದು ಹಳ್ಳ ತೋಡಿಕೊಂಡು ಮುಳುಗುತ್ತಿದ್ದಾರೆ.

ಈ ರಾಹುಲ್ ಮಹಾಜನ್‌ನ ಕೇಸನ್ನೇ ನೋಡಿ. ಇವನಪ್ಪ ಪ್ರಮೋದ್ ಮಹಾಜನ್ ಹೆಸರಾಂತ, ಡೈನಾಮಿಕ್ ರಾಜಕಾರಣಿಯಾಗಿದ್ದವನು. ಆದರೆ ತಮ್ಮನ ಹೆಂಡತಿಯನ್ನೇ ಪಳಗಿಸಿಕೊಂಡು ತಮ್ಮನಿಂದಲೇ ಗುಂಡೇಟು ತಿಂದು ಸತ್ತ. ಇದಾಗಿ ಇನ್ನೂ ತಿಂಗಳಾಗಿಲ್ಲ, ಮಗ ರಾಹುಲ್ ಎಂಬ ಲಾಚಾರ್ ಆದ್ಮಿ ಗುಂಡು-ಗಾಂಜಾ ಎರಡೂ ಬೆರೆಸಿ ನುಂಗಿ ನ್ಯಾಷನಲ್ ನ್ಯೂಸ್ ಆಗಿದ್ದಾನೆ. ಇದಕ್ಕೀಗ ವಿಷಪ್ರಾಷನದ ಕತೆ ಕಟ್ಟಲಾಗುತ್ತಿದೆ. ಈಗಿನ್ನೂ ಬರೀ ಮುವತ್ತೊಂದರ ಹರೆಯದಲ್ಲಿರುವ ಈ ರಾಹುಲ್ ಮಹಾಜನ್‌ನ ಮುಖ, ಭುಜ, ನಡಿಗೆ, ಚಲನವಲನಗಳನ್ನು ನೀವೇ ಟಿವಿಯಲ್ಲಿ ಗಮನಿಸಿ ನೋಡಿ.



ಬಿಬೇಕ್ ಮೊಯಿತ್ರಾ

ನಿತ್ಯ ರಾತ್ರಿಯ ಗುಂಡೇಟಿನ ಆಯಾಸ, ಇಳಿಬಿದ್ದ ಭುಜ, ಕೆನ್ನೆಗಳು, ಶಕ್ತಿ ಬಸಿದು ಹೋಗಿರುವ ಅವನ ದೇಹ ನೋಡಿದರೆ ಸಾಕು ಎಂಥವರಿಗೂ ಅರ್ಥವಾಗುತ್ತದೆ. ರಾಹುಲ್ ಮಹಾಜನ್ ಸನ್ ಆಫ್ ಪ್ರಮೋದ್ ಮಹಾಜನ್ ಇಸ್ ಎ ಡ್ರಗ್ ಅಡಿಕ್ಟ್ ಎಂದು.

ಇವನು ನೆಟ್ಟಗೆ ಕಾಲೇಜು ಓದು ಮುಗಿಸಿರಲಿಲ್ಲ, ಕುಡಿದು ವಿಮಾನ ಹಾರಿಸಲು ಹೋಗುತ್ತಿದ್ದುದರಿಂದ ಜೆಟ್ ಏರ್‌ವೇಸ್‌ನವರು ಪೈಲೆಟ್ ಕೆಲಸದಿಂದ ಒದ್ದೋಡಿಸಿದ್ದರು. ಸಿನಿಮಾ ಫೀಲ್ಡಿಗೆ ಹೋಗುತ್ತೇನೆಂದವನು ಅಲ್ಲೂ ಸಕ್ಸಸ್ ಆಗಲಿಲ್ಲ, ಬದಲಾಗಿ ಗುಂಡು ಪಾರ್ಟಿ, ಡ್ರಗ್ಸ್‌ನಂತಹ ಚಿಂಗಲು ವಿದ್ಯೆ ಕಲಿತು ಬಂದಿದ್ದ. ಅಪ್ಪ ಪ್ರಮೋದ್ ಮಹಾಜನ್ ಎಂಬ ಹಿಂದೂ ನಾಯಕ ಕದ್ದು ತರುತ್ತಿದ್ದ ಹಣದಲ್ಲಿ ಮೋಜಿನ ಜೀವನ ನಡೆಸುತ್ತಿದ್ದ.

ಈ ಪ್ರತಿಭೆಯನ್ನೇ ಕಳೆದ ವಾರ ಬಿಜೆಪಿಯ ರಾಷ್ಟ್ರಾಧ್ಯಕ್ಷ ರಾಜನಾಥ್ ಸಿಂಗ್ ಹಾರ್ಡ್ ವರ್ಕರ್, ಗುಡ್ ಬಾಯ್ ಎಂದೆಲ್ಲಾ ಹೊಗಳಿದ್ದು. ಹಾಗೆ ನೋಡಿದರೆ ಈ ಬಿಜೆಪಿಗಳು ಯಾರನ್ನೆಲ್ಲಾ ತಮ್ಮ ಗ್ರೇಟ್ ಲೀಡರ್‌ಗಳೆಂದು ಬಿಂಬಿಸುತ್ತಾ ಬಂದಿದ್ದಾರೋ ಆ ಮಹಾನುಭಾವರೆಲ್ಲಾ ಒಂದೋ ಕಚ್ಚೆ ಹರುಕರಾಗಿದ್ದಾರೆ, ಇಲ್ಲಾ ಕಾಂಗ್ರೆಸ್, ದಳದವರನ್ನೂ ಮೀರಿಸುವಂತ ಭ್ರಷ್ಟರೆಂದು ಕುಖ್ಯಾತಿ ಪಡೆದಿದ್ದಾರೆ.

ಪ್ರಮೋದ್ ಮಹಾಜನ್‌ನ ಸೆಕ್ಸ್ ಹಗರಣ ಹಾಗೂ ರಾಹುಲ್ ಮಹಾಜನ್‌ನ ಡ್ರಗ್ಸ್, ಆರ್‌ಎಸ್‌ಎಸ್ ನಾಯಕ ಸುಶೀಲ್ ಜೋಶಿಯ ಸೆಕ್ಸ್ ಸಿಡಿ, ರಾಜ್ಯವೊಂದರ ಬಿಜೆಪಿ ಉಪಮುಖ್ಯಮಂತ್ರಿ ಎಂಎಲ್‌ಸಿ ಒಬ್ಬಾಕೆಯೊಂದಿಗೆ ನಡೆಸುತ್ತಿರುವ ಬಾನಗಡಿ ಇವೆಲ್ಲಾ ಈ ಹಿಂದೂ ಘಟಿಂಗರ ಸಾಧನೆಗಳಾಗಿವೆ.



ಸಹೇಲ್

ತಮಾಷೆ ಏನೆಂದರೆ ರಾಹುಲ್ ಮಹಾಜನ್ ಹೆರಾಯಿನ್ ಸೇವಿಸಿ ಆಸ್ಪತ್ರೆ ಸೇರಿದ್ದರೆ ಅವನ ಮಾವ ಬಿಜೆಪಿಯ ಗೋಪಿನಾಥ ಮುಂಡೆ 'ಇದೊಂದು ಪಿತೂರಿ, ರಾಹುಲ್‌ಗೆ ಯಾರೋ ವಿಷ ಹಾಕಿದ್ದಾರೆ' ಎಂದು ಚೀರಿಕೊಳ್ಳುತ್ತಿದ್ದಾನೆ. ಆದರೆ ಅಸಲಿ ವಿಷಯ ಗೊತ್ತಿರುವ ಬಿಜೆಪಿಯ ಲೀಡರ್‌ಗಳು ಶನಿವಾರ ಮಧ್ಯಾಹ್ನದ ಹೊತ್ತಿಗೆ 'ಪಕ್ಷಕ್ಕೂ ಇದಕ್ಕೂ ಸಂಬಂಧವಿಲ್ಲ ಇದು ಮಹಾಜನ್ ಕುಟುಂಬದ ಆಂತರಿಕ ವಿಚಾರ' ಎಂದು ಸೀನ್‌ನಿಂದಲೇ ನಾಪತ್ತೆಯಾಗಿಬಿಟ್ಟರು.



ರಾಜನಾಥ ಸಿಂಗ್



ಸುಶೀಲ್ ಜೋಶಿ

ಅಪೊಲೋ ಆಸ್ಪತ್ರೆನೇ ಯಾಕೆ?

ಗುರುವಾರ ನಡುರಾತ್ರಿ ವೇಳೆಗೆ ಕಂಠಪೂರ್ತಿ ಷಾಂಪೇನ್ ಕುಡಿದು ನೆತ್ತಿಗೇರುವಷ್ಟು ಹೆರಾಯಿನ್ ಮೂಸಿದ್ದ ರಾಹುಲ್ ಹಾಗೂ ಬಿಬೇಕ್ ಮೊಯಿತ್ರಾರ ನಿತ್ರಾಣಗೊಂಡಿದ್ದ ದೇಹಗಳು ಹೋಗಿ ದಾಖಲಾಗಿದ್ದು 13 ಕಿ.ಮೀ. ದೂರದಲ್ಲಿದ್ದ ಅಪೊಲೋ ಆಸ್ಪತ್ರೆಗೆ. ಆದರೆ ನಂ. 7 ಸಫ್ದರ್‌ಜಂಗ್ ರಸ್ತೆಯಲ್ಲಿರುವ ಪ್ರಮೋದ್ ಮಹಾಜನ್‌ನ ಮನೆಗೆ ಹತ್ತಿರದಲ್ಲೇ ಆಲ್ ಇಂಡಿಯಾ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್‌ನ ಆಸ್ಪತ್ರೆ ಇದೆ. ಇನ್ನೊಂದು ಪಕ್ಕದಲ್ಲಿ ರಾಮ ಮನೋಹರ ಲೋಹಿಯಾ ಹಾಸ್ಪಿಟಲ್ ಸಹ ಇದೆ. ಇವೆರಡು ಪ್ರಮೋದ್‌ರ ಮನೆಯಿಂದ ಎರಡು ಕಿಲೋಮೀಟರ್ ಆಸು ಪಾಸಿನಲ್ಲಿರುವಂತವು. ಹೀಗಿದ್ದರೂ 13 ಕಿ.ಮೀ ದೂರದ, ಅರ್ಧ ಗಂಟೆ ಪ್ರಯಾಣದ ಅಪೊಲೋ ಆಸ್ಪತ್ರೆಗೆ ಇವರಿಬ್ಬರನ್ನು

ಬಿಳಿದಾಳೆ ಈಶ

ಕರೆದೊಯ್ದ ಕಾರಣಗಳ ಬಗ್ಗೆ ಈಗ ಪೋಲೀಸರು ತಲೆ ಕೆಡಿಸಿಕೊಳ್ಳುತ್ತಿದ್ದಾರೆ. ದೆಹಲಿ ಮಟ್ಟಿಗೆ ಈ ಅಪೊಲೊ ಆಸ್ಪತ್ರೆಗೆ ಬಹಳ ಕೆಟ್ಟ ಹೆಸರಿದೆ. ಇದೇ ಆಸ್ಪತ್ರೆಯಲ್ಲೇ ಕೇಂದ್ರ ಸಚಿವ ಪಿ.ಕುಮಾರ ಮಂಗಳಂ ಸಹ ಸತ್ತಿದ್ದರು. ಆದರೆ ಆ ಸಾವಿನ ಕಾರಣ ಕೊನೆಗೂ ಯಾರಿಗೂ ಗೊತ್ತಾಗಲಿಲ್ಲ, ಆಸ್ಪತ್ರೆಯವರೂ ಹೇಳಿರಲಿಲ್ಲ. ಅಪೊಲೋದವರು ಸಂದರ್ಭ ಹಾಗೂ ಒಬ್ಬರ ಅನುಕೂಲಕ್ಕೆ ತಕ್ಕಂತೆ ಬಗ್ಗುತ್ತಾರೆಂಬುದು ಗೊತ್ತಿದ್ದರಿಂದಲೇ ರಾಹುಲ್ ಮಹಾಜನ್‌ನನ್ನು ಅಲ್ಲಿಗೆ ಕರೆದೊಯ್ಯಲಾಗಿದೆ. ಈ ಸಲಹೆ ಕೊಟ್ಟವನು ಬೇರಾರೂ ಅಲ್ಲ ಹರೀಶ್ ಶರ್ಮ. ಇವನು ಬಿಬೇಕ್ ಮೊಯಿತ್ರಾಗೂ ಮೊದಲು ಪ್ರಮೋದ್ ಮಹಾಜನ್‌ನ ಆಪ್ತ ಕಾರ್ಯದರ್ಶಿಯಾಗಿದ್ದ ಆಸಾಮಿ. ಕಾನೂನಿನ ಕಣ್ಣಿಗೆ ಮಣ್ಣೆರಚುವ ಅನೇಕ ಒಳದಾರಿಗಳನ್ನೆಲ್ಲಾ ಬಲ್ಲ ಪ್ರವೀಣನೀತ. ಬಹುಶಃ ಈ ಹರೀಶನ ಸಲಹೆಯ ಮೇರೆಗೆ ರಾಹುಲ್‌ನ ಮನೆ ಕೆಲಸಗಾರರು ಷಾಂಪೇನ್ ಬಾಟಲುಗಳು, ಹೆರಾಯಿನ್ ಪಾಕೇಟುಗಳನ್ನು ಮುಚ್ಚಿಟ್ಟು, ಬಿಬೇಕ್ ವಾಂತಿ ಮಾಡಿಕೊಂಡಿದ್ದನ್ನು ಶುಚಿಗೊಳಿಸಿಬಿಟ್ಟಿದ್ದರು. ಈಗ ಆ ಕೆಲಸಗಾರರು ಮಾದಕ ದ್ರವ್ಯ ಬಳಕೆ ನಿಯಂತ್ರಣ ಕಾಯ್ದೆಯಡಿ ವಿಚಾರಣೆಗೆ ಒಳಗಾಗಬೇಕಾಗಿ ಬಂದಿದೆ. ಪೋಲೀಸರಿಗೆ ಹೆದರಿಕೊಂಡು ಹರೀಶ್ ಶರ್ಮ 'ನನಗೆ ಹುಷಾರಿಲ್ಲ' ಎಂಬ ನೆಪ ಹೇಳಿ ಯಾವುದೋ ಆಸ್ಪತ್ರೆ

(12ನೇ ಪುಟಕ್ಕೆ)

ಇವನು ರಾಹುಲ್ ಗಾಂಧಿ ವಿರುದ್ಧ ಕಾದಾಟಕ್ಕೆ ಹೊರಟಿದ್ದ

ಇದೊಂದು ಅಜೆಂಡಾ ಬಿಜೆಪಿ ಮನಸ್ಸಿನಲ್ಲಿತ್ತು. ಕಾಂಗ್ರೆಸ್ ನಾಯಕಿಯಾಗಿ ಸೋನಿಯಾ ಗಾಂಧಿ ಬಂದ ನಂತರ 'ಆಕೆ ಇಟಲಿಯವಳು, ವಿದೇಶಿ' ಎಂದು ಸಂಘಿಗಳು ಎಷ್ಟೇ ಬೊಂಬಡಾ ಬಜಾಯಿಸಿದರೂ ಜನ ಅದಕ್ಕೆ ಕಿವಿಗೊಟ್ಟಿರಲಿಲ್ಲ. ಈಗ ರಾಹುಲ್ ಗಾಂಧಿ ನಿಧಾನಕ್ಕೆ ಕಾಂಗ್ರೆಸ್ ನಾಯಕರ ನಡುವೆ ಕಾಣಿಸಿಕೊಳ್ಳುತ್ತಿದ್ದಾನೆ. ಈ ಯುವ ಸಂಸತ್ ಸದಸ್ಯ ಪಾರ್ಲಿಮೆಂಟಿನಲ್ಲಿ ತನ್ನ ಮೊದಲ ಭಾಷಣ ಮಾಡಿದ್ದೇ ದೊಡ್ಡ ಸುದ್ದಿಯಾಗಿತ್ತು. ರಾಹುಲ್ ಗಾಂಧಿ ಕುಡಿದ, ಸೇದಿದ, ಹಾದರ ಮಾಡಿದ ಎಂಬ ಯಾವ ಗಲಾಟೆಗಳೂ ಇದುವರೆಗೂ ನಡೆದಿಲ್ಲ. ಅಂಥವನ ವಿರುದ್ಧ ಪೈಪೋಟಿ ನಡೆಸಲು ಬಿಜೆಪಿಗಳು ಛೂ ಬಿಡಲು ಬಯಸಿದ್ದಿದ್ದು ಈ ರಾಹುಲ್ ಮಹಾಜನ್ ಎಂಬ ಗೊತ್ತು ಗುರಿ ಇರದವನನ್ನು.



ಇದಕ್ಕೆ ಬೇರಿನ್ಯಾವ ಘನಂದಾರಿ ಕಾರಣಗಳೂ ಇರಲಿಲ್ಲ, ಇಬ್ಬರ ಹೆಸರೂ ರಾಹುಲ್ ಎಂಬುದರ ಹೊರತಾಗಿ. ಬಿಜೆಪಿಯೊಳಗೆ ಇಂತಹ ಚಿಲ್ಲರೆ ಗಿಮಿಕ್ಕುಗಳಿಗೆ ಬರವಿಲ್ಲ, ರಾಹುಲ್ ಗಾಂಧಿ V/s ರಾಹುಲ್ ಮಹಾಜನ್ ಎಂದು ಪೈಪೋಟಿಗೆ ಹಚ್ಚಿಬಿಟ್ಟರೆ, ಒಬ್ಬ ಅರ್ಧ ವಿದೇಶಿ ಇನ್ನೊಬ್ಬ ಸಂಪೂರ್ಣ ಸ್ವದೇಶಿ ಎಂಬಿತ್ಯಾದಿ ಕತೆ ಕಟ್ಟಿ ರಾಹುಲ್ ಗಾಂಧಿಯ ರಾಜಕೀಯ ಬೆಳವಣಿಗೆಗೆ ಬ್ರೇಕ್ ಹಾಕಿಬಿಡಬಹುದೆಂದು ಈ ಚೆಡ್ಡಿ ಚತುರರು ಪ್ಲಾನ್ ಮಾಡಿದ್ದರು.

ಆದರೆ ಭಾರತೀಯ ಸಂಸ್ಕೃತಿ, ಪರಂಪರೆ, ಹಿಂದೂತ್ವದ ಗುತ್ತಿಗೆ ಹಿಡಿದಂತಾಡುವ ಬಿಜೆಪಿಗಳೂ ಹಾಗೂ ವಿದೇಶಿ ಮೂಲದವರೇ ಆಗಿದ್ದರೂ ಈಗ ಭಾರತೀಯಳಾಗಿರುವ ಸೋನಿಯಾ ವರ್ತನೆಗಳನ್ನು ಒಮ್ಮೆ ಹೋಲಿಸಿ ನೋಡಿ.



ಇಂದಿರಾ ಗಾಂಧಿ ಹತ್ಯೆಯಾದಾಗ ರಾಜೀವ್‌ಗಾಂಧಿ ರಾಜಕೀಯಕ್ಕೆ ಹೋಗಕೂಡದೆಂದು ತಡೆಯಲು ಯತ್ನಿಸಿದ್ದು ಸೋನಿಯಾ ಮಾತ್ರ. ನಂತರ ರಾಜೀವ್ ಹತ್ಯೆಯಾದಾಗಲೂ ಸೋನಿಯಾ ರಾಜಕೀಯಕ್ಕೆ ಬಂದಿರಲಿಲ್ಲ. ಪಿ.ವಿ. ನರಸಿಂಹರಾವ್ ತರದ ಅಪ್ರಯೋಜಕರು ನಾಯಕರಾಗಿ ಕಾಂಗ್ರೆಸ್ ಪಾರ್ಟಿ ಇನ್ನೇನು ಛಿದ್ರವಾಯಿತೆನ್ನುವ ಹಂತ ತಲುಪಿದಾಗಲಷ್ಟೇ ಸೋನಿಯಾ ಸಾರ್ವಜನಿಕ ಬದುಕಿಗೆ ಬಂದರು. ಈ ನಿರ್ಧಾರ ಮಾಡಲು ಸೋನಿಯಾಗೆ 8 ವರ್ಷ ಬೇಕಾಯಿತು. ಅಂತಾ ಸೋನಿಯಾ-ರಾಜೀವ್ ಗಾಂಧಿ ಮಗನೇ ಆಗಿದ್ದರೂ ಸಹ ರಾಹುಲ್ ಗಾಂಧಿ ಈಗಲೂ ಒಬ್ಬ ಲೋ ಪ್ರೊಫೈಲ್ ಲೀಡರ್ ಅಷ್ಟೆ.

ಆದರೆ ಬಿಜೆಪಿಗಳ ವರ್ತನೆಯನ್ನೇ ನೋಡಿ. ಅವರ ನಾಯಕ ಪ್ರಮೋದ್ ಮಹಾಜನ್ ಹಾದರದ ಕೇಸಿನಲ್ಲಿ ಸಿಕ್ಕಿಬಿದ್ದು ಕೊಲೆಯಾದ. ಅವನು ಸತ್ತಿದ್ದು ಮೇ 3 ರಂದು. ಆದಾದ ಕೇವಲ ಹದಿನೈದು ದಿನಕ್ಕೆ ಮೇ 18 ರಂದು ಅವನ ಹೆಂಡತಿ ರೇಖಾ ಹಾಗೂ ಮಗ ರಾಹುಲ್ ಮಹಾಜನ್ ಸೀದಾ ಅಡ್ವಾಣಿ, ವಾಜಪೇಯಿ ಬಳಿ ಹೋಗಿ ಕಾಲಿಡಿದು, ಎನ್‌ಸಿಪಿಯ ಶರದ್ ಪವಾರ್‌ಗೆ ಕೈ ಮುಗಿದು 'ರಾಜ್ಯಸಭೆ ಸದಸ್ಯತ್ವ' ಮಂಜೂರು ಮಾಡುವಂತೆ ಗೋಗರೆದಿದ್ದರು. ಈ ಐಲುಪೈಲು ಹುಡುಗ ರಾಹುಲ್ ಮಹಾಜನ್ ಅಂತೂ 'ತಂದೆಯ ಸಾವು ಸಹಿಸಲಾಗುತ್ತಿಲ್ಲ, ಆದರೂ ಅವರ ಕನಸು ನನಸಾಗಿಸಲು ನಾನು ರೆಡಿ. ಪಕ್ಷ ಯಾವ ಜವಾಬ್ದಾರಿ ಕೊಟ್ಟರೂ ನಿರ್ವಹಿಸುತ್ತೇನೆ' ಎಂದು ಹೇಳಿದ್ದ. ಗಂಡ ತೀರಿಕೊಂಡ ನಂತರ ಕಾಂಗ್ರೆಸ್ಸಿಗರು ಬೇಡಿಕೊಂಡರೂ ಒಲ್ಲೆ ಅಂದಿದ್ದ ಸೋನಿಯಾ ಎಲ್ಲಿ? ಇನ್ನೂ ತಣ್ಣಗಾಗಿರದ ತಂದೆ ಚಿತಾಭಸ್ಮ ಇಟ್ಟುಕೊಂಡು ನನಗೆ ಅಧಿಕಾರ ಕೊಡಿ ಎಂದು ಬೇಡುವ ರಾಹುಲ್ ಮಹಾಜನ್ ಎಲ್ಲಿ? ಅಪ್ಪನ ಚಿತಾಭಸ್ಮವನ್ನು ಚೆಲ್ಲುವ ಮೊದಲೇ, ಬೂದಿ ಕುಡಿಕೆ ಮನೇಲಿರುವಾಗಲೇ ಹೆರಾಯಿನ್ ಷಾಂಪೇನ್ ಮೈಮೇಲೆ ಚೆಲ್ಲಿಕೊಂಡಿದ್ದಾನೆ: ಈ ಹೆರಾಯಿನ್ ಪುಡಿಯನ್ನು ಮೂಗಿನ ಮೂಲಕ ಹೀರಿಕೊಳ್ಳಲು ಐನೂರರ ನೋಟನ್ನು ಕೊಳವೆಯಾಗಿ ಸುತ್ತಿಕೊಂಡಿದ್ದಾನೆ ಈ ಯುವ ನೇತಾರ. ಇದಲ್ಲವೆ ಹಿಂದೂ ಸಂಸ್ಕೃತಿ, ಅಸಲಿ ದೇಶಭಕ್ತಿ! ಇಂತದ್ದೇ ಯಡವಟ್ಟುಗಳನ್ನು ಒಂದು ವೇಳೆ ರಾಹುಲ್ ಗಾಂಧಿಯೇ ಮಾಡಿಬಿಟ್ಟಿದ್ದರೆ ಭೂಮಿ-ಆಕಾಶ ಕಿತ್ತುಹೋಗುವಂತೆ ಚೀರಿಕೊಳ್ಳದೇ ಇರುತ್ತಿದ್ದರಾ ಈ ದೇಶಭಕ್ತರು?

ಉಗ್ರಗಾಮಿಗಳಿಗೆ RSS ಯಾಕೆ ಟಾರ್ಗೆಟ್?

ನಾಗಪುರದಲ್ಲಿರುವ ಆರ್‌ಎಸ್‌ಎಸ್ ಕೇಂದ್ರ ಕಚೇರಿ ಮೊನ್ನೆ ಲಷ್ಕರ್ ಬಂದುಕೋರರ ದಾಳಿಗೆ ಒಳಗಾಗುವುದರಿಂದ ಸ್ವಲ್ಪದರಲ್ಲಿ ಪಾರಾಗಿದೆ. ಮೂವರು ಮುಸ್ಲಿಂ ಉಗ್ರರು ಪೋಲೀಸರಿಂದ ಹತರಾಗಿದ್ದಾರೆ. ಈ ಮೊದಲೆಲ್ಲಾ ಗೊತ್ತುಗುರಿಯಿರದಂತೆ ವಿಧ್ವಂಸಕ ಕೃತ್ಯಗಳನ್ನೆಸಗುತ್ತಿದ್ದ ಈ ಉಗ್ರರು ಇತ್ತೀಚೆಗೆ ನಿರ್ದಿಷ್ಟವಾದ ಟಾರ್ಗೆಟ್ ಆರಿಸಿಕೊಂಡು ದಾಳಿ ನಡೆಸುತ್ತಿದ್ದಾರೆ. ಸಂಘ ಪರಿವಾರದ ಬಳಗವೇ ಅವರ ಹಿಟ್‌ಲಿಸ್ಟ್‌ನಲ್ಲಿರುವುದು.

ತಮಿಳುನಾಡಿನ ಅಲ್ ಉಮ್ಮ ಅಲ್ಲಿನ RSS ಕೇಂದ್ರಕ್ಕೆ ಬಾಂಬ್ ಹಾಕಿದ್ದು, 1993 ರ ಮುಂಬೈ ಬಾಂಬ್ ದಾಳಿ, 2001 ರ ಅಕ್ಷರಧಾಮ ದೇವಾಲಯ, 2003 ರಲ್ಲಿ ಬಿಜೆಪಿ ಲೀಡರ್‌ಗಳಾದ ಭಾರತ್ ಭಾಸೊಪ್, ಅಶೋಕ್ ಭಟ್ ಮೇಲಿನ ದಾಳಿಗಳು, 2005 ರಲ್ಲಿ ಅಯೋಧ್ಯೆಯಲ್ಲಿರುವ 'ದೇವಸ್ಥಾನ'ವನ್ನು ಉಡಾಯಿಸಲು ಮಾಡಿದ ಯತ್ನ ಹಾಗೂ ಈಗ ನಾಗಪುರದ ಆರ್‌ಎಸ್‌ಎಸ್‌ನ ಹೆಡ್ಕ್ವಾರ್ಟರ್ಸಿಗೆ ಮುಸ್ಲಿಂ ಉಗ್ರರು ನುಗ್ಗಲು ವಿಫಲ ಯತ್ನ ನಡೆಸಿರುವ ಹಿನ್ನೆಲೆಗೆ ಕೆಲವು ನಿರ್ದಿಷ್ಟ ಕಾರಣಗಳಿವೆ.

ಆರ್‌ಎಸ್‌ಎಸ್-ಬಿಜೆಪಿಗಳ ಮುಸ್ಲಿಂ ದ್ವೇಷವೇ ಇದಕ್ಕೆ ಪ್ರಚೋದನೆ ನೀಡುತ್ತಿರುವ ಅಂಶ.

ನೀವೇ ಒಮ್ಮೆ ಇತಿಹಾಸವನ್ನು ಅವಲೋಕಿಸಿ ನೋಡಿ. 1992 ರಲ್ಲಿ ಈ ಚೆಡ್ಡಿಗಳು ಬಾಬರಿ ಮಸೀದಿಯನ್ನು ಕೆಡವುವ ಮುಂಚೆ ಭಾರತದಲ್ಲಿ ಸಿಮಿ, ದೀನ್‌ದಾರ್ ಅಂಜುಮಾನ್, ಅಲ್-ಉಮ್ಮಾದಂತಹ ಮುಸ್ಲಿಂ 'ಬಂದುಕೋರ' ಗುಂಪುಗಳಿರಲಿಲ್ಲ, ಕೆಲವು ಇದ್ದವಾದರೂ ಅವು ಧಾರ್ಮಿಕ-ಸಾಮಾಜಿಕ ಗುಂಪುಗಳಾಗಿದ್ದವೇ ಹೊರತು 'ಭಯೋತ್ಪಾದಕ'ರಾಗಿರಲಿಲ್ಲ. ಬಾಬರಿ ಮಸೀದಿ ನಾಶ, ಗುಜರಾತ್‌ನಲ್ಲಿ ಮುಸ್ಲಿಮರ ಹತ್ಯಾಕಾಂಡ, ಭಾರತದೆಲ್ಲೆಡೆ ಸಂಘ ಪರಿವಾರಿಗಳು ನಡೆಸುತ್ತಿರುವ ಮುಸ್ಲಿಂ ವಿರೋಧಿ ಗಲಭೆಗಳೇ ಈ ರೀತಿಯ ಉಗ್ರಗಾಮಿ ಗುಂಪುಗಳ ಹುಟ್ಟಿಗೆ ಕಾರಣವಾಗಿವೆ.



ಬಿಜೆಪಿ ಹಾಗೂ RSSನ ಮತಾಂಧರು ಓಟು-ರಾಜಕೀಯ ಅಧಿಕಾರ ದಾಹದಿಂದ ಮಾಡಿದ ಈ ನೀಚ ಕೃತ್ಯಗಳೇ ಈ ದಿನ ಅವರಿಗೆ ತಿರುಗುಬಾಣವಾಗುತ್ತಿದೆ. ಈ ದಾಳಿ-ಪ್ರತಿದಾಳಿಗಳ ವಿಷಚಕ್ರದಲ್ಲಿ ಅಕ್ಷರ ಧಾಮ ದೇವಾಲಯ, ವಾರಣಾಸಿ, ಬೆಂಗಳೂರು, ಗೋವಾ, ದೆಹಲಿಗಳಲ್ಲಿ ಮುಸ್ಲಿಂ ಉಗ್ರರ ದಾಳಿಗಳೂ ನಡೆದು ಅನೇಕ ಅಮಾಯಕರು ಸತ್ತಿದ್ದಾರೆ. ಇವನ್ನೆಲ್ಲಾ ಖಂಡಿಸುತ್ತಲೇ ಇವತ್ತು ಜನಸಾಮಾನ್ಯರು ತಮಗೆ ಆಪತ್ತು ತರಬಹುದಾದ RSSನ ಮುಸ್ಲಿಂ ದ್ವೇಷವನ್ನೂ ವಿರೋಧಿಸಬೇಕಿದೆ.

ಬಿಜೆಪಿಗಳ ದೇಶಪ್ರೇಮ, ತ್ಯಾಗ, ಬಲಿದಾನಗಳಂತ ಮಾತುಗಳು ಬರೀ ಬೊಗಳೆ, ನಾಟಕವೇ ವಿನಃ ಪ್ರಾಮಾಣಿಕವಾದುದಲ್ಲ ಎಂಬುದನ್ನು ಪ್ರಮೋದ್ ಮಹಾಜನ್‌ನ ನಾದಿನಿಯೊಂದಿಗಿನ ಅಕ್ರಮ ಸಂಬಂಧ, ಅವನ ಮಗ ರಾಹುಲ್ ಈಗ ಗುಂಡು-ಗಾಂಜಾ ಗಿರಾಕಿಯಾಗಿ ಸಿಕ್ಕಿಬಿದ್ದಿರುವುದು ಮತ್ತೊಮ್ಮೆ ಸಾಬೀತು ಪಡಿಸಿದೆ. ಸ್ವತಃ ತಿಪ್ಪೆಗುಂಡಿಯಲ್ಲಿ ಹೂತು ಹೋಗುತ್ತಿರುವ ಬಿಜೆಪಿಯ 'ಹಿಂಸೆಯನ್ನು ಬಿತ್ತಿ ಅಧಿಕಾರವನ್ನು ಬೆಳೆಯುವ' ನಾಟಕ ಈಗ ಕೊನೆಯಾಗುತ್ತಿರುವಂತೆ ಕಾಣುತ್ತಿದೆ. ಆತ್ಮಹತ್ಯಾ ಬಾಂಬ್ ದಾಳಿಗಳು ಈಗ ಸಂಘ ಪರಿವಾರದೊಳಗಿನಿಂದಲೇ ಸ್ಫೋಟಿಸುತ್ತಿವೆ.

ಸಾರಿಗೆ ಮಂತ್ರಿಯ ರೋಡ್ ರಾಬರಿ!

...ಆಗಿವೆ ಅವಾಂತರಗಳಿಗೆ ಹಾಲು ಕರೆದು ...ವನು ಬಿಟ್ಟು ಕೆಚ್ಚಲನ್ನೇ ಕುಯ್ಯುವಾನಲ್ಲ! ಈ ...ಕೀಲ್ಡಾ, ಸಾರಿಗೆ ಮಂತ್ರಿಯಾಗಿದ್ದರು. ಅನಂತರ ...ನಾಥ ರೈ, ಬಂದರು. ಅವರ ಇತ್ತೀಚಿನ ಖರ್ಗೆ ...ವರೂ ಇಷ್ಟೊಂದು ದಿನಗಳಟ್ಟು ಟ್ರಾನ್ಸ್‌ಫರ್ ...ಗೆ ಕೈ ಹಾಕಿರಲಿಲ್ಲ. ಈತನಷ್ಟು ಬರೀ ಕೆಚ್ಚಲನ್ನಷ್ಟೇ ...ಯಲ್ಲಾನೇ ಕುಯ್ದೊಂತು ತಿಂದೂ, ಆಶ್ಚರ್ಯವಿಲ್ಲ ....!'



ಎನ್. ಶ್ರೀನಿವಾಸ್

...ಜ್ಯದ ಯಾವುದೇ ...ಟಿ.ಓ. ಕಚೇರಿಗೆ ...ದರೂ ಅಲ್ಲಿನ ...ಟ್‌ಗಳು ಸಾರಿಗೆ ... ಚಲುವ ...ಸ್ವಾಮಿಯ ಬಗ್ಗೆ ...ದ್ದೇ ಗುಣಗಾನ ...ತ್ತಾರೆ. ಮಂತ್ರಿ ...ನ್ನ ಈ ಪಾಟ ...ಗೆಟ್ಟು ಟ್ರಾನ್ಸ್‌ಫರ್ ...ಗೆ ಕೈಯಿಟ್ಟದ್ದು ... ಇದೇ ...ಲ್ಲಾ? ಆರ್.ಟಿ.ಓ. ...ಪೆಕ್ಟರ್‌ಗಳ ...ಂದು ವರ್ಗಾವರ್ಗಿ ಆದೇಶಕ್ಕೆ ಮೂವತ್ತು ... ರೂಪಾಯಿಗಳ ಉತ್ಪತ್ತಿಯಿದೆಯೇ? ಹಾಗೆ ...ದ ಮೂವತ್ತು ಕೋಟಿಯಲ್ಲಿ ತನ್ನ ಗಾಡ್‌ಫಾದರ್ ...ಮಂತ್ರಿ ಕುಮಾರಣ್ಣನಿಗೆ ಬರೀ ಹನ್ನೆರಡು ...ಟಿಯನ್ನಷ್ಟೇ ಕೊಟ್ಟು ಮಿಕ್ಕಿದ್ದನ್ನೆಲ್ಲ ಚಲುವರಾಯ ... ನುಂಗಿಬಿಟ್ಟರೆ? ಈ ಕಾರಣಕ್ಕೇ ಕುಮಾರಣ್ಣ-...ವಣ್ಣ ಒಬ್ಬರ ಕಂಡೊಬ್ಬರು ಬೆನ್ನು ತಿರುಗಿಸುವಷ್ಟು ...ಥ ಹಳಸಿದೆಯೇ? ಸಾರಿಗೆ ಕಮಿಷನರ್ ಹುದ್ದೆಗೆ ...ಸು ಪೋಲೀಸ್ ಅಧಿಕಾರಿ ನಾರಾಯಣಗೌಡರನ್ನು ...ಕಿದ್ದ ಕುಮಾರಣ್ಣ ಅದನ್ನು ಏಕಾಏಕಿ ಕೈಬಿಟ್ಟದ್ದೇಕೆ?


...ೀಗೆ ಹೊಗೆಯಾಡುವ ಅನುಮಾನ, ಅವಮಾನ, ...ಮಾಧಾನಗಳ ಒಟ್ಟೂ ಮೊತ್ತವೇ ನಾಗಮಂಗಲದ ...ಕ ಚಲುವರಾಯಸ್ವಾಮಿ ಉರ್ಫ್ ಸ್ವಾಮಿಗೌಡರು ...ತ್ರಿಯಾಗಿರುವ ಸಾರಿಗೆ ಇಲಾಖೆ. ವಾಣಿಜ್ಯ ತೆರಿಗೆ ...ತ್ತು ಅಬಕಾರಿ ಬಿಟ್ಟರೆ ರಾಜ್ಯ ಬೊಕ್ಕಸಕ್ಕೆ ದೊಡ್ಡ ...ಯ ಕಲ್ಪಿಸುವ ಸಾರಿಗೆ ಇಲಾಖೆಗೆ ಈ ಹಿಂದೆ ... ಮಂತ್ರಿಯಾಗಿದ್ದರು. ಅನಂತರ ಸಗೀರ್ ಅಹ್ಮದ್, ...ನಾಥ ರೈ ಬಂದರು. ಧರ್ಮಸಿಂಗ್ ಮುಖ್ಯಮಂತ್ರಿ ...ದ ಮೇಲೆ ಅದನ್ನು ಖರ್ಗೆಗೆ ಕೊಟ್ಟರು. ಈ ... ಖರ್ಗೆ ಹಾಲನ್ನಷ್ಟೇ ಕರೆದುಕೊಂಡರೆ ಮಿಕ್ಕವರು ...ಖೆಗೆ ಅಷ್ಟಿಷ್ಟು ಘನತೆ ತಂದುಕೊಟ್ಟರು. ವರ್ಷಕ್ಕೆ ...ರಾರು ಕೋಟಿ ಮೊತ್ತದ ರಸ್ತೆ ತೆರಿಗೆ, ಪ್ರವೇಶ ... ಸಂಗ್ರಹಿಸಿಕೊಡುವ ಸಾರಿಗೆ ಇಲಾಖೆಯಲ್ಲೇ ...್.ಆರ್.ಟಿ.ಸಿ. ಬರುತ್ತದೆ. ಮೇಯುವವರಿಗೆ ಸಮೃದ್ಧ ಹುಲ್ಲುಗಾವಲಿನಂತಿರುವ ಕೆಎಸ್ಆರ್‌ಟಿಸಿ ಅದೆಷ್ಟೇ ಸೋರಿದರೂ ವಾರ್ಷಿಕ ನೂರೈವತ್ತರಿಂದ ಇನ್ನೂರು ಕೋಟಿ ಆದಾಯಕ್ಕೆ ಮೋಸವಿಲ್ಲ.

ಆದರೆ ಕಳೆದ ಫೆಬ್ರವರಿ ಹದಿನೇಳಕ್ಕೆ ಚಲುವರಾಯ ಸ್ವಾಮಿ ಕಾಲಿಟ್ಟದ್ದೇ ತಡ ಮೂವತ್ತು ವರ್ಷಗಳಷ್ಟು ಅನಾಹುತ ಮೂರೇ ತಿಂಗಳಲ್ಲಿ ನಡೆದು ಹೋಯಿತು. ಸಾರಿಗೆ ಮಂತ್ರಿಯಾಗಿ ಪ್ರಮಾಣ ಮಾಡಿದ ಮರುಕ್ಷಣವೇ ಚಲುವರಾಯಸ್ವಾಮಿ ಮಾಡಿದ ಮೊದಲ ಕೆಲಸ ವೆಂದರೆ ಈ ಹಿಂದೆ ತನಗೆ ವಿಶೇಷಾಧಿಕಾರಿ ಯಾಗಿದ್ದ ತಿಪ್ಪೇಸ್ವಾಮಿ ಎಂಬ ಪ್ರಚಂಡನನ್ನು ಒದ್ದೋಡಿಸಿ ಆ ಜಾಗಕ್ಕೆ ಎನ್. ಶ್ರೀನಿವಾಸ್ ಎಂಬ ಪ್ರಳಯಾಂತಕ ಸಾರಿಗೆ ಅಧಿಕಾರಿಯನ್ನು ತಂದದ್ದು. ಹೊಸ ಮನೆ ಕನ್ನಕ್ಕೆ ಹಳೇ ಕಳ್ಳನೇ ಲಾಯಕ್ಕು ಎಂಬಂತೆ ಮೂವತ್ತು ಕೋಟಿಯ ಆರ್.ಟಿ.ಓ. ಟ್ರಾನ್ಸ್‌ಫರ್ ಕರ್ಮಕಾಂಡವನ್ನು ಹುಟ್ಟುಹಾಕಿದ್ದೇ ಈತ. ಈ ಶ್ರೀನಿವಾಸ್ ಸೀನಿಯರ್ ಆರ್.ಟಿ.ಓ. ಇನ್ಸ್‌ಪೆಕ್ಟರ್. ಆ ಕಾಲದಿಂದಲೂ ಹೊಸಪೇಟೆ ಆರ್.ಟಿ.ಓ. ಕಛೇರಿಯಲ್ಲಿ ಬೀಡುಬಿಟ್ಟು ಸಂಡೂರಿನ ಮ್ಯಾಂಗನೀಸ್ ಸ್ಮಗ್ಲಿಂಗ್ ದಂಧೆಯ ಆಷ್ಟೂ ಮರ್ಮ ಬಲ್ಲವನು. ಈತನ ಗುರು ವೆಂಕಟೇಶ್ ಮೆಳ್ಳೆಗೇರಿ ಎಂಬಾತ ಈತನಿಗಿಂತಲೂ ನಟೋರಿಯಸ್. ಈತನಿಗೆ ಕೇವಲ ಮ್ಯಾಂಗನೀಸ್ ಸ್ಮಗ್ಲಿಂಗ್ ದಂಧೆಯಷ್ಟೇ ಅಲ್ಲ ರಾಜ್ಯದ ಯಾವ್ಯಾವ ಚೆಕ್‌ಪೋಸ್ಟುಗಳಲ್ಲಿ ಏನೆಲ್ಲಾ ಆದಾಯವಿದೆ ಎಂಬುದು ಕರತಲಾಮಲಕ. ಇಂಥ ಆರ್.ಟಿ.ಓ. ಖದೀಮರೆಲ್ಲ ಸೇರಿ ಹುಟ್ಟು ಹಾಕಿದ್ದೇ 'ಕರ್ನಾಟಕ ರಾಜ್ಯ ಮೋಟಾರ್ ವಾಹನಗಳ ತನಿಖಾಧಿಕಾರಿಗಳ ಸಂಘ.'



ಸಾರಿಗೆ ಮಂತ್ರಿ ಚಲುವರಾಯಸ್ವಾಮಿ

ಇದು ಸ್ಥಾಪನೆಯಾದ ಕಾರಣ ಕೇಳಿಬಿಟ್ಟರೆ ಎಂಥವರಿಗೂ ಅಚ್ಚರಿಯಾಗಲೇಬೇಕು. ಈ ಹಿಂದೆ ಕೆಲ ಭ್ರಷ್ಟ ಆರ್.ಟಿ.ಓ.ಗಳು ಮಂತ್ರಿಗೆ ಲಕ್ಷಾಂತರ ರೂಪಾಯಿ ಲಂಚ ಕೊಟ್ಟು ಬಿಜಾಪುರದ ಝಳಕಿ ಚೆಕ್‌ಪೋಸ್ಟಿಗೋ, ಬೆಂಗಳೂರು-ಹೊಸೂರು ರಸ್ತೆಯ ಅತ್ತಿಬೆಲೆ ಚೆಕ್ ಪೋಸ್ಟಿಗೋ ಟ್ರಾನ್ಸ್‌ಫರ್ ಮಾಡಿಸಿಕೊಳ್ಳುತ್ತಿದ್ದರು. ಹಾಗೆ ದುಡ್ಡು ಕೊಟ್ಟು ಬಂದವನ ಜಾಗಕ್ಕೆ ಕೆಲವೇ ತಿಂಗಳಿಗೆ ಮತ್ತೊಬ್ಬ ಆತನಿಗಿಂತಲೂ ಹೆಚ್ಚು ದುಡ್ಡು ಕೊಟ್ಟು ಬಂದನೆಂದರೆ, ಮೊದಲಿದ್ದವನು ಕೈ ಸುಟ್ಟುಕೊಂಡಂತೆಯೇ. ಆತ ಮಂತ್ರಿಗೆ ಕೊಟ್ಟ ಲಕ್ಷಾಂತರ ರೂಪಾಯಿ ನೀರುಪಾಲು!



[illegible] ರೋಡ್ ರಾಬರಿ

ಹೀಗಾಗದೇ ಎಲ್ಲರೂ ಹಂಚಿ ತಿನ್ನೋಣ ಎಂದುಕೊಂಡು RTO ಖದೀಮರೆಲ್ಲ ಮುರುಗಯ್ಯ ಎಂಬಾತನ ನೇತೃತ್ವದಲ್ಲಿ ಸಂಘ ಮಾಡಿಕೊಂಡರು. ಆ ಪ್ರಕಾರ ಒಬ್ಬ RTO ಇನ್ಸ್‌ಪೆಕ್ಟರ್ ಸಾರಿಗೆ ಮಂತ್ರಿಗೆ ಮೂವತ್ತು ಲಕ್ಷ ಕೊಟ್ಟು ಒಮ್ಮೆ ಝಳಕಿ ಚೆಕ್‌ಪೋಸ್ಟಿಗೆ ಬಂದನೆಂದರೆ ಒಂದು ವರ್ಷದ ತನಕ ಬೇರೆ ಯಾರೂ ಆತನ ವಿರುದ್ಧ ಮಂತ್ರಿಗೆ ಲಂಚ ಕೊಡುವಂತಿಲ್ಲ!

ಮುರುಗಯ್ಯನ ನಂತರ ಇಂಥ ಆರ್.ಟಿ.ಓ.ಗಳ ಕೂಟಕ್ಕೆ ನಾಯಕನಾದವನು ವೆಂಕಟೇಶ್ ಮೆಳ್ಳೆಗೇರಿ. ಒಂದಷ್ಟು ದಿನಗಳ ಕಾಲ ಇದು ನೆಟ್ಟಗಿತ್ತು. ಆದರೆ ಮೆಳ್ಳೆಗೇರಿ ಮತ್ತು ಮುರುಗಯ್ಯ ಬರೀ ಲಿಂಗಾಯಿತರಿಗಷ್ಟೇ ಮಣೆ ಹಾಕುತ್ತಾರೆಂದೂ, ಅಧಿಕ ಆಮದನಿಯ ಚೆಕ್‌ಪೋಸ್ಟುಗಳಿಗೆ ತಮ್ಮವರನ್ನಷ್ಟೇ ತರುತ್ತಾರೆಂದು ಆರೋಪಿಸಿ ಯೋಗಾರಮೇಶ್ ಎಂಬಾತನ ನೇತೃತ್ವದಲ್ಲಿ ಒಕ್ಕಲಿಗ, ಕುರುಬ, ಮುಸ್ಲಿಂ ಆರ್‌ಟಿಓಗಳೆಲ್ಲ ಸೇರಿ 'ಕರ್ನಾಟಕ ರಾಜ್ಯ ಮೋಟಾರ್ ವಾಹನ ತನಿಖಾಧಿಕಾರಿಗಳ ಮತ್ತು ತಾಂತ್ರಿಕ ಅಧಿಕಾರಿಗಳ ಸಂಘ' ಎಂಬ ಬಂಡಾಯ ಸಂಘವನ್ನು ಹುಟ್ಟು ಹಾಕಿದ್ದು 1995ರಲ್ಲಿ. ಸದ್ಯ ಚಲುವರಾಯಸ್ವಾಮಿಗೆ ವಿಶೇಷಾಧಿಕಾರಿಯಾಗಿರುವ ಎನ್. ಶ್ರೀನಿವಾಸ್ ಮತ್ತು ಚಲುವರಾಯಸ್ವಾಮಿಯ ಪತ್ನಿ ಬಿ.ಕೆ. ಧನಲಕ್ಷ್ಮಿಯವರ ಏಜಂಟನಂತೆ ಕಾರ್ಯ ನಿರ್ವಹಿಸುವ ಮಂಜೇಗೌಡ ಎಂಬ ಮತ್ತೊಬ್ಬ ಇನ್ಸ್‌ಪೆಕ್ಟರ್ ಕೂಡ ನಿನ್ನೆ ಮೊನ್ನೆಯ ತನಕ ಈ ಯೋಗಾರಮೇಶನ ಸಂಘದಲ್ಲೇ ಇದ್ದರು.



ವೆಂಕಟೇಶ್ ಮೆಳ್ಳೆಗೇರಿ

ಯಾರೇ ಸಾರಿಗೆ ಮಂತ್ರಿಯಾದರೂ ಅಂಥವರನ್ನು ತಮ್ಮ ಬುಟ್ಟಿಗೆ ಹಾಕಿಕೊಂಡು ತಮ್ಮವರಿಗೆ ಸಮೃದ್ಧ ಚೆಕ್‌ಪೋಸ್ಟ್‌ಗಳನ್ನು ಕಲ್ಪಿಸಲು ಈ ಎರಡೂ ಗ್ಯಾಂಗ್‌ಗಳು [illegible] ಸಾರಿಗೆ ಮಂತ್ರಿಯಾದರು ಎಂಬುದು ಗೊತ್ತಾದಂತೆ ಖದೀಮ ವೆಂಕಟೇಶ್ ಮೆಳ್ಳೆಗೇರಿ ಈ ಬಾರಿ ಹೊಸ ತಂತ್ರವೊಂದನ್ನು ಪ್ರಯೋಗಿಸಿಬಿಟ್ಟ. ಆತನ ಯೋಗಾರಮೇಶನ ಜೊತೆಗಿದ್ದ ಎನ್. ಶ್ರೀನಿವಾಸ್, ಮಂಜೇಗೌಡ ಸತ್ಯನ್ ಮುಂತಾದವರನ್ನು ರಾತ್ರೋರಾತ್ರಿ ತನ್ನ ಬುಟ್ಟಿಗೆ ಹಾಕಿಕೊಂಡ.

ಈ ಪೈಕಿ ಮಂಜೇಗೌಡ ಚಲುವರಾಯಸ್ವಾಮಿಯ ಧರ್ಮಪತ್ನಿ ಧನಲಕ್ಷ್ಮಿಯ ತಂಗಿಯ ಗಂಡ ಕೃಷ್ಣೇಗೌಡ ಎಂಬಾತನಿಗೆ ಖಾಸಾ ಅಣ್ಣ. ಕೈಗಾರಿಕಾ ಇಲಾಖೆಯಲ್ಲಿ ಇಂಡಸ್ಟ್ರಿಯಲ್ ಎಕ್ಸ್‌ಟೆನ್‌ಷನ್ ಆಫೀಸರ್ ಆಗಿರುವ ಕೃಷ್ಣೇಗೌಡನ ಮೂಲಕ ಇಡೀ ಚಲುವರಾಯಸ್ವಾಮಿಯ ಕಿಚನ್ ಕ್ಯಾಬಿನೆಟ್ ವೆಂಕಟೇಶ್ ಮೆಳ್ಳೆಗೇರಿಯ ವಶವಾಗಿತ್ತು. ಶ್ರೀನಿವಾಸ್ ಸಾರಿಗೆ ಮಂತ್ರಿಗೇ ವಿಶೇಷಾಧಿಕಾರಿಯಾಗಿಬಿಟ್ಟ. ಆತನ ದೋಸ್ತ್ ಮಂಜೇಗೌಡನಿಗೆ ಸಾರಿಗೆ ಮಂತ್ರಿಯ ಚೇಂಬರ್ರೇ ಪಡಸಾಲೆಯಂತಾಯ್ತು. ಅಲ್ಲಿಗೆ ಅಸಹ್ಯದ ಟ್ರಾನ್ಸ್‌ಫರ್ ಕರ್ಮಕಾಂಡವೊಂದಕ್ಕೆ ಇಡೀ ಸಾರಿಗೆ ಇಲಾಖೆ ಸಜ್ಜಾಗಿ ನಿಂತಿತ್ತು.

ಆತನಕ ರಾಜ್ಯದ ಬೇರೆಬೇರೆ ಚೆಕ್‌ಪೋಸ್ಟುಗಳಿಗೆ ಬಂದಿದ್ದ ಆರ್.ಟಿ.ಓ. ಇನ್ಸ್‌ಪೆಕ್ಟರ್‌ಗಳೆಲ್ಲ ಧರ್ಮಸಿಂಗ್ ಸಂಪುಟದಲ್ಲಿ ಸಾರಿಗೆ ಮಂತ್ರಿಯಾಗಿದ್ದ ಖರ್ಗೆಗೆ ಲಂಚ ಕೊಟ್ಟೇ ಬಂದಿದ್ದರು. ಈ ಪೈಕಿ ಮೈನ್ಸ್ ಸ್ಮಗ್ಲಿಂಗ್ ದಂಧೆಯ ಜೊತೆ ಕೈ ಜೋಡಿಸಿದ್ದು ಗೊತ್ತಾಗಿಯೇ ಖರ್ಗೆ ಸಾಹೇಬರು ಮೆಳ್ಳೆಗೇರಿಯನ್ನೂ ಆತನ ಇಡೀ ಕೂಟವನ್ನೂ ದೂರವಿಟ್ಟದ್ದರು. ಆದರೆ ಚಲುವರಾಯಸ್ವಾಮಿ ಸಾರಿಗೆ ಮಂತ್ರಿಯಾಗುತ್ತಿದ್ದಂತೆ ಖದೀಮರ ಕೂಟಕ್ಕೆ ಜೀವ ಬಂತು. ಹಾಗೇ 2006ರ ಏಪ್ರಿಲ್ 20 ರಂದು ಹೊರಬಿದ್ದ ಮೊದಲ ಟ್ರಾನ್ಸ್‌ಫರ್ ಆದೇಶದಲ್ಲಿ ಐದು ಮಂದಿ ಹಿರಿಯ ಇನ್ಸ್‌ಪೆಕ್ಟರ್‌ಗಳನ್ನೂ ಏಳು ಮಂದಿ ಆರ್.ಟಿ.ಓ. ಇನ್ಸ್‌ಪೆಕ್ಟರ್‌ಗಳನ್ನೂ ಅಕ್ರಮವಾಗಿ ಎತ್ತಂಗಡಿ ಮಾಡಲಾಗಿತ್ತು.

ಆ ಹೊತ್ತಿಗೆ ವರ್ಗಾವರ್ಗಿ ಆದೇಶವಿರಲಿಲ್ಲವಾದ್ದರಿಂದ ಡೆಪ್ಯುಟೇಷನ್ ನೆಪದಲ್ಲಿ ಒಂದಷ್ಟು ಇನ್ಸ್‌ಪೆಕ್ಟರ್‌ಗಳನ್ನು ಅಲ್ಲಾಡಿಸಿಬಿಟ್ಟರೆ ಮಿಕ್ಕವರೆಲ್ಲ ಭಯ ಬಿದ್ದು ದುಡ್ಡು ತಂದು ಕೊಡುತ್ತಾರೆ ಎಂಬುದು ಚಲುರಾಯಸ್ವಾಮಿಯ ಹುನ್ನಾರವಾಗಿತ್ತು. ಹೀಗೆ ಹೊರಬಿದ್ದ ಮೊದಲ ಆದೇಶದಲ್ಲಿ ಝಳಕಿ ಚೆಕ್ ಪೋಸ್ಟ್‌ನಲ್ಲಿದ್ದ ತಿಪ್ಪೇಸ್ವಾಮಿಯನ್ನು ನಯಾಪೈಸೆಯ ಆದಾಯವಿಲ್ಲದ ಸಾಗರಕ್ಕೆ ಹಾಕಿದ್ದರು. ವಾದಿರಾಜರನ್ನು ಅದೇ ಝಳಕಿಯಿಂದ ಮೈಸೂರಿಗೆ ಹಾಕಿದ್ದರು. ಆದಾಯದಲ್ಲಿದ್ದವರನ್ನು ಅಲ್ಲಾಡಿಸಿ ನೊಣ ಹೊಡೆಯುವ ಚೆಕ್ ಪೋಸ್ಟುಗಳಲ್ಲಿದ್ದವರನ್ನು ಅಲ್ಲಿಗೆ ತಂದರೆ, ಉಳಿದವರೆಲ್ಲರೂ ಕಾಸು ಬಿಚ್ಚುತ್ತಾರೆ ಎಂಬುದು ಈ ಅಕಾಲಿಕ ಟ್ರಾನ್ಸ್‌ಫರ್‌ನ ಉದ್ದೇಶವಾಗಿತ್ತು.

ಇಲ್ಲಿನ ಮರ್ಮವಿಷ್ಟೇ. ಮಹಾರಾಷ್ಟ್ರದ ಸೊಲ್ಲಾಪುರದಿಂದ ಕರ್ನಾಟಕವನ್ನು ಪ್ರವೇಶಿಸುವ ರಾಷ್ಟ್ರೀಯ ಹೆದ್ದಾರಿಗೆ ಬಿಜಾಪುರದ ಝಳಕಿ ಚೆಕ್‌ಪೋಸ್ಟೇ ಹೆಬ್ಬಾಗಿಲಿದ್ದಂತೆ. ಇಲ್ಲಿಗೆ ಹನ್ನೆರಡು ಮಂದಿ ಇನ್ಸ್‌ಪೆಕ್ಟರ್‌ಗಳೂ, ಹದಿನೆಂಟು ಮಂದಿ ಹಿರಿಯ ಇನ್ಸ್‌ಪೆಕ್ಟರ್‌ಗಳೂ ಸೇರಿ ದಿನಕ್ಕೆ ಮೂರು ಶಿಫ್ಟ್‌ಗಳಲ್ಲಿ ದುಡಿಯುತ್ತಾರೆ. ಈ ಮೂವತ್ತೂ ಮಂದಿಯ ಪೈಕಿ ಹದಿನೈದು ಮಂದಿ ಒಂದು ತಿಂಗಳು ಚೆಕ್‌ಪೋಸ್ಟ್ ಡ್ಯೂಟಿ ಮಾಡಿದರೆ ಮತ್ತೊಂದು ತಿಂಗಳು ಕಚೇರಿ ಕೆಲಸ ಮಾಡುತ್ತಾರೆ. ಅಲ್ಲಿಗೆ ತಲಾ ಒಬ್ಬನಿಗೆ ವರ್ಷಕ್ಕೆ ಆರು ತಿಂಗಳು ಚೆಕ್ ಪೋಸ್ಟ್ ಸಿಗುತ್ತದೆ. ಝಳಕಿ ಚೆಕ್‌ಪೋಸ್ಟ್ ಒಂದರಲ್ಲೇ ದಿನವೊಂದಕ್ಕೆ ಎಂಟು ಲಕ್ಷ ರೂಪಾಯಿ ಮೇಲ್ಬಾಸು ಹುಟ್ಟುತ್ತದೆ. ತಿಂಗಳಿಗಿದು 2.40 ಕೋಟಿಯಾಯಿತು. ಅಲ್ಲಿಗೆ RTO ಇನ್ಸ್‌ಪೆಕ್ಟರ್ ಒಬ್ಬನ ತಿಂಗಳ ಚೆಕ್‌ಪೋಸ್ಟ್ ಕೊಳ್ಳೆಯೇ ಹದಿನಾರು ಲಕ್ಷ ರೂಪಾಯಿಗಳು!

ವರ್ಷಕ್ಕೆ ಆರು ತಿಂಗಳು ಬಿಜಾಪುರದಲ್ಲಿ ಕಚೇರಿ ಕೆಲಸ ಮಾಡಿ ಇನ್ನಾರು ತಿಂಗಳು ಝಳಕಿ ಚೆಕ್‌ಪೋಸ್ಟ್‌ನಲ್ಲಿದ್ದರೂ ವರ್ಷಕ್ಕೆ ಅದೇ ತೊಂಬತ್ತಾರು ಲಕ್ಷ ರೂಪಾಯಿಗಳಾಯಿತು. ಅದರಲ್ಲಿ ಮಂತ್ರಿಗೆ ಮೂವತ್ತು ಲಕ್ಷ ಕೊಡುವುದು ಯಾವ ಲೆಕ್ಕ? ಇನ್ನೂ ಅರವತ್ತಾರು ಲಕ್ಷ ಉಳಿಯುತ್ತದಲ್ಲ!

ಹೀಗೆ ಮೂವತ್ತು ಮಂದಿ ಆರ್.ಟಿ.ಓ. ಇನ್ಸ್‌ಪೆಕ್ಟರ್‌ಗಳು ಬಿಜಾಪುರಕ್ಕೆ ಬರಲು ಸಾರಿಗೆ ಮಂತ್ರಿಗೆ ತಲಾ ಮೂವತ್ತು ಲಕ್ಷದಂತೆ ಕೊಟ್ಟರೆ ಅದೇ ಒಂಭತ್ತು ಕೋಟಿಯಾಯಿತು. ಹಾಗೇ [illegible] ಹೆದ್ದಾರಿಯ ರಾಮನಗರ ಚೆಕ್‌ಪೋಸ್ಟಿನ ಮೂವತ್ತೆರಡು ಮಂದಿ ಇನ್ಸ್‌ಪೆಕ್ಟರ್‌ಗಳು ಮಂತ್ರಿಗೆ ತಲಾ ಒಂಭತ್ತು ಲಕ್ಷದಂತೆ ಕೊಟ್ಟರೆ ಅದೇ ಮೂರು ಕೋಟಿಯಾಗುತ್ತದೆ

(ಮುಂದಿನ ಪುಟಕ್ಕೆ)

ಸಾರಿಗೆಗೆ ಧರ್ಮಪತ್ನಿ ಮಂಡ್ಯಕ್ಕೆ ಗುರುಪತ್ನಿ

ನಾಗಮಂಗಲದ ಜನ 'ನಂ ಸ್ವಾಮಿಗೌಡನ ಯೋಗ ಅಂದ್ರೆ ಒಳ್ಳೇ ಶ್ರೀನಿವಾಸ ಕಲ್ಯಾಣದಂಗದೆ ಕಲಾ.....!' ಎಂದು ನಗಾಡುವುದಕ್ಕೂ ಕಾರಣವಿಲ್ಲದಿಲ್ಲ. ...ಲುವರಾಯಸ್ವಾಮಿ ಸದ್ಯ ಸಾರಿಗೆ ಮಂತ್ರಿಯಷ್ಟೇ ಅಲ್ಲ, ಮಂಡ್ಯ ಜಿಲ್ಲಾ ಉಸ್ತುವಾರಿ ಮಂತ್ರಿ ಕೂಡ. ಹಾಗಂಥ ಮಂಡ್ಯದ ಸಮಸ್ಯೆ ಹೊತ್ತು ಯಾರೇ ಕೆಲಸ ಮಾಡಿಸಿಕೊಳ್ಳಬೇಕೆಂದರೂ ಅದಕ್ಕೆ ಮಂಡ್ಯದ ಮಾಜಿ ಶಾಸಕಿ ಪ್ರಭಾವತಿ ಜಯರಾಮ್‌ರನ್ನೇ ನೋಡಬೇಕು. ಮಾಜಿ ಗಣಿಮಂತ್ರಿ ಎಸ್.ಡಿ. ಜಯರಾಮ್ ತೀರಿಕೊಂಡ ನಂತರ ಅವರ ಪತ್ನಿ ಪ್ರಭಾವತಿಯನ್ನು ಮಂಡ್ಯಕ್ಕೆ ಶಾಸಕಿಯನ್ನಾಗಿ ಮಾಡುವಲ್ಲಿ ಚಲುವರಾಯನ ಪಾತ್ರವೇ ದೊಡ್ಡದಿತ್ತು, ಈಗ ಮಂಡ್ಯದ ವಿಷಯದಲ್ಲಿ ಪ್ರಭಾವತಿಯವರ ಮಾತೇ ಅಂತಿಮ. ತನ್ಮೂಲಕ ಸ್ವಾಮಿಗೌಡ ಗುರುವಿನ ಋಣ ತೀರಿಸುತ್ತಿದ್ದಾರೆ.

ಆದರೆ ಸಾರಿಗೆ ಇಲಾಖೆಯ ವಿಷಯದಲ್ಲಿ ಪ್ರಭಾವತಿ ಜಯರಾಮ್ ಕೈಹಾಕುವಂತಿಲ್ಲ. ಅಲ್ಲೇನಿದ್ದರೂ ತಮ್ಮ ಧರ್ಮಪತ್ನಿ ಬಿ.ಕೆ. ಧನಲಕ್ಷ್ಮಿಯವರ ಮರ್ಜಿಯೇ ಅಂತಿಮ. ಅವರ ತಂಗಿಯ ಗಂಡ ಕೃಷ್ಣೇಗೌಡನನ್ನು ಇಷ್ಟರಲ್ಲೇ ಕೈಗಾರಿಕಾ ಇಲಾಖೆಯಿಂದ ಆರ್.ಟಿ.ಓ. ಇನ್ಸ್‌ಪೆಕ್ಟರ್ ಹುದ್ದೆಗೆ ತರುವ ಕೆಲಸಕ್ಕೂ ಚಲುವರಾಯಸ್ವಾಮಿ ಕೈ ಹಾಕಿದ್ದಾರೆ. ಕೃಷ್ಣೇಗೌಡನ ಅಣ್ಣ ಮಂಜೇಗೌಡ ಕೂಡ ಆರ್.ಟಿ.ಓ. ಇನ್ಸ್‌ಪೆಕ್ಟರ್. ಹೀಗಾಗಿ ಇಡೀ ಸಾರಿಗೆ ಇಲಾಖೆ ಪತ್ನಿ ಧನಲಕ್ಷ್ಮಿಗೂ, ಮಂಡ್ಯದ ಉಸ್ತುವಾರಿ ಗುರುಪತ್ನಿ ಪ್ರಭಾವತಿ ಜಯರಾಮ್‌ಗೂ ಸರಿಸಮನಾಗಿ ವಿತರಣೆಯಾಗಿದೆ.

ಎಂಥಾ ಇಕ್ವಾಲಿಟಿಯಲ್ಲವೆ?



[illegible]



ಪ್ರಭಾವತಿ ಜಯರಾಂ

(ಹಿಂದಿನ ಪುಟದಿಂದ)

ಇನ್ನು ಚಿತ್ರದುರ್ಗದ ಹದಿನೈದು ಇನ್ಸ್‌ಪೆಕ್ಟರ್‌ಗಳೇ ತಲಾ ಹತ್ತು ಲಕ್ಷದಂತೆ ಕೊಡುತ್ತಾರೆ. ಹುಮ್ನಾಬಾದ್ ಚೆಕ್ ಪೋಸ್ಟ್ ಇರುವ ಬೀದರ್ ಆರ್.ಟಿ.ಓ. ಕಚೇರಿಯ ಹನ್ನೆರಡು ಮಂದಿ ಇನ್ಸ್‌ಪೆಕ್ಟರ್‌ಗಳೂ ತಲಾ ಹತ್ತು ಲಕ್ಷ ತೆರಬೇಕು. ಹೊಸೂರು ರಸ್ತೆಯ ಅತ್ತಿಬೆಲೆ ಚೆಕ್ ಪೋಸ್ಟ್‌ನ ಹದಿನಾರು ಮಂದಿ ತಲಾ ಹತ್ತು ಲಕ್ಷದಂತೆ ಕೊಟ್ಟರೆ ಅದೇ 1.60 ಕೋಟಿ. ಆಂಧ್ರ-ಕರ್ನಾಟಕ ಹೆದ್ದಾರಿಯ ಬಾಗೇಪಲ್ಲಿ ಚೆಕ್‌ಪೋಸ್ಟ್‌ನ 20 ಮಂದಿ ತಲಾ ಏಳು ಲಕ್ಷದಂತೆ ಬಿಚ್ಚಲೇ ಬೇಕು. ಹೀಗೆ ರಾಜ್ಯಾದ್ಯಂತ ಇರುವ ವಿವಿಧ ಚೆಕ್‌ಪೋಸ್ಟುಗಳ ಮುನ್ನೂರಕ್ಕೂ ಅಧಿಕ ಇನ್ಸ್‌ಪೆಕ್ಟರ್‌ಗಳು ಮತ್ತು ಮೂವತ್ತು ಮಂದಿ ಆರ್.ಟಿ.ಓ.ಗಳ ಒಂದು ಸಣ್ಣ ಟ್ರಾನ್ಸ್‌ಫರ್ ಆದೇಶವೇ ಸಾರಿಗೆ ಮಂತ್ರಿಯಾದವನಿಗೆ ಮೂವತ್ತು ಕೋಟಿ ರೂಪಾಯಿಗಳ ಲಾಭ ತಂದು ಕೊಡುತ್ತದೆ.

ಚಲುವರಾಯಸ್ವಾಮಿಗೆ ಮೇ ತಿಂಗಳ ತನಕ ಕಾಯುವಷ್ಟು ಸಹನೆಯಿಲ್ಲ. ಅದೇ ಹೊತ್ತಿಗೆ ಸಾರಿಗೆ ಇಲಾಖೆಯ ಆಮದನಿಯ ಮೇಲೆ ದೇವೇಗೌಡರ ಹಿರಿಯ ಮಗ ಬಾಲಕೃಷ್ಣೇಗೌಡರು ಕಣ್ಣಿಟ್ಟು ಅಲ್ಲಿಗೆ ಹಿರಿಯ ಐಪಿಎಸ್ ಅಧಿಕಾರಿ ನಾರಾಯಣಗೌಡರನ್ನು ತಂದು ಅಷ್ಟೂ ಮೂವತ್ತು ಕೋಟಿಯನ್ನು ತಮ್ಮತ್ತ ತಿರುಗಿಸಲು ಲೆಕ್ಕ ಹಾಕಿದ್ದರು. ಜೊತೆಗೆ ಈಗಿದ್ದ ಸಾರಿಗೆ ಕಮಿಷನರ್ ಓಂಪ್ರಕಾಶ್ ಇಂಥ ಬೇಕಾಬಿಟ್ಟಿ ಟ್ರಾನ್ಸ್‌ಫರ್‌ಗೆ ವಿರೋಧವಾಗಿದ್ದರು. ಹಾಗಿದ್ದೂ ಖತರ್‌ನಾಕ್ ಶ್ರೀನಿವಾಸ್ ಮತ್ತು ಮಂಜೇಗೌಡ ಗ್ಯಾಂಗ್ ಏಪ್ರಿಲ್ ಇಪ್ಪತ್ತರಂದು ಮೊದಲ ಸುತ್ತಿನ ಸ್ಯಾಂಪಲ್ ಟ್ರಾನ್ಸ್‌ಫರ್ ಆದೇಶ ಹೊರಡಿಸಿತ್ತು.

ಇದು ಗೊತ್ತಾಗಿದ್ದೇ ತಡ ಆಯಕಟ್ಟಿನ ಜಾಗದಲ್ಲಿದ್ದವರೆಲ್ಲ ಕಂತೆಕಂತೆ ಲಂಚ ತಂದು ಚಲುವರಾಯನ ಪಾದಕ್ಕೆ ಸುರಿದರು. ಇದಾಗಿ ಹದಿನಾರನೆ ದಿನಕ್ಕೇ ಅಂದರೆ 2006 ರ ಮೇ 6 ರಂದು ಮತ್ತೆ 79 ಮಂದಿ ಸೀನಿಯರ್ ಇನ್ಸ್‌ಪೆಕ್ಟರ್‌ಗಳೂ, 107 ಮಂದಿ ಇನ್ಸ್‌ಪೆಕ್ಟರ್‌ಗಳೂ ಸೇರಿದಂತೆ ಒಟ್ಟು 186 ಮಂದಿ ಇನ್ಸ್‌ಪೆಕ್ಟರ್‌ಗಳ ಭರ್ಜರಿ ಟ್ರಾನ್ಸ್‌ಫರ್ ಪಟ್ಟಿ ಹೊರಬಿತ್ತು. ಏಪ್ರಿಲ್ 20 ರಂದು ಹೊರಬಿದ್ದ ಟ್ರಾನ್ಸ್‌ಫರ್ ಪಟ್ಟಿಯೇ ಕೊನೆ ಎಂದಿದ್ದವರಿಗೆ ಇದು ಎಂಥಾ ಆಘಾತ ನೀಡಿತ್ತೆಂದರೆ, ಮೊದಲ ಪಟ್ಟಿಯಲ್ಲಿ ವರ್ಗಾವಣೆಗೊಂಡಿದ್ದ ಕೆಲವರಿಗೆ ಎರಡನೇ ಪಟ್ಟಿಯಲ್ಲಿ ಫಲವತ್ತಾದ ಜಾಗ ತೋರಿಸಲಾಗಿತ್ತು. ಫಲವತ್ತಾದ ಜಾಗದಲ್ಲಿದ್ದವರನ್ನು ನೊಣ ಹೊಡೆಯುವ ಚೆಕ್‌ಪೋಸ್ಟುಗಳಿಗೆ ಹಾಕಲಾಗಿತ್ತು.

ಹೋಗಲಿ, ಇದಾದ ನಂತರವಾದರೂ ಟ್ರಾನ್ಸ್‌ಫರ್ ದಂಧೆ ನಿಂತಿತು ಎಂದು ನಿಟ್ಟುಸಿರಿಟ್ಟವರಿಗೆ ಗಾಯದ ಮೇಲೆ ಬರೆ ಎಳೆದಂತೆ ಮತ್ತೊಂದು ಶಾಕ್ ಕಾದಿತ್ತು. ಅದಾಗಿ ಇಪ್ಪತ್ತೈದು ದಿನಕ್ಕೇ ಅಂದರೆ 2006 ರ ಮೇ 31 ರಂದು ಮೂರನೇ ಅಕಾಲಿಕ, ಅತಾರ್ಕಿಕ ಮತ್ತೊಂದು ಟ್ರಾನ್ಸ್‌ಫರ್ ಆದೇಶ ಹೊರಬಿದ್ದಿತ್ತು. ಈ ಬಾರಿ 27 ಮಂದಿ ಇನ್ಸ್‌ಪೆಕ್ಟರ್‌ಗಳೂ ಮತ್ತು 24 ಮಂದಿ ಸೀನಿಯರ್ ಇನ್ಸ್‌ಪೆಕ್ಟರ್‌ಗಳೂ ಸೇರಿದಂತೆ ಒಟ್ಟೂ 51 ಮಂದಿಯನ್ನು ಎತ್ತಂಗಡಿ ಮಾಡಲಾಗಿತ್ತು!

ಹೀಗೆ ಪ್ರಾರಂಭದಲ್ಲಿ ಶಿಕ್ಷಾರ್ಥ ಎಂದು ಏಪ್ರಿಲ್ 20 ರಂದು, ಆನಂತರ ವರ್ಗಾವರ್ಗಿ ಎಂದು ಮೇ 6 ರಂದು, ಕೊನೆಯಲ್ಲಿ ಪರಿಷ್ಕೃತ ಎಂದು ಮೇ 31 ರಂದು ಒಂದಲ್ಲ ಮೂರು ಟ್ರಾನ್ಸ್‌ಫರ್‌ಗಳು ಸಂಭವಿಸಿದ್ದವು.


ಶಿಕ್ಷಾರ್ಥ ಎತ್ತಂಗಡಿಯಾದವನನ್ನು ಹದಿನೈದೇ ದಿನಕ್ಕೆ ಫಲವತ್ತಾದ ಜಾಗಕ್ಕೆ ಹಾಕಲಾಗಿತ್ತು. ಒಬ್ಬನೇ ಅಧಿಕಾರಿಯನ್ನು ಒಂದೂ ಮುಕ್ಕಾಲು ತಿಂಗಳೊಳಗೆ ಒಂದಲ್ಲ ಮೂರು ಬಾರಿ ವರ್ಗಾಯಿಸಲಾಗಿತ್ತು. ಒಂದು ಮೂಲದ ಪ್ರಕಾರ ವಿಶೇಷಾಧಿಕಾರಿ ಶ್ರೀನಿವಾಸ್ ಮತ್ತು ಮಂಜೇಗೌಡ ಜೋಡಿ ಮೂವತ್ತು ಕೋಟಿ ಎತ್ತುವಳಿ ಮಾಡಿ ಅದನ್ನು ಮಂತ್ರಿ ಚಲುವರಾಯಸ್ವಾಮಿಗೆ ಮುಟ್ಟಿಸಿತ್ತು!

ಬಹುಶಃ ಅದಷ್ಟೂ ತನ್ನ ಕೈಗೇ ಬರುತ್ತದೆಯೆಂದು ಕುಮಾರಣ್ಣ ಲೆಕ್ಕ ಹಾಕಿದ್ದರೇನೋ. ಅಣ್ಣ ಬಾಲಕೃಷ್ಣೇಗೌಡರು ಬೇರೆ ಕಣ್ಣಿಟ್ಟಿದ್ದರಲ್ಲ; ಆ ಪೈಕಿ ಚಲುವರಾಯಸ್ವಾಮಿ ಹನ್ನೆರಡು ಕೋಟಿಯನ್ನಷ್ಟೇ ಕುಮಾರಣ್ಣನಿಗೆ ಮುಟ್ಟಿಸಿದ್ದಾರೆ. ಮಿಕ್ಕ ಹದಿನೆಂಟು ಕೋಟಿಯನ್ನು ತಾವೇ ನುಂಗಿದ್ದಾರೆ. ಯಾವತ್ತು ವಸೂಲಾದದ್ದು ಹನ್ನೆರಡಲ್ಲ ಒಟ್ಟೂ ಮೂವತ್ತು ಕೋಟಿ ಎಂಬುದು ಕುಮಾರಣ್ಣನಿಗೆ ಗೊತ್ತಾಯಿತೋ ಚಲುವರಾಯನನ್ನು ಕರೆದು ಕೇಳಿದ್ದಾರೆ. 'ಇಲ್ಲ ಅಷ್ಟೇ' ಎಂದಿದ್ದಾನೆ ಚಲುವಣ್ಣ. ಅದೇನಾಯಿತೋ, ಅಲ್ಲಿಂದಾಚೆಗೆ ಕುಮಾರಣ್ಣ ಚಲುವನನ್ನು ದೂರವಿಡಲಾರಂಭಿಸಿದ್ದಾರೆ. ಈ ಮಧ್ಯೆ ಒಂದೆರಡು ಸಭೆಗಳಲ್ಲಿ ಚಲುವರಾಯಸ್ವಾಮಿ ಮತ್ತು ಕುಮಾರಸ್ವಾಮಿ ಮುಖಾಮುಖಿಯಾದಾಗಲೂ ಕುಮಾರಣ್ಣ ಚಲುವರಾಯನ ಮುಖ ಕೂಡ ನೋಡದೇ ಬೆನ್ನು ತಿರಿಗಿಸಿದ್ದಾರೆ.

ಮೂವತ್ತು ಕೋಟಿಯ ಹಡಬೆ ದುಡ್ಡು ಮುಖ್ಯಮಂತ್ರಿಯ ವಿರುದ್ಧ ಸಾರಿಗೆ ಮಂತ್ರಿಯನ್ನೇ ಎತ್ತಿ ಕಟ್ಟಿತು. ಹಾಳಾಗಲಿ; ಇಂಥದೊಂದು ಹಗಲು ದರೋಡೆಯ ವಿರುದ್ಧ ಕನಿಷ್ಠ ಕಾಂಗ್ರೆಸ್ ಆದರೂ ಉಸಿರೆತ್ತಬೇಕಿತ್ತು. ಸಾರಿಗೆ ಮಂತ್ರಿಗೆ ದುಡ್ಡು ಕೊಟ್ಟು ಚೆಕ್‌ಪೋಸ್ಟಿಗೆ ಬಂದ ಯಾವ ಆರ್.ಟಿ.ಓ. ಇನ್ಸ್‌ಪೆಕ್ಟರ್ ತಾನೇ ಸುಮ್ಮನಿರುತ್ತಾನೆ? ರೋಡ್ ರಾಬರಿಗಿಳಿಯದೆ ಆತನಿಗೆ ಬೇರೆ ದಾರಿಯೇನಿದೆ?

ಹ್ಯಾಟಿ ಪ್ರಕಾಶನಿಗೆ ಕಾರಿನ ಗಿಫ್ಟು!

ಯಕಶ್ಚಿತ್ ಪಿಡಬ್ಲ್ಯೂಡಿ ಕಂಟ್ರಾಕ್ಟರ್ ಆಗಿದ್ದ ಚಲುವರಾಯಸ್ವಾಮಿ ನಾಗಮಂಗಲಕ್ಕೆ ಎಮ್ಮೆಲ್ಲೆಯಾಗಿದ್ದು ಆನಂತರ ಮಂತ್ರಿಯಾಗಿದ್ದು ಎಲ್ಲವೂ ಅಪ್ಪಾಜಿ ದೇವೇಗೌಡರಿಂದಲೇ. ಅಂಥವನು ಉಂಡ ಮನೆಗೆ ದ್ರೋಹ ಬಗೆಯಲಾರ ಎಂದೇ ಗೌಡರ ಹಿರಿಮಗ ಬಾಲಕೃಷ್ಣೇಗೌಡರು ಲೆಕ್ಕ ಹಾಕಿದ್ದರು. ಅದೇ ಲೆಕ್ಕಾಚಾರ ದಲ್ಲಿ ಮತ್ತೊಬ್ಬ ಮನೆಮಗನಂತಿದ್ದ ಐಪಿಎಸ್ ಅಧಿಕಾರಿ ನಾರಾಯಣಗೌಡರನ್ನು ಸಾರಿಗೆ ಕಮಿಷನರ್ ಮಾಡಿ ಒಟ್ಟೂ ಮೂವತ್ತು ಕೋಟಿಯನ್ನು ಗೆಬರಿಗೊಳ್ಳುವುದು ಬಾಲಕೃಷ್ಣೇಗೌಡನ ಹುನ್ನಾರವಾಗಿತ್ತು. ಇದು ಗೊತ್ತಾದದ್ದೇ ತಡ ಹಾಲಿ ಸಾರಿಗೆ ಕಮಿಷನರ್ ಓಂಪ್ರಕಾಶ್ ಸೀದಾ ಚಲುವರಾಯಸ್ವಾಮಿಯ ಕಾಲಿಗೆ ಬಿದ್ದು 'ನೀವೇನು ಬೇಕಾದರೂ ಮಾಡಿಕೊಳ್ಳಿ ನಾನು ಅಡ್ಡಬರೋಲ್ಲ' ಎಂದು ಕಣ್ಣೀರಿಟ್ಟರು. ಆದರೆ ನಾರಾಯಣಗೌಡರನ್ನು ಸಾರಿಗೆ ಕಮಿಷನರ್ ಆಗದಂತೆ ತಡೆಯುವುದು ಹೇಗೆ?




ಅದಕ್ಕೆ ಚಲುವರಾಯಸ್ವಾಮಿಗೆ ಸಿಕ್ಕವನು ಹ್ಯಾಟಿ ಪ್ರಕಾಶ. ಈತ ವಿಜಯಕರ್ನಾಟಕದ ವರದಿಗಾರ. ಈ ಹಿಂದೆ ಮೈಸೂರಿನ ಆಂದೋಲನದಲ್ಲಿದ್ದು ಈತನ ಚೋರ ಬುದ್ಧಿ ಕಂಡೇ ರಾಜಶೇಖರ ಕೋಟಿ ಹೊರದಬ್ಬಿದ್ದರು. ನಾಟ್ಯರಾಣಿ ಶಾಂತಲೆ ಎಂಬಾಕೆ ದಿಗಂಬರ ಜೈನರವಳು ಎಂಬ ತನಿಖಾ ವರದಿ(?) ಮಾಡಿದ್ದು ಬಿಟ್ಟರೆ ಹ್ಯಾಟಿ ಪ್ರಕಾಶನಿಗೆ ನೆಟ್ಟಗೊಂದು ವಾಕ್ಯವನ್ನು ಬರೆಯಲು ಬಾರದು. ಹೇಳಿಕೇಳಿ ನಾಗಮಂಗಲದ ಪಿಂಪನಕಟ್ಟೆ ಈತನ ಹುಟ್ಟೂರು. ಆ ಕಾಲದಿಂದಲೂ ಚಲುವರಾಯಸ್ವಾಮಿಗೆ ಹ್ಯಾಟಿ ಸರಬರಾಜು ಮಾಡಿಕೊಂಡೇ ಉದರಪೋಷಣೆ ಮಾಡಿಕೊಂಡಿದ್ದ ಪ್ರಕಾಶ ಯಾವತ್ತು ಚಲುವರಾಯನಿಗೆ ಸಾರಿಗೆ ಮಂತ್ರಿಗಿರಿ ಸಿಕ್ಕಿತೋ ಹ್ಯಾಟಿ ಪ್ರಕಾಶನ ಲಕ್ಕು ಕುದುರಿತು. ಪೋಲೀಸ್ ಅಧಿಕಾರಿ ನಾರಾಯಣಗೌಡರನ್ನು ಸಾರಿಗೆಗೆ ತರುವ ಕುಮಾರಸ್ವಾಮಿಯ ವಿರುದ್ಧ ಮೊದಲು ಸುದ್ದಿ ಹಬ್ಬಿಸಿದ್ದೇ ಈ ಹ್ಯಾಟೀ ಪ್ರಕಾಶ. ಸಾರಿಗೆ ಇಲಾಖೆಯನ್ನು ದೋಚಲು ಕುಮಾರಸ್ವಾಮಿ ಮತ್ತು ಬಾಲಕೃಷ್ಣೇಗೌಡ ಅಲ್ಲಿಗೆ ನಾರಾಯಣಗೌಡರನ್ನು ತರುತ್ತಿದ್ದಾರೆಂಬ ಊಹಾಪೋಹದ ವರದಿಯನ್ನು ಪ್ರಕಾಶ್ ತನಗೆ ಪರಿಚಿತರಾದ ಕೆಲ ಪತ್ರಕರ್ತರಿಗೆ ಹೇಳಿಸಿ ಬೇರೆಬೇರೆ ಪತ್ರಿಕೆಗಳಲ್ಲೂ ಬರೆಸಿದ.

ಇದು ಬಯಲಾಗುತ್ತಿದ್ದಂತೆ ಕುಮಾರಸ್ವಾಮಿ ಸಾರಿಗೆಗೆ ನಾರಾಯಣಗೌಡರನ್ನು ತರುವ ಯೋಚನೆಯನ್ನೇ ಕೈಬಿಟ್ಟರು. ಹೀಗೆ ನಾರಾಯಣಗೌಡರ ವಿರುದ್ಧ ಸುದ್ದಿ ಬರೆಸಿದ್ದೇ ಚಲುವರಾಯಸ್ವಾಮಿ ಎಂಬುದು ಕುಮಾರಸ್ವಾಮಿಗೆ ಗೊತ್ತಾಗಲು ಎಷ್ಟು ಹೊತ್ತು?? ಎಷ್ಟೆಂದರೂ ಚಲುವನಿಗೆ ನಿಯತ್ತಿಲ್ಲ ಎಂದು ಬಾಲಕೃಷ್ಣೇಗೌಡರೂ ಸುಮ್ಮನಾದರು. ಇದಕ್ಕೆ ಪ್ರತಿಫಲವಾಗಿ ವಿಜಯ ಕರ್ನಾಟಕದ ವರದಿಗಾರ ಹ್ಯಾಟಿ ಪ್ರಕಾಶನಿಗೆ ಚಲುವರಾಯಸ್ವಾಮಿ ಕೊಟ್ಟ ಗಿಫ್ಟ್ ಏನು ಗೊತ್ತೆ??

ಒಂದೇ ಒಂದು ಆಲ್ಟೋ ಕಾರು!

ಮಂತ್ರಿ ಅಣ್ಣ ಲಕ್ಷ್ಮಿಕಾಂತನೂ ಮೈನ್ಸ್ ಕಳ್ಳ ಮೆಳ್ಳಿಗೇರಿಯೂ

ಹೊಸಪೇಟೆಯ ಎಸ್. ಶ್ರೀನಿವಾಸ್ ಎಂಬ ದಗಲುಬಾಜಿ ಚಲುವರಾಯಸ್ವಾಮಿಯ ವಿಶೇಷಾಧಿಕಾರಿಯಾಗಿ ಬಂದಿದ್ದೇ ಮೊದಲ ಪಟಾಕಿ ಸಿಡಿದದ್ದು ಮಂತ್ರಿ ಮನೆಯಲ್ಲೇ. ಆತನಕ ಚಲುವರಾಯಸ್ವಾಮಿಯ ಅಷ್ಟೂ ಡೀಲುಗಳನ್ನು ನೋಡಿಕೊಳ್ಳುತ್ತಿದ್ದವನು ಸ್ವಾಮಿಗೌಡನ ಅಣ್ಣ ಲಕ್ಷ್ಮಿಕಾಂತ. ಎಲ್ಲಿಗೆ ಗುದುಮಿದರೆ ಎಷ್ಟು ಕಾಸು ಹುಟ್ಟುತ್ತದೆ ಎಂಬುದನ್ನು ಚೆನ್ನಾಗಿ ಅರಿತಿದ್ದ ಜಲ್ಲಿಕಳ್ಳ ಲಕ್ಷ್ಮಿಕಾಂತ ಹೇಳಿಕೇಳಿ ನಾಗಮಂಗಲದ ರಸ್ತೆ ಕಂಟ್ರಾಕ್ಟರ್. ತಮ್ಮ ಮಂತ್ರಿಯಾದರೂ ಅಧಿಕಾರದ ಕುಣಿಕೆಯನ್ನು ತನ್ನ ಕೈಯಲ್ಲೇ ಇಟ್ಟುಕೊಂಡಿದ್ದ. ಯಾವತ್ತು ಹಳೇ ಆರ್.ಟಿ.ಓ. ಖದೀಮ ಶ್ರೀನಿವಾಸ್ ಅಮ್ಮಾವ್ರ ಏಜಂಟ್ ಆಗಿ ಮಂತ್ರಿ ಕಚೇರಿಯಲ್ಲಿ ಸ್ಥಾಪಿತನಾದನೋ ಅಣ್ಣ ಲಕ್ಷ್ಮಿಕಾಂತ ನಾಗಮಂಗಲಕ್ಕೆ ಗಂಟುಮೂಟೆ ಕಟ್ಟಿದ್ದ.



ಲಕ್ಷ್ಮೀಕಾಂತ್

ಎಲ್ಲೆಲ್ಲಿ ಎಷ್ಟು ಹುಟ್ಟುತ್ತದೆ, ಯಾವ ಆರ್.ಟಿ.ಓ. ಗಂಟು ಮಾಡಿದ್ದಾನೆ ಎಂಬುದರ ಸ್ಪಷ್ಟ ಚಿತ್ರಣವನ್ನು ಮಂತ್ರಿಗೆ ಕೊಟ್ಟದ್ದೇ ಶ್ರೀನಿವಾಸ. ಪ್ರಾರಂಭದಲ್ಲಿ ಝುಳಕಿಯಂಥ ಫಲವತ್ತು ಚೆಕ್‌ಪೋಸ್ಟಿನಲ್ಲಿದ್ದ ದಲಿತ ಅಧಿಕಾರಿ ಜೆ.ವಿ. ರಾಮಯ್ಯನನ್ನು ಶಿವಮೊಗ್ಗದಂಥ ಶೂನ್ಯ ಸಂಪಾದನೆ ಕೇಂದ್ರಕ್ಕೂ, ಬೆಳಗಾವಿಯಲ್ಲಿದ್ದ ಶೇಖ್‌ಜಿಯನ್ನು ಝುಳಕಿಗೂ, ಮೈಸೂರಿನ ಎಸ್. ರಮೇಶನನ್ನು ಹುಮ್ನಾಬಾದ್‌ನಂಥ ಸಮೃದ್ಧ ಸ್ಥಳಕ್ಕೂ ಎತ್ತಂಗಡಿ ಮಾಡಿ ಶ್ರೀನಿವಾಸ್ ಆದೇಶ ಹೊರಡಿಸಿಬಿಟ್ಟ. ಹುಮ್ನಾಬಾದ್‌ನಂಥ ಉತ್ಪತ್ತಿಯ ಜಾಗಕ್ಕೆ ಬಂದ ರಮೇಶ್ ಹೇಳಿಕೇಳಿ ಮಂತ್ರಿ ಅಣ್ಣ ಲಕ್ಷ್ಮಿಕಾಂತನ ಕ್ಯಾಂಡಿಡೇಟು. ಡೀಲು ಕುದುರಿಸಿದ್ದು ಚಲುವರಾಯಸ್ವಾಮಿಯ ಪಕ್ಷದ ಕೈಗಾರಿಕಾ ಇಲಾಖೆಯ ವಿಸ್ತರಣಾಧಿಕಾರಿ ಕೃಷ್ಣೇಗೌಡನ ಅಣ್ಣ ಮಂಜೇಗೌಡ. ಈ ಮಂಜೇಗೌಡ ಎಂಥಾ ಮೂಗುಬೊಟ್ಟು ಗಿರಾಕಿಯೆಂದರೆ ಇಲ್ಲಿಗೆ ಮೂರು ವರ್ಷದ ಹಿಂದೆ ಯುವತಿಯೊಬ್ಬಳ ಕಡೆಯವರು ಈತನ ಮುಖಕ್ಕೆ ಆಸಿಡ್ ಎರಚಿದ್ದರು!

ಬಿಜಾಪುರದ ಝುಳಕಿಯಂಥ ರುಚಿಕಟ್ಟಾದ ಜಾಗದಲ್ಲಿದ್ದ ರಾಮಯ್ಯ ಶಿವಮೊಗ್ಗಕ್ಕೆ ಬಂದು ನೊಣ ಹೊಡೆಯುವ ಬದಲು ಶ್ರೀನಿವಾಸನ ಕೈಗೆ ಏಳು ಲಕ್ಷ ಕೊಟ್ಟು ಕೋಲಾರಕ್ಕೆ ಜಾರಿಕೊಂಡ. ಇದನ್ನು ಕಂಡ ಚಾಮರಾಜನಗರದ ಇನ್ಸ್‌ಪೆಕ್ಟರ್ ಎಚ್.ಸಿ. ನಾಗರಾಜು ಇನ್ನೆಲ್ಲಿ ತನಗೂ ಗತಿ ಕಾಣಿಸುತ್ತಾರೋ ಎಂದು ತಾನೂ ಶ್ರೀನಿವಾಸನಿಗೆ ಐದು ಲಕ್ಷ ಕೊಟ್ಟ. ಆತನನ್ನು ಕೆಜಿಎಫ್‌ನಂಥ ಮೀಡಿಯಂ ಆದಾಯದ ಚೆಕ್‌ಪೋಸ್ಟಿಗೆ ಹಾಕಲಾಯಿತು. ಯಾವತ್ತು ದುಡ್ಡು ಕೊಟ್ಟರೇನೇ ಕೆಲಸವಾಗುತ್ತೆ ಎಂಬ ಸಂದೇಶ ರವಾನೆಯಾಯಿತೋ ಚಲುವರಾಯಸ್ವಾಮಿಯ ಮನೆ ಮುಂದೆ ಹಣದ ಥೈಲಿಯ ಸರತಿ ಸಾಲಿತ್ತು.

ರಾಜೇಶ್ ನಾಯಕ್ ಎಂಬುವವರನ್ನು ಪುತ್ತೂರಿನಿಂದ ಎತ್ತಿ ಮಂಗಳೂರಿಗೆ ಹಾಕಿ ಅಲ್ಲೂ ಕಾಸು ಬಿಚ್ಚಲಿಲ್ಲ ಎಂದು ಚಿಕ್ಕಮಗಳೂರಿಗೆ ಹಾಕಲಾಯಿತು. ಬೆಂಗಳೂರಿನ ರಾಜರಾಜೇಶ್ವರಿನಗರದಲ್ಲಿದ್ದ ಪ್ರಾಮಾಣಿಕ ಅಧಿಕಾರಿ ರಾಜಸಿಂಹರನ್ನು ಹತ್ತು ಲಕ್ಷ ಕೊಡಲಿಲ್ಲ ಎಂಬ ಒಂದೇ ಕಾರಣಕ್ಕೆ ನಿವೃತ್ತಿಗಿನ್ನೂ ಕೆಲದಿನಗಳಿರುವಾಗಲೇ ಮಂಡ್ಯಕ್ಕೆ ಎತ್ತಂಗಡಿ ಮಾಡಲಾಯಿತು. ಪ್ರಾಮಾಣಿಕರಿಗೆ-ದಕ್ಷರಿಗೆ ಈ ಗತಿಯಾದರೆ ಚಿತ್ರದುರ್ಗದಲ್ಲಿದ್ದ ಅಶೋಕ್ ರೆಡ್ಡಿಯನ್ನು ಮೊದಲು ಬೆಂಗಳೂರಿಗೆ ಹಾಕಿ ಆತನಿಂದ ಎಂಟು ಲಕ್ಷ ಕಿತ್ತ ನಂತರ ಮತ್ತೆ ಅದೇ ಚಿತ್ರದುರ್ಗಕ್ಕೆ ಹಾಕಿದ್ದಾರೆ. ಬಿಜಾಪುರದಲ್ಲಿ ದಲಿತ ಅಧಿಕಾರಿ ಕಾಳಸಿಂಗೆಯನ್ನು ಮೊದಲು ಬಾಗಲಕೋಟೆಗೆ ಹಾಕಿ ಅಲ್ಲೂ ಕಾಸು ಬಿಚ್ಚಲಿಲ್ಲ ಎಂದು ಮತ್ತೆ ಧಾರವಾಡಕ್ಕೆ ಬಿಸಾಕಿದ್ದಾರೆ. ಬೆಂಗಳೂರಿನಲ್ಲಿದ್ದ ಯೋಗಾ ಶಮೇಶ್‌ರನ್ನು ಮೊದಲು ಹೊಸಪೇಟೆಗೆ ದಬ್ಬಿ ಆನಂತರ ಕೋಲಾರಕ್ಕೆ ವರ್ಗಾಯಿಸಲಾಗಿದೆ. ಬಿಜಾಪುರದಲ್ಲಿ ಕೇಶವ ಧರಣಿ ಯನ್ನು ಹಾಸನಕ್ಕೂ ಅಲ್ಲಿಂದ ಮತ್ತೆ ಮಂಗಳೂರಿಗೂ ಕೇವಲ ಒಂದೂವರೆ ತಿಂಗಳಲ್ಲಿ ಎತ್ತಂಗಡಿ ಮಾಡಲಾಗಿದೆ. ಮೈಸೂರಿನಲ್ಲಿದ್ದ ಸಿದ್ಧಶೆಟ್ಟಿಯನ್ನು ಮೊದಲು ಸಾಗರಕ್ಕೆ ವರ್ಗಾಯಿಸಿ ಐದು ಲಕ್ಷ ಕಿತ್ತು ಮತ್ತೆ ಅದೇ ಮೈಸೂರಿಗೆ ಹಾಕಿದ್ದಾರೆ. ಮಂತ್ರಿಯಿಂದ ಇಷ್ಟೆಲ್ಲವನ್ನೂ ಮಾಡಿಸಿದ ವಿಶೇಷಾಧಿಕಾರಿ ಎಸ್. ಶ್ರೀನಿವಾಸ್ ಸ್ವತಃ ತನ್ನನ್ನೇ ಹೊಸಪೇಟೆಯಿಂದ ಬಿಜಾಪುರದ ಸಮೃದ್ಧ ಝುಳಕಿಗೆ ಹಾಕಿಸಿಕೊಂಡು ಮತ್ತೆ ತನ್ನ ಹುದ್ದೆಯನ್ನು ಇನ್ನಾರಿಗೋ ಮೂವತ್ತು ಲಕ್ಷಕ್ಕೆ ಮಾರಿಕೊಂಡ. ಸದ್ಯ ಆತ ಮಂತ್ರಿಗೆ ವಿಶೇಷಾಧಿ ಕಾರಿಯೂ ಹೌದು, ಜೊತೆಗೆ ಹೊಸಪೇಟೆಯ ಚೆಕ್‌ಪೋಸ್ಟಿನಲ್ಲಿ ಇನ್ಸ್‌ಪೆಕ್ಟರ್ ಕೂಡ. ಏಕಕಾಲಕ್ಕೆ ಎರಡೆರಡು ಹುದ್ದೆ!

ಈತನ ಗುರು ವೆಂಕಟೇಶ್ ಮೆಳ್ಳಿಗೇರಿ ಸದ್ಯ ಕೊಪ್ಪಳದ ಚೆಕ್‌ಪೋಸ್ಟ್ ಕಾಯುತ್ತಿದ್ದಾನೆ. ಸಂಡೂರಿನ ಅಷ್ಟೂ ಮೈನ್ಸ್ ಸ್ಮಗ್ಲಿಂಗ್ ದಂಧೆಯನ್ನು ನಿಭಾಯಿಸುತ್ತಾ ಅಲ್ಲಿಂದ ಮ್ಯಾಂಗನೀಸ್ ಕದ್ದು ಸಾಗಿಸುವ ಸಾವಿರಾರು ಲಾರಿಗಳಿಂದ ತಲಾ ಸಾವಿರ ರೂಪಾಯಿಯಂತೆ ಪೀಕುತ್ತಾ ಇಡೀ ಅದಿರು ಕಳ್ಳ ಸಾಗಾಣಿಕೆ ದಂಧೆಯ ಸೂತ್ರಧಾರನಾಗಿರುವ ಮೆಳ್ಳಿಗೇರಿಯ ಕತೆಯೇ ಮತ್ತೊಂದು ಕರ್ಮಕಾಂಡವಾಗುತ್ತದೆ. ತಿಂಗಳೊಂದಕ್ಕೆ ಈ ರೀತಿ ಮ್ಯಾಂಗನೀಸ್ ಓವರ್‌ಲೋಡ್ ಲಾರಿಗಳಿಂದಲೇ ಇಪ್ಪತ್ತು ಕೋಟಿ ರೂಪಾಯಿಗಳಷ್ಟು ಹಡಬೆ ದುಡ್ಡು ಸಂಗ್ರಹವಾಗುತ್ತದೆ ಎಂದರೆ ಟ್ರಾನ್ಸ್‌ಫರ್ ದಂಧೆಯ ಹೊರತಾಗಿ ಸಾರಿಗೆ ಮಂತ್ರಿಗೆ ಇನ್ನೆಂಥಾ ಆದಾಯವಿರಬೇಡ?

ಲೋಕಾಯುಕ್ತರು ಇನ್ನೂ ಸುಮ್ಮನೇಕಿದ್ದಾರೆ?

ಬಿಜೆಪಿ ಆತ್ಮಹತ್ಯೆ?

(10ನೇ ಪುಟದಿಂದ)

ಸೇರಿಕೊಂಡುಬಿಟ್ಟದ್ದಾನೆ. ಆತ್ತ ಶನಿವಾರ ಸಾಯಂಕಾಲದವರೆಗೂ ರಾಹುಲ್ ದೇಹದಲ್ಲಿ ಡ್ರಗ್ಸ್‌ನ ಅಂಶಗಳಿರಲಿಲ್ಲವೆಂದು ಹೇಳುತ್ತಿದ್ದ ಅಪೊಲೋ ಆಸ್ಪತ್ರೆಯ ತಜ್ಞರು ಈಗ ಪ್ಲೇಟು ಬದಲಿಸಿದ್ದಾರೆ. ತಮ್ಮ ಹತ್ತಿರ ಎಲ್ಲಾ ಡ್ರಗ್ಸ್‌ಗಳನ್ನು ಪತ್ತೆ ಹಚ್ಚುವಷ್ಟು ಪರಿಕರಗಳಿರಲಿಲ್ಲ, ರಾಹುಲ್ ಡ್ರಗ್ಸ್ ತಗೊಂಡರೂ ತಗೊಂಡಿರಬಹುದೆಂದು ರಾಗ ಬದಲಿಸಿದ್ದಾರೆ.

ಈ ಮಧ್ಯೆ ದೆಹಲಿ ಪೋಲೀಸರು ರಾಹುಲ್ ಮನೆಯಿಂದ ರಾಶಿ ರಾಶಿ ಹೆರಾಯಿನ್ ಪಾಕೇಟ್‌ಗಳನ್ನು ಹುಡುಕಿ ಹೊರ ತೆಗೆದಿದ್ದಾರೆ. ದೆಹಲಿಯಲ್ಲಿ ಹೆರಾಯಿನ್ ಸರಬರಾಜುದಾರರ ಗ್ಯಾಂಗೊಂದನ್ನು ಸೆರೆಹಿಡಿಯಲಾಗಿದೆ.

ಬಿಜೆಪಿಗೀಗ ನಿಜಕ್ಕೂ ಧರ್ಮಸಂಕಟ. ಅವರು ಮುದ್ದು ಮಾಡಿ ಪ್ರಮೋಟ್ ಮಾಡಲು ಹೊರಟಿದ್ದ ರಾಹುಲ್ ಹಾಗೂ ಬಿಬೇಕ್ ಡ್ರಗ್ಸ್ ಅಡಿಕ್ಟ್‌ಗಳೆಂಬುದು ಸಾಬೀತಾಗುತ್ತಿದ್ದಂತೆ ಅವರ ಬಾಯಿ ಬಂದಾಗಿ ಹೋಗಿದೆ. ಈ ಗದ್ದಲದಲ್ಲಿ ಯಾರೂ ಗಮನಿಸಿರದ ಇನ್ನೊಂದು ವಿಚಾರವಿದೆ. ಡ್ರಗ್ಸ್ ತೆಗೆದುಕೊಂಡು ಸತ್ತಿರುವ ಪ್ರಮೋದ್ ಮಹಾಜನ್‌ನ ಗೆಣೆಕಾರ ಬಿಬೇಕ್ ಮೊಯಿತ್ರಾ ಒಬ್ಬ ಸಲಿಂಗಕಾಮಿಯಾಗಿದ್ದ. ಆರ್‌ಎಸ್‌ಎಸ್‌ನೊಳಗೆ ಇದಕ್ಕೆ ನಿಷೇದವಿಲ್ಲವಾದರೂ ಕಚ್ಚೆಹರಕುತನ, ಭ್ರಷ್ಟಾಚಾರ, ಡ್ರಗ್ಸ್, ಸೆಕ್ಸುಗಳ ಬಗ್ಗೆ ಈ ಹಿಂದೂವೀರರು ಸದಾ ಚೀರಿಕೊಳ್ಳುತ್ತಿರುತ್ತಾರಷ್ಟೇ.

ಆದರೆ ಬಿಜೆಪಿಯೊಳಗೇ ಈಗ ಇಂತಾ ಗಲೀಜು ಘಟನೆಗಳು ಮೆಗಾ ಸೀರಿಯಲ್‌ನಂತೆ ನಡೆಯುತ್ತಲೇ ಇವೆ.

ಅವರ ಚಾಂಪಿಯನ್ ನಾಯಕ ಆಜನ್ಮಬ್ರಹ್ಮಚಾರಿ ವಾಜಪೇಯಿ ಪರರ ಹೆಂಡತಿಯೊಂದಿಗೆ ಜೀವನ ಸಾಗಿಸುತ್ತಿದ್ದಾರಲ್ಲದೇ, ಆಕೆಯ ಅಳಿಯನನ್ನು 'ದತ್ತು ಅಳಿಯ' ಎಂದು ಕರೆದುಕೊಳ್ಳುತ್ತಾರೆ. ಅಲ್ಲ ದತ್ತು ಪುತ್ರಿ, ದತ್ತು ಪುತ್ರ ಅಂತ ಕೇಳಿದ್ದೇವೆ, ಆದರೆ 'ದತ್ತು ಅಳಿಯ' ಎಂಬ ಪದ ಪ್ರಯೋಗಕ್ಕೆ ಬಂದಿದ್ದೇ ವಾಜಪೇಯಿಯವರ ಈ ಬ್ರಹ್ಮಚಾರಿತ್ವದಿಂದ!

ಇನ್ನು ಅವರ ಎರಡನೆ ನಾಯಕ ಅಡ್ವಾಣಿ ಎಂತಹ ಸುಳ್ಳ, ಮೋಸಗಾರ ಎಂದೆಲ್ಲಾ ಸ್ವತಃ ಅವರ ಸೊಸೆಯೇ ನ್ಯಾಯಾಲಯಕ್ಕೆ ಬರೆದ ಸುದೀರ್ಘವಾದ ಪತ್ರದಲ್ಲಿ ತಿಳಿಸಿದ್ದಳು. ಅಷ್ಟೇ ಅಲ್ಲ ಅಡ್ವಾಣಿ ತನ್ನೊಂದಿಗೆ 'ಅಸಭ್ಯ'ವಾಗಿ ವರ್ತಿಸಿದ್ದ ಎಂತಲೂ ಆರೋಪಿಸಿದ್ದಳು.

ಅಷ್ಟು ದೂರ ಹೋಗುವುದು ಯಾತಕ್ಕೆ? ಇಲ್ಲೇ ನಮ್ಮ ಕರ್ನಾಟಕದಲ್ಲಿ ಉಪಮುಖ್ಯಮಂತ್ರಿ ಯಡಿಯೂರಪ್ಪ ಎಂಬ ವಿಧುರ ಶೋಭಾ ಕರಂದ್ಲಾಜೆ ಎಂಬ ಅವಿವಾಹಿತ ಮಹಿಳೆಯೊಂದಿಗೆ ನಡೆಸುತ್ತಿರುವ 'ಪರಿಶುದ್ಧ' ರಾಜಕೀಯ ಸಂಬಂಧದ ಬಗ್ಗೆ ಬಿಜೆಪಿಗಳೇ ಗಲಾಟೆ ಮಾಡುತ್ತಿದ್ದಾರೆ. ಹಿಂದೊಮ್ಮೆ ಇವರಿಬ್ಬರೂ ವಿಧಾನಸೌಧದಲ್ಲೇ ನಡೆಸುತ್ತಿದ್ದ 'ಮಾನವ ಸಂಬಂಧ ಚರ್ಚೆ'ಗಳ ಸಿಡಿ ಇದೆಯೆಂದೂ ಗುಲ್ಲೆಬ್ಬಿಸಿದ್ದರು. ಈಗ 'ಭ್ರಹ್ಮನ' ಅವತಾರ ಪುರುಷನಂತೆ ಯಡ್ಡಿ ತನ್ನ ಮಗಳಂತಿರುವ 'ಸರಸ್ವತಿ' ಶೋಭಾ ಕರಂದ್ಲಾಜೆಗೆ ಮಂತ್ರಿಗಿರಿ ಕೊಡಿಸಲು ಹೊರಟಿರುವುದು ಮತ್ತೊಂದು ರಾದ್ಧಾಂತವಾಗಿದೆ. ಈ ಕಾರಣಕ್ಕೆ ರಾಜ್ಯದಲ್ಲಿ ಬಿಜೆಪಿ ಎರಡು ಹೋಳಾದರೂ ಅಚ್ಚರಿ ಇಲ್ಲ. ಇದೆಲ್ಲದರ ಮಧ್ಯೆ ಆರ್‌ಎಸ್ ಎಸ್ ಲೀಡರ್ ಸುಶೀಲ್ ಜೋಶಿಯ ಸೆಕ್ಸ್ ಸಿಡಿ, ಉಮಾಭಾರತಿ-ಗೋವಿಂದಾಚಾರ್ಯನ 'ಜಾಮೂನಿನಷ್ಟು ಸಿಹಿ'ಯಾಗಿದ್ದ ಪ್ರೇಮ ಪ್ರಸಂಗ, ಮಧ್ಯಪ್ರದೇಶದ ಮಾಜಿ ಮುಖ್ಯಮಂತ್ರಿ ಗೌರ್ ಎಂಬ ಮುದಿಯ ಇಬ್ಬರು ವಿವಾಹಿತರೊಂದಿಗೆ ಅಕ್ರಮ ಸಂಬಂಧ ಹೊಂದಿದ್ದ ಎಂಬ ಆರೋಪ...... ಪ್ರಮೋದ್ ಮಹಾಜನ್‌ನ ಬಗಲಲ್ಲೇ ಸಲಿಂಗಕಾಮಿ, ಸಹಾಯಕ ಬಿಬೇಕ್, ಸ್ವತಃ ಡ್ರಗ್ ಅಡಿಕ್ಟ್ ಮಗ ರಾಹುಲ್.... ಅಯ್ಯೋ ಒಂದೇ ಎರಡೇ ಈ ಚೆಡ್ಡಿಗಳು ಮಾಡಿಕೊಂಡಿರುವ ಆತ್ಮಹತ್ಯೆ ಯತ್ನ?!

ಇದೆಲ್ಲವನ್ನು ನೋಡಿ ಸಂಘಪರಿವಾರದವರ ನಾಲಿಗೆ "ಇದು ISI ಪಿತೂರಿ" ಎನ್ನಲು ಚಡಪಡಿಸುತ್ತಿರಬಹುದು. ಆದರೆ ಇಂತಹ ಸೂಯಿಸೈಡ್ ಬಾಂಬ್‌ಗಳು ಚೆಡ್ಡಿಗಳ ನಡುವೆಯೇ ಇರುವಾಗ ಅವರ ಪುಂಗಿ ಸಧ್ಯಕ್ಕೆ ಬಂದ್ ಆಗಿದೆ!

ಯಾರು ಇಂದಿನ ಮಾತುಗಳನ್ನು ಆಡುತ್ತಾನೋ ಅವನೇ ನಿಜವಾದ ಕವಿ -ಜಾವೇದ್ ಅಖ್ತರ್

ಕುಮಾರಸ್ವಾಮಿ ಚಾನೆಲ್‌ಗಾಗಿ

ಹೊಡಿ ಮಗ ಕೇಬಲ್ ವೈರ್ ಕಡಿ ಮಗ



ಸಿಟಿ ಕೇಬಲ್ ಧಣಿ ಕೈಲಾಸಂ ಎಂಬಾತನಿಗೂ ಪದ್ಮನಾಭನಗರದ ಹಳೇ ಪಂಟರ್ ಕಬಡ್ಡಿ ಬಾಬುವಿಗೂ ಮಧ್ಯೆ ರಾಜಿ ಮಾಡಿಸಿ ತ್ಯಾಪೆ ಹಾಕಿದ ಜಂಟಿ ಪೋಲೀಸ್ ಕಮಿಷನರ್ ನಾರಾಯಣಗೌಡರಿಗೆ ಚೆನ್ನಾಗಿ ಗೊತ್ತಿತ್ತು. ಯುದ್ಧ ಇಷ್ಟಕ್ಕೇ ಮುಗಿಯುವುದಿಲ್ಲ. ತಮ್ಮ ಫ್ಯಾಮಿಲಿ ಟೀವಿ ಚಾನೆಲ್ 'ಕನ್ನಡ ಕಸ್ತೂರಿ'ಯ ಪ್ರಸವವಾಗುವ ತನಕ ಉಳಿಕೆ ಟೀವಿ ನೆಟ್‌ವರ್ಕ್‌ಗಳ್ಯಾವುದಕ್ಕೂ ಮಣ್ಣಿನ ಮಕ್ಕಳ ಕಾಟ ತಪ್ಪಿದ್ದಲ್ಲ!

ಬಹುಶಃ ಬೆಂಗಳೂರಿನ ಕೇಬಲ್ ವಾರ್ ತನ್ನ ನಿರ್ಣಾಯಕ ಘಟ್ಟವನ್ನು ಸಮೀಪಿಸುತ್ತಿರಬೇಕು. ಸಿಟಿ ಕೇಬಲ್ ಮಾಲೀಕ ಕೈಲಾಸಂ ನೇರವಾಗಿ ಅಶೋಕ್‌ನಗರ ಪೋಲೀಸ್ ಠಾಣೆಗೆ ಬಂದು 'ಇದು ರೊಂಬ ಸೀರಿಯಸ್ ಕೇಸು. ನಂಬ ಕೇಬಲ್‌ಗಳನ್ನೆಲ್ಲ ಚೀಫ್ ಮಿನಿಸ್ಟರ್ ಕುಮಾರಚಾಮಿ ಕಡೆಯ ರೌಡಿಗಳು ಕಟ್ ಮಾಡಿದ್ದಾರೆ. You must file an FIR against ಸೀಯೆಮ್ ಕುಮಾರ್‌ಚಾಮೀ...!' ಎಂದು ಕೂಗಾಡುತ್ತಿದ್ದಾಗ, ಕಬಡ್ಡಿ ಬಾಬು ಗ್ಯಾಂಗ್ ನೇರವಾಗಿ ಎಂ.ಜಿ. ರಸ್ತೆಯ ಸಿಟಿ ಕೇಬಲ್ ಅಡ್ಡೆಯ ಮೇಲೇ ದಾಳಿ ನಡೆಸಿತ್ತು. ಶೇಷಾದ್ರಿಪುರ, ಲಿಂಕ್ ರಸ್ತೆ, ಮತ್ತಿಕೆರೆ, ರಾಜಾಜಿನಗರ, ಮಹಾಲಕ್ಷ್ಮಿ ಲೇಔಟ್, ಇಂದಿರಾನಗರ, ಆಸ್ಟಿನ್ ಟೌನ್; ಹೀಗೆ




'ಈ ಸಂಜೆ' ಆಫೀಸಿನ ಮೇಲೆ 'ಅಮೋಘ್' ಡಿಶ್‌ಗಳು

ಬೆಂಗಳೂರಿನ ಅಷ್ಟ ದಿಕ್ಕುಗಳಲ್ಲಿನ ಸಿಟಿ ಕೇಬಲ್ ವೈರುಗಳನ್ನು ಏಕ ಕಾಲಕ್ಕೆ ಕಬಡ್ಡಿ ಬಾಬು ಗ್ಯಾಂಗ್ ಕತ್ತರಿಸಿ ಎಸೆದಿತ್ತು. ಇಡೀ ಬೆಂಗಳೂರಿನ ಸಿಟಿ ಕೇಬಲ್ ಲಿಂಕ್ ಕಡಿದು ಹೋಗಿತ್ತು. 'ಝೀ' ಟೀವಿಯ ಅಸಂಖ್ಯಾತ ಚಾನಲ್ಲುಗಳ ಪೈಕಿ ಯಾವೊಂದೂ ಬೆಂಗಳೂರಿನ ಟೀವಿಗಳ ಪಾಲಾಗಿರಲಿಲ್ಲ.

ಆ ಮಟ್ಟಿಗೆ ಸಿಟಿ ಕೇಬಲ್‌ಗೂ ಅಮೋಘ್ ನೆಟ್‌ವರ್ಕ್‌ಗೂ ಯುದ್ಧ ನಡೆದಿತ್ತು. ಇಲ್ಲಿ ಅಮೋಘ್ ನೆಟ್‌ವರ್ಕ್ ಎಂದರೆ ಯಾವುದೋ ಆರ್ಡಿನರಿ ಕೇಬಲ್ ನೆಟ್‌ವರ್ಕ್ ಆಗಿರಲಿಲ್ಲ. ಅದರ ಧಣಿ ಈ ರಾಜ್ಯದ ಮುಖ್ಯಮಂತ್ರಿ ಕುಮಾರಸ್ವಾಮಿ!

ಹಕೀಕತ್ತೇನೆಂದರೆ ಸಿಟಿ ಕೇಬಲ್‌ಗೆ ಅಮೋಘ್ ನೆಟ್‌ವರ್ಕ್ ಕೊಡಬೇಕಿದ್ದ ಬಾಕಿ ಕೇವಲ ಹದಿನಾಲ್ಕು ಲಕ್ಷ. ಈ ರಾಜ್ಯವನ್ನಾಳುವ ಕುಮಾರಸ್ವಾಮಿಗೆ ತನ್ನದೇ ಕಂಪನಿಯಿಂದ ಬಾಕಿಯಿದ್ದ ಹದಿನಾಲ್ಕು ಲಕ್ಷವನ್ನು ಚಿಟಿಕೆ ಹೊಡೆದಷ್ಟೇ ಸಲೀಸಾಗಿ ಬೀಸಾಕ ಬಹುದಿತ್ತು. ಈ ರೀತಿ ತನ್ನ ಬಂಟನನ್ನು ಬಿಟ್ಟು ಆತನ ಶಿಷ್ಯರ ಮೂಲಕ ರಾತ್ರೋ ರಾತ್ರಿ ಸಿಟಿ ಕೇಬಲ್‌ನ ವೈರುಗಳನ್ನು ಕತ್ತರಿಸಬೇಕಿರಲಿಲ್ಲ!



ಹಾಗೊಮ್ಮೆ ಕುಮಾರಸ್ವಾಮಿಯ ಬಂಟ ಕಬಡ್ಡಿ ಬ್ಬಾಬು ಮುಖ್ಯಮಂತ್ರಿಗೆ ಗೊತ್ತಿಲ್ಲದಂತೆ ಈ ಕೃತ್ಯವೆಸಗಿದ್ದರೆ ಅದು ಧಣಿಯ ತಲೆಗೇ ಬರುತ್ತದೆ ಎಂದು ತಿಳಿಯಲಾರದಷ್ಟು ಮೂರ್ಖನಲ್ಲ. ಇದು ಉದ್ದೇಶ ಪೂರ್ವಕ ದಾಳಿ ಹೇಗೋ ಹಾಗೇ ಝೀ ಟೀವಿಯ ವಿರುದ್ಧ ಅಮೋಘ್ ನೆಟ್‌ವರ್ಕ್ ಕಳೆದೆರಡು ವರ್ಷಗಳಿಂದ ನಡೆಸಿಕೊಂಡು ಬಂದಿದ್ದ ಹೋರಾಟದ ಮತ್ತೊಂದು ಭಾಗವಷ್ಟೇ. ಇನ್ನೊಂದು ವರ್ಷದೊಳಗೆ ಕುಮಾರಸ್ವಾಮಿ ಒಡೆತನದ ಕನ್ನಡ ಕಸ್ತೂರಿ ಚಾನೆಲ್ ತಲೆ ಎತ್ತಲೇಬೇಕು. ಅದು ಹುಟ್ಟಬೇಕೆಂದರೆ ಇಂಥ ಸಣ್ಣಪುಟ್ಟ ಮೀನುಗಳನ್ನು ನುಂಗಲೇಬೇಕು. ಅನಿವಾರ್ಯ ಚಾನೆಲ್ ಯುದ್ಧವೊಂದನ್ನು ಲೆಕ್ಕ ಹಾಕಿಯೇ ದೇವೇಗೌಡರ ಫ್ಯಾಮಿಲಿ ಟೀವಿ ದಂಧೆಗೆ ಕೈಯಿಟ್ಟಿದೆ.

ಇಲ್ಲಿಗೆ ಎರಡು ವರ್ಷದ ಹಿಂದೆ ಹುಟ್ಟಿಕೊಂಡ ಅಮೋಘ್ ನೆಟ್‌ವರ್ಕ್‌ಗೆ ಕಬಡ್ಡಿ ಬಾಬು ಕೇವಲ ಇಪ್ಪತ್ತು ಪರ್ಸೆಂಟಿನ ಪಾಲುದಾರನಷ್ಟೇ. ಮಿಕ್ಕ ಅರವತ್ತು ಪರ್ಸೆಂಟಿಗೆ ಕುಮಾರಸ್ವಾಮಿಯವರ ಪತ್ನಿ ಅನಿತಾ ಒಡತಿ. ಹಾಗೇ ಉಳಿಕೆ ಇಪ್ಪತ್ತು ಪರ್ಸೆಂಟ್‌ಅನ್ನು ಇಲ್ಲಿಗೆ ಒಂದೂವರೆ ವರ್ಷದ ಹಿಂದೆ ಇನ್‌ಕೇಬಲ್ ನೆಟ್ ವರ್ಕ್‌ನ ಪ್ರತಾಪ್ ವಾದ್ವಾ ಎಂಬಾತ 90 ಲಕ್ಷಕ್ಕೆ ಖರೀದಿಸಿದ್ದಾನೆ. ಆಗಿನ್ನೂ ಜೆಡಿ(ಎಸ್) ಅಧಿಕಾರಕ್ಕೆ ಬಂದಿರಲಿಲ್ಲವಾದ್ದರಿಂದ ಸ್ವಂತ ಟೀವಿ ಚಾನಲ್ ಮಾಡುವ ಉದ್ದೇಶ ಗೌಡರ ಫ್ಯಾಮಿಲಿಗಿರಲಿಲ್ಲ. ಆ ಕಾರಣಕ್ಕೇ ಪ್ರತಾಪ್ ವಾಧ್ವಾನಿಗೆ ಇಪ್ಪತ್ತು ಪರ್ಸೆಂಟ್ ಷೇರುಗಳನ್ನು ಮಾರಿದ್ದರು.

ಯಾವತ್ತು ಜೆಡಿ(ಎಸ್) ಅಧಿಕಾರಕ್ಕೆ ಬಂತೋ ಸ್ವಂತ ಟೀವಿ ಚಾನಲ್ ಮಾಡುವ ಕುಮಾರಸ್ವಾಮಿಯ ಕನಸಿಗೆ ಪುಕ್ಕ ಮೊಳೆತಿದೆ. ಹೇಗಾದರೂ ಮಾಡಿ ಪ್ರತಾಪ್ ವಾಧ್ವಾನನ್ನು ಒದ್ದೋಡಿಸಿಬಿಟ್ಟರೆ ಇಡೀ ನೆಟ್‌ವರ್ಕ್ ತಮ್ಮ ವಶವಾಗುತ್ತದೆ ಎಂಬುದು ಅನಿತಕ್ಕನ ಲೆಕ್ಕಾಚಾರ. ಹಾಗಂಥ ಅನಿತಾ ನೇರವಾಗಿ ಅಮೋಘ್ ನೆಟ್‌ವರ್ಕ್ ಸಂಭಾಳಿಸುವುದಿಲ್ಲ. ಅದನ್ನು ತನ್ನ ತಮ್ಮ ಕೃಷ್ಣನ ಮೂಲಕ ನಿಯಂತ್ರಿಸುತ್ತಾರೆ. ಮಿಕ್ಕೆಲ್ಲಾ ವ್ಯವಹಾರವನ್ನೂ ಕಬಡ್ಡಿ ಬಾಬುವೇ ನಿಭಾಯಿಸುತ್ತಾನೆ.

ಸದ್ಯ ಬೆಂಗಳೂರಿನ ಕೇಬಲ್ ಸಾಮ್ರಾಜ್ಯದ ಒಡೆತನಕ್ಕಾಗಿ ಐವರು ದೈತ್ಯರ ಮಧ್ಯೆ ಯುದ್ಧ ಶುರುವಾಗಿದೆ. ಬೆಂಗಳೂರಿನ ಒಟ್ಟೂ ಕೇಬಲ್ ಅಪರೇಟರುಗಳ ಸಂಖ್ಯೆ ಸಾವಿರದಿನ್ನೂರು. ಈ ಪೈಕಿ ಅತೀ ಹೆಚ್ಚು ಅಂದರೆ ಮುನ್ನೂರೈವತ್ತು ಮಂದಿ ಕೇಬಲ್ ಅಪರೇಟರುಗಳು ರಹೇಜಾ ಮತ್ತು ಸ್ಟಾರ್ ಟೀವಿ ಒಡೆತನದ 'ಹಾತ್‌ವೇ' ನೆಟ್ ವರ್ಕ್‌ನ ಅಧೀನದಲ್ಲಿದ್ದಾರೆ. ಅದನ್ನು ಬಿಟ್ಟರೆ ಮುನ್ನೂರಿಪ್ಪತ್ತು ಮಂದಿ ಕೇಬಲ್ ಅಪರೇಟರುಗಳನ್ನು ಹಿಂದೂಜಾನ 'ಇನ್‌ಕೇಬಲ್ ನೆಟ್‌ವರ್ಕ್' ಹಿಡಿದಿಟ್ಟುಕೊಂಡಿದೆ. ಮೂರನೇ ಸ್ಥಾನಕ್ಕಿರುವುದೇ ಸಿಟಿ ಕೇಬಲ್. ಇದು ಝೀ ಟೀವಿ ಮಾಲೀಕ ಸುಭಾಶ್‌ಚಂದ್ರನ ಕಂಪನಿ. ಬೆಂಗಳೂರಿನಲ್ಲಿ ಅದಕ್ಕೆ ನಿರ್ದೇಶಕನಾಗಿರುವವನು ಚೆನ್ನೈ ಮೂಲದ ಕೈಲಾಸಂ. ಈತ ಮುನ್ನೂರು ಮಂದಿ ಲೋಕಲ್ ಕೇಬಲ್ ಅಪರೇಟರುಗಳನ್ನು ಸಂಘಟಿಸಿದ್ದಾರೆ.


ಮಿಕ್ಕಂತೆ ಏಟ್ರಿಯಾ ಧಣಿ ಚಿನ್ನಸ್ವಾಮಿ ರಾಜುವಿನ ಏಟ್ರಿಯಾ ಕೇಬಲ್ ನೆಟ್‌ವರ್ಕ್, ರಾಜಾಜಿನಗರದ ಬಾಬು ಮತ್ತು ಶಶಿ ಎಂಬಿಬ್ಬರು ಅಪರೇಟರುಗಳು ಸೇರಿ ಹುಟ್ಟು ಹಾಕಿದ ಐಸ್‌ಟೀವಿ, ಕೋಣನಕುಂಟೆಯ ಅನುಪ್ ಟೀವಿಯಂಥ ಸಣ್ಣಪುಟ್ಟ ಕಂಪನಿಗಳಿವೆ. ಇವ್ಯಾವುದಕ್ಕೂ ಐವತ್ತಕ್ಕೂ ಹೆಚ್ಚಿನ ಸಂಖ್ಯೆಯ ಕೇಬಲ್ ಅಪರೇಟರುಗಳ ಬೆಂಬಲವಿಲ್ಲ.

ಸ್ಟಾರ್ ಟೀವಿ, ಝೀ ಟೀವಿ, ಡಿಸ್ಕವರಿ, ಎಂ ಟೀವಿ, ಫ್ಯಾಷನ್ ಟೀವಿಯಂಥ ಪೇ ಚಾನೆಲ್ಲುಗಳ ಲೋಕಲ್ ಏಜಂಟರಂತಿರುವ ಇವರದು ಕೋಟ್ಯಂತರ ರೂಪಾಯಿಗಳ ವ್ಯವಹಾರ. ಸಣ್ಣಪುಟ್ಟ ಕೇಬಲ್ ಅಪರೇಟರುಗಳಿಗೆ ಪೇ ಚಾನಲ್ಲುಗಳ ಏಜನ್ಸಿ ಹಿಡಿಯುವಷ್ಟು ತಾಕತ್ತಿರುವುದಿಲ್ಲವಾದ್ದರಿಂದ ಇಂಥವರಿಂದ ಬಡ್ಡಿದರಕ್ಕೆ ಕನೆಕ್ಷನ್ ಪಡೆಯುತ್ತಾರೆ. ತಿಂಗಳಿಗೆ ಇಂತಿಷ್ಟೆಂದು ಚಂದಾ ಕಟ್ಟುತ್ತಾರೆ.

ಹಾಗೇ ಪೇ ಚಾನಲ್ಲುಗಳ ಏಜನ್ಸಿ ಹಿಡಿದವನಿಗೆ ಇಂಥ ನೂರಾರು ಅಪರೇಟರುಗಳ ಬೆಂಬಲವಿದ್ದರೇನೇ ಬದುಕುಳಿಯಲು ಸಾಧ್ಯ. ಒಬ್ಬರ ಮೇಲೊಬ್ಬರು ಪೈಪೋಟಿಗಿಳಿಯದೇ ಸೌಹಾರ್ದತೆಯಿಂದಲೇ ಇರಬೇಕೆಂದು ಇವರೆಲ್ಲರ ಮಧ್ಯೆ ಇಲ್ಲಿಗೆ ಎರಡು ವರ್ಷದ ಹಿಂದೆ ಒಪ್ಪಂದವಾದಾಗ ಆಗಿನ್ನೂ ಅಮೋಘ್ ಟೀವಿ ಹುಟ್ಟಿರಲಿಲ್ಲ. ನಷ್ಟ ಭರಿಸಲಾಗದೇ ಏಟ್ರಿಯಾ, ಐಸ್‌ಟೀವಿ, ವಿ.ಎಸ್.ಎನ್. ಮುಂತಾದವುಗಳೆಲ್ಲ ಒಂದೊಂದಾಗಿ ಮುಚ್ಚುತ್ತಿದ್ದಂತೆ ಕುಮಾರಸ್ವಾಮಿಯ ಅಮೋಘ್ ಟೀವಿ ಮಾತ್ರ ನಿಧಾನವಾಗಿ ಚಿಗುರಲಾರಂಭಿಸಿತ್ತು.

ಪ್ರಾರಂಭದಲ್ಲಿ ಯಲಹಂಕದ ಸಹಕಾರ ನಗರದಲ್ಲಿದ್ದ ಎಂ.ಎಸ್. ಕೇಬಲ್ ನೆಟ್‌ವರ್ಕ್ ಎಂಬ ಪುಟ್ಟ ಸಂಸ್ಥೆಯನ್ನು ಒಂದೂವರೆ ಕೋಟಿಗೆ ಖರೀದಿಸಿದ್ದು ಕುಮಾರಸ್ವಾಮಿ. ಅದಕ್ಕೆ ಐಡಿಯಾ ಕೊಟ್ಟವನು ಕಬಡ್ಡಿ ಬಾಬು. ಆ ಹೊತ್ತಿಗೆ ಪದ್ಮನಾಭನಗರದ ಉತ್ತರಹಳ್ಳಿ ರಸ್ತೆಯಲ್ಲಿ ದರ್ಶನ್ ಕೇಬಲ್ ನೆಟ್‌ವರ್ಕ್ ಇಟ್ಟುಕೊಂಡಿದ್ದ ಕಬಡ್ಡಿ ಬಾಬು ಕ್ರಮೇಣ ಅದನ್ನು ಇಡೀ ಕನಕಪುರ ರಸ್ತೆಯ ತನಕ ವಿಸ್ತರಿಸಿದ್ದ. ಈ ಎರಡೂ ನೆಟ್‌ವರ್ಕ್ ಸೇರಿಯೇ ಹುಟ್ಟಿಕೊಂಡಿದ್ದು ಅಮೋಘ್ ನೆಟ್‌ವರ್ಕ್. ರಾಜಾಜಿನಗರದ ರಾಜ್‌ಕುಮಾರ್ ರಸ್ತೆಯ ಟಿ. ವೆಂಕಟೇಶ್ ಒಡೆತನದ 'ಈ ಸಂಜೆ' ಕಟ್ಟಡದ ಮೇಲ್ಮಹಡಿಯನ್ನೇ ಅದರ ಕಛೇರಿಯನ್ನಾಗಿ ಮಾಡಿ, ಅಲ್ಲಿ ರಕ್ಕಸಗಾತ್ರದ ಡಿಷ್ ಆಂಟೇನಾಗಳನ್ನು ಜೋಡಿಸಲಾಯ್ತು.

ಕುಮಾರಸ್ವಾಮಿ ಮುಖ್ಯಮಂತ್ರಿಯಾದದ್ದೇ ತಡ ಕನ್ನಡ ಕಸ್ತೂರಿ ಚಾನೆಲಿನ ಜೊತೆಗೆ ಇಡೀ ಅಮೋಘ್ ನೆಟ್‌ವರ್ಕ್ ಅನ್ನೇ ವಿಸ್ತರಿಸುವ ಯೋಜನೆ ರೂಪಿಸಲಾಯಿತು. ... ನೆಟ್‌ವರ್ಕ್ ಬೆಳೆಯಬೇಕೆಂದರೆ ಅದಕ್ಕೊಂದು ಸ್ವತಂತ್ರ ಚಾನಲ್ ಬೇಕೇಬೇಕು. ಜೊತೆಗೆ ಕನ್ನಡ ಕಸ್ತೂರಿ ಚಾನೆಲ್ ಹುಟ್ಟಬೇಕೆಂದರೆ ಅದಕ್ಕೆ ಪೂರಕವಾಗಿ ಅಮೋಘ್ [illegible]



ಇನ್ನೂರೈವತ್ತು ಕೋಟಿಯ ವ್ಯವಹಾರ. ಆದರೆ ಬೆಂಗಳೂರಿನ ಬಹುಪಾಲು ಕೇಬಲ್ ದಂಧೆ ಈ ಹೊತ್ತಿಗಾಗಲೇ ಹಿಂದೂಜಾ, ರಹೇಜಾ, ಝೀ ಟೀವಿಯ ಸುಭಾಶ್ ಚಂದ್ರ ಗೋಯೆಲ್ ಥರದವರ ಹಿಡಿತಕ್ಕೊಳಪಟ್ಟಿದೆ. ದುಡ್ಡಿನಲ್ಲಿ ಎಲ್ಲರೂ ಬಲಾಢ್ಯರೇ. ಅಂಥವರಿಂದ ಲೋಕಲ್ ಕೇಬಲ್ ಆಪರೇಟರುಗಳನ್ನು ಸೆಳೆಯಬೇಕೆಂದರೆ ಅದಕ್ಕೆ ಅಂಡರ್‌ವರ್ಲ್ಡ್ ನೆರವು ಬೇಕೇಬೇಕು. ಅದಕ್ಕೆ ಕಬಡ್ಡಿ ಬಾಬುನನ್ನೇ ಮುಂದೆ ಬಿಡಬೇಕೆಂದು ಗೌಡರ ಫ್ಯಾಮಿಲಿ ಲೆಕ್ಕ ಹಾಕಿದೆ.


ಹಾಗೇ ವೀಳ್ಯ ಪಡೆದ ಕಬಡ್ಡಿ ಬಾಬು ಸಿಟಿ ಕೇಬಲ್ ಹಿಡಿತದಲ್ಲಿದ್ದ ಒಬ್ಬೊಬ್ಬರೇ ಅಪರೇಟರುಗಳನ್ನು ತನ್ನ ತೆಕ್ಕೆಗೆಳೆಯಲಾರಂಭಿಸಿದ್ದು ಜೆಡಿ(ಎಸ್) ಸರ್ಕಾರ ಬಂದ ನಂತರವೇ. ಅದರಲ್ಲೂ ಕುಮಾರಸ್ವಾಮಿ ಮುಖ್ಯಮಂತ್ರಿಯಾದ ಮೇಲಂತೂ ಐವತ್ತೋ ಅರವತ್ತೋ ಮಂದಿ ಕೇಬಲ್ ಅಪರೇಟರುಗಳಿದ್ದದ್ದು ನೂರಿಪ್ಪತ್ತಕ್ಕೇರಿತು. ಅಮೋಘ್ ನೆಟ್‌ವರ್ಕ್ ಈಗ ಇನ್‌ಕೇಬಲ್, ಹಾತ್‌ವೇ, ಸಿಟಿ ಕೇಬಲ್‌ಗಳ ನಂತರ ನಾಲ್ಕನೇ ಅತೀ ದೊಡ್ಡ ನೆಟ್‌ವರ್ಕ್ ಆಗಿ ಹೊರಹೊಮ್ಮಿತು.

ಯಲಹಂಕದಿಂದ ಗೌರಿಬಿದನೂರಿನ ತನಕ, ಬೆಂಗಳೂರಿನಿಂದ ಬಿಡದಿ, ಮಂಡ್ಯ, ಮೈಸೂರಿನ ತನಕ ಅಮೋಘ್ ನೆಟ್‌ವರ್ಕ್ ವಿಸ್ತರಿಸಿತು. ಹಾಗಂಥ ಸಿಟಿ ಕೇಬಲ್ ಸುಮ್ಮನಿರಲಿಲ್ಲ. ಝೀ ಟೀವಿಗೆ ನಾವೇ ಏಜೆಂಟರಾದರಿಂದ ಎಲ್ಲೆಲ್ಲಿ ನಮ್ಮವರನ್ನು ಕಿತ್ತುಕೊಂಡಿದ್ದೀರೋ ಅವರು ಬಳಸಿದ ಝೀ ನೆಟ್‌ವರ್ಕ್ ಬಾಬತ್ತನ್ನು ಕಟ್ಟಿಕೊಡಿ ಎಂದು ಹಠ ಹಿಡಿಯಿತು. ಹೇಗೂ ಇನ್‌ಕೇಬಲ್‌ನ ಇಪ್ಪತ್ತು ಪರ್ಸೆಂಟ್ ಅಮೋಘ್ ನೆಟ್‌ವರ್ಕ್‌ನಲ್ಲಿರುವುದರಿಂದ ಅವರ ಪ್ರತಿನಿಧಿ ಪ್ರತಾಪ್ ವಾಧ್ವಾನನ್ನು ಒದ್ದೋಡಿಸದೇ ಅಮೋಘ್‌ನ ವಿಸ್ತರಣೆಗೆ ಸಾಧ್ಯವಿರಲಿಲ್ಲ. ಅಮೋಘ್‌ನ ಲಾಭದಲ್ಲಿ ಅನ್ಯಾಯವಾಗಿ ಇಪ್ಪತ್ತು ಪರ್ಸೆಂಟ್ ಇನ್‌ಕೇಬಲ್‌ಗೆ ಹೋಗುತ್ತದೆ. ಹೇಗಾದರೂ ಮಾಡಿ ಪ್ರತಾಪ್‌ನನ್ನು ಓಡಿಸಬೇಕು ಎಂದು ಕಬಡ್ಡಿ ಬಾಬು ಲೆಕ್ಕ ಹಾಕಿದ್ದಾನೆ. ಅದು ಪರಿಹಾರವಾಗುವ ತನಕ ಸಿಟಿ ಕೇಬಲ್ ಬಾಕಿಯನ್ನು ಕಟ್ಟಕೂಡದೆಂದು ನಿರ್ಧರಿಸಿದ್ದಾನೆ. ಆದರೆ ಪ್ರತಾಪ್ ಚಾಲಾಕಿ. ಆತ ಇನ್‌ಕೇಬಲ್ ಪರವಾಗಿ ಇಡೀ ಅಮೋಘ್ ಅನ್ನೇ ನುಂಗುವ ಗುರಿ ಹೊತ್ತವನು. ಪಾಲುದಾರಿಕೆ ಪರಿಹಾರವಾಗುವ ತನಕ ಸಿಟಿ ಕೇಬಲ್ ಬಾಕಿಯನ್ನೂ ತೀರಿಸಕೂಡದೆಂದೇ ಲೆಕ್ಕ ಹಾಕಿದ ಅಮೋಘ್ ಧಣಿಗಳಿಗೆ ಆಘಾತ ಕಾದಿತ್ತು. ಕೋರ್ಟು ಮೇ ಇಪ್ಪತ್ತರ ಒಳಗೆ ಬಾಕಿ ಪಾವತಿಸುವಂತೆ ಆದೇಶಿಸಿತ್ತು. ಒಂದು ಕಂತಾಗಿ ... ಲಕ್ಷ ತೆತ್ತ ಅಮೋಘ್ ಇನ್ನೂ ಹದಿನಾಲ್ಕು ಲಕ್ಷ ಬಾಕಿ ಇಟ್ಟುಕೊಂಡಿತ್ತು. ಯಾವತ್ತು ಬಾಕಿ ಸಂದಾಯವಾಗಲಿಲ್ಲವೋ ಮೇ ಇಪ್ಪತ್ತೆಂಟರಂದು ಸಿಟಿ ಕೇಬಲ್ ತನ್ನ ಝೀ ಸಂಪರ್ಕವನ್ನೆಲ್ಲ ಕಡಿದು ಹಾಕಿತು.

ಎಷ್ಟೆಂದರೂ ಮುಖ್ಯಮಂತ್ರಿಯ ಕಂಪನಿಯಲ್ಲವೆ? ಅದಕ್ಕೇ ಸಂಪರ್ಕ ಕಡಿಯುವಷ್ಟು ಧೈರ್ಯ ಬಂತೆ? ಎಂದೇ ಲೆಕ್ಕ ಹಾಕಿದ್ದಾನೆ ಕಬಡ್ಡಿ ಬಾಬು. ಸಿಟಿ ಕೇಬಲ್‌ಗೆ ಬುದ್ಧಿ ಕಲಿಸಲು ಬೆಂಗಳೂರಿನ ಹತ್ತು ಏರಿಯಾಗಳಲ್ಲಿ ತನ್ನ ಹುಡುಗರನ್ನು ಬಿಟ್ಟು ಕೇಬಲ್ ಕಟ್ ಮಾಡಿಸಿದ್ದಾನೆ. ಹಾಗಂಥ ಸಿಟಿ ಕೇಬಲ್ ಬಿಡಬೇಕಲ್ಲ; ಮುಖ್ಯಮಂತ್ರಿ ವಿರುದ್ಧವೇ ದೂರು ಕೊಟ್ಟಿದ್ದಾರೆ. ಕಬಡ್ಡಿ ಬಾಬು ಕಡೆಯ [illegible] ಪರವಾಗಿ ತಮಿಳು ರೌಡಿಗಳ ಹಿಂಡಾವರೆ ಅಮೋಘ್ ... ಕನ್ನಡ ಅಂಡರ್‌ವರ್ಲ್ಡ್ ನಿಂತಿದೆ. [illegible]

ಅತ್ತ ಕಾಲಾಪತ್ಥರ್ ಇತ್ತ ಗೆಡ್ಡಾನಾಗ!

ಇಷ್ಟೆಲ್ಲಾ ನಡೆದದ್ದು ಅಮೋಘ್‌ನಿಂದ ಮಾರ್ವಾಡಿ ಪ್ರತಾಪ್ ವಾಧ್ವಾನನ್ನು ಓಡಿಸಲಿಕ್ಕಾಗಿ ಮತ್ತು ಇನ್‌ಕೇಬಲ್ ಹಿಡಿತದಿಂದ ಹೊರಬರುವುದಕ್ಕಾಗಿ ಎಂಬುದರಲ್ಲಿ ಎರಡು ಮಾತಿಲ್ಲ. ಹಾಗೊಮ್ಮೆ ಪ್ರತಾಪ್ ತನ್ನ ಷೇರು ಮಾರಿ ಹೊರಟುಬಿಟ್ಟನೆಂದರೆ ಇಡೀ ಅಮೋಘ್ ಗೌಡರ ಕುಟುಂಬದ ಸ್ವತ್ತಾಗುತ್ತದೆ.




ಈ ಮಧ್ಯೆ ಸಿಟಿ ಕೇಬಲ್ ಅಮೋಘ್ ವಿರುದ್ಧ ... ಅಪಾಯಕಾರಿ ... ಇಡೀ ತಮಿಳು ... ಕನ್ನಡಿಗ ಕೇಬಲ್ ಅಪರೇಟರುಗಳ ವಿರುದ್ಧ ಛೂ ಬಿಟ್ಟಿದೆ. ... ಸಿಟಿ ಕೇಬಲ್ ಪರವಾಗಿ ತಮಿಳು ರೌಡಿಗಳನ್ನು ... ಶ್ರೀರಾಂಪುರದ ಆನಂದ್ ಕೇಬಲ್ ಮಾಲೀಕ ಅಮೃತ್‌ಕುಮಾರ್. ಜೋಗುಪಾಳ್ಯ, ಲಕ್ಷ್ಮಿನಾರಾಯಣಪುರಪುರ ಮತ್ತು ತುಳಸಿ ತೋಟದಲ್ಲಿ ಐದು ಸಾವಿರ ಕನೆಕ್ಷನ್‌ಗಳಿರುವ ಈತನ ತಿಂಗಳ ... ಹತ್ತು ಲಕ್ಷ. ಈತನ ಜೊತೆ [illegible] ನೆಟ್‌ವರ್ಕ್‌ನ ನಾಯಕರು. ಬ್ಲ್ಯಾಕ್ ಕ್ಯಾಟ್ ರಾಜೇಂದ್ರ ಬದುಕಿದ್ದಷ್ಟೂ ದಿನ ಆತನಿಗೆ ಕಪ್ಪ ಸಲ್ಲಿಸುತ್ತಿದ್ದರು.

ಇವರ ಕಾಟಕ್ಕೆ ಬೇಸತ್ತೇ ಮಹಾಲಕ್ಷ್ಮಿ ಲೇಔಟಿನ ಪ್ರೇಮ್‌ಕುಮಾರ್, ಪ್ರಕಾಶನಗರದ ಶ್ರೀನಿಧಿ ರವಿ, ಶಿವಾ ಕೇಬಲ್, ಪದ್ಮರಾಜ್, ಆರುಳ್, ಬಸವರಾಜು, ರವಿರಾಜ್, ದೇವರಾಜ್ ಮುಂತಾದ ಕೇಬಲ್ ಅಪರೇಟರುಗಳು ಅಮೋಘ್ ಕೂಟಕ್ಕೆ ಪಕ್ಷಾಂತರ ಮಾಡಿದ್ದಾರೆ. ನಿನ್ನೆ ಮೊನ್ನೆಯ ತನಕ ಸಿಟಿ ಕೇಬಲ್ ಹಿಡಿತದಲ್ಲಿದ್ದ ಇಂಥವರನ್ನು ತಮಿಳು ರೌಡಿಗಳಾದ ಕಾಲಾಪತ್ಥರ್, ಮಣಿಭಾರತಿ ಮತ್ತು ಚಿಕ್ರಿಯ ಹೆಸರೇಳಿ ಮತ್ತೆ ಸಿಟಿ ಕೇಬಲ್‌ಗೆ ತರುವುದು ಅಮೃತ್‌ಕುಮಾರ್‌ನ ಹುನ್ನಾರ. ಅದಕ್ಕೆಂದು ಸಿಟಿ ಕೇಬಲ್ ಈತನಿಗೊಂದು ಕ್ವಾಲೀಸ್ ಗಾಡಿಯನ್ನೂ ಕೊಟ್ಟಿದೆ. ಯಾವತ್ತು ಚಿಕ್ರಿ, ಕಾಲಾಪತ್ಥರ್ ಹೆಸರಲ್ಲಿ ಧಮಕಿ ಫೋನುಗಳು ಬಂದವೋ ಕನ್ನಡದ ಅಪರೇಟರುಗಳು ಗೆಡ್ಡಾನಾಗನ ಮೊರೆ ಹೋಗಿದ್ದಾರೆ.

ಅಂದಹಾಗೆ ಕಳೆದ ವಾರವಷ್ಟೇ ಗೆಡ್ಡಾನಾಗ ಬ್ಲ್ಯಾಕ್ ಕ್ಯಾಟ್ ರಾಜೇಂದ್ರನ ಕೊಲೆ ಕೇಸಿನಿಂದ ಹೊರಬಿದ್ದಿದ್ದಾನೆ. ಕೇಬಲ್ ಕಾಳಗದಲ್ಲಿ ಯಾರ ಹೆಣ ಬೀಳುತ್ತೋ?

ಶಾರ್ಪ್‌ಶೂಟರ್ ನಾರಾಯಣಗೌಡನಿಗೆ ನಕ್ಸಲ್ ವಾರ್ನಿಂಗ್



ಇತ್ತ ಶೃಂಗೇರಿಯ ಬೀದಿಗಳಲ್ಲಿ ಸರ್ಕಾರ, ಪೊಲೀಸರು ಬಾಂಬ್ ನಿರೋಧಕ ವಾಹನದ ರಥೋತ್ಸವ ನಡೆಸುತ್ತಿದ್ದರೆ, ಅತ್ತ 13 ಕಿ.ಮೀ. ದೂರದ ಅತ್ತಿಗುಳಿಯಲ್ಲಿ 'ಶಾರ್ಪ್‌ಶೂಟರ್' ನಟೋರಿಯಸ್ ನಾರಾಯಣಗೌಡನ ಮನೆಗೆ ಬಂದ ನಕ್ಸಲರು ಒಂದು ಇಂಪೋರ್ಟೆಡ್ ಡಬಲ್ ಬ್ಯಾರಲ್ ಗನ್ ಮತ್ತು ಒಂದು ಮಾಮೂಲಿ ಏರ್‌ಗನ್ ತೊತ್ತು ನಡೆದಿದ್ದಾರೆ. ಜನರ ನಡುವೆ ಮಾಮೂಲಾಗೇ ಓಡಾಡುತ್ತಿದ್ದ ನಕ್ಸಲರು 'ಪುತ್ತರಾಗಲು' ಅವರೇನೂ ಅದೃಶ್ಯರಾದವರಲ್ಲವಲ್ಲ!

ಟ್ರಾನ್ಸ್‌ಫರ್ ದಂಧೆಯಲ್ಲಿ ಬ್ಯುಸಿಯಾಗಿದ್ದ ಖಾಕಿಗಳು, ಇಸ್ಪೀಟಾಡುತ್ತಿದ್ದ ನಕ್ಸಲ್ ನಿಗ್ರಹ ಪಡೆಗಳು ಆತುರಾತುರದಲ್ಲಿ ಅತ್ತಿಗುಳಿಯ ಅಂಗಳಕ್ಕೆ ಬಂದು ಕೂತಿವೆ. ನಕ್ಸಲರ ಭಯಕ್ಕಿಂತ ಪೊಲೀಸರ ಭಯವೇ ನಾರಾಯಣಗೌಡನನ್ನು ಕಾಡುತ್ತಿದೆ. ಏಕೆಂದರೆ ಈ ನಟ್ಟಟಾಲ್‌ನ ಬೆನ್ನಿಗೆ ಇರುವ ಕೇಸ್‌ಗಳು ಅಷ್ಟಿಷ್ಟಲ್ಲ.

ಬೆಳ್ಳಂಬೆಳಿಗ್ಗೆ ಸೂರ್ಯನಂತೆ.....

ಚಿಕ್ಕಮಗಳೂರು


ಕೊಪ್ಪ ತಾಲೂಕಿನ ಅತ್ತಿಗುಳಿ ಶೃಂಗೇರಿ ತಾಲ್ಲೂಕಿನ ಗಡಿಭಾಗದಲ್ಲಿದೆ. ಮೇ 30ರ ಮಂಗಳವಾರ ಮುಂಜಾನೆ ಹತ್ತು ಗಂಟೆಗೆ ನಾರಾಯಣಗೌಡನ ಮನೆ ಪ್ರವೇಶಿಸಿದ 8 ಜನರ ನಕ್ಸಲ್ ತಂಡ ನಾರಾಯಣಗೌಡನ ಕಂತ್ರಿ ಕೆಲಸಗಳ ಜಾತಕವನ್ನು ಬಿಚ್ಚಿಟ್ಟಿದೆ, ತಿದ್ದಿಕೊಳ್ಳುವುದು ಯಾವಾಗ ಎಂದು ಪ್ರಶ್ನಿಸಿದೆ. ಮಾತೇ ಹೊರಡದೇ ಮೂಗನಂತಾಗಿ ಹೋಗಿದ್ದ ನಾರಾಯಣಗೌಡ ಪಾಪಪ್ರಜ್ಞೆಯಲ್ಲಿ ನಡಗುತ್ತಿದ್ದರೆ, ಅತ್ತ ಇಬ್ಬರು ನಕ್ಸಲರು ನಾರಾಯಣಗೌಡನ ಬ್ಯಾರಲ್ ಗನ್ ಮತ್ತು ಏರ್‌ಗನ್ ತೆಗೆದುಕೊಂಡಿದ್ದಾರೆ. ಕೂಲಿ ಆಳುಗಳ ಮೇಲಿನ ದೌರ್ಜನ್ಯ, ಬಡ್ಡಿ ವ್ಯವಹಾರ, ಪಾಳೆಗಾರಿಕೆಯ ಕುತಂತ್ರಗಳನ್ನು ಈಗಿಂದಲೇ ನಿಲ್ಲಿಸುವಂತೆ ಗೌಡನಿಗೆ ತಾಕೀತು ಮಾಡಿದ ನಕ್ಸಲರು ಗೌಡನ ಜಾತಕದ ಪಟ್ಟಿಯೊಂದನ್ನು ಅವನ ಕೈಗಿತ್ತು ಹೊರ ನಡೆದಿದ್ದಾರೆ. ವಿಚಾರ ತಿಳಿದ ಸುತ್ತಲಿನ ಜನ ಹಾಗೂ ಗೌಡನ ಆಪ್ತರೇ "ಒಳ್ಳೆದಾಯ್ತು... ಎಂದೋ ಆಗಬೇಕಿತ್ತು" ಎನ್ನುತ್ತಿದ್ದಾಗ ಸೂರ್ಯ ಪ್ರಕಾಶಿಸುತ್ತಿದ್ದ. ಒಳಗಡೆ ನಾರಾಯಣಗೌಡನಿಗೆ ಸೂರ್ಯ ಬೆಂಕಿ ಉಂಡೆಯಂತೆ ಚುರುಕು ತಾಗಿಸುತ್ತಿದ್ದ.

'ಹೊಡಿಮಗ' ಖ್ಯಾತಿಯ ನಾ.ಗೌಡ....

ಪಾಳೆಗಾರಿಕೆಯ ಎಲ್ಲಾ ದುಷ್ಟತನಗಳನ್ನು ಮೈಗೂಡಿಸಿಕೊಂಡೇ ಬೆಳೆದಿರುವ ಈ ಕ್ರಿಮಿ ಗೌಡನಿಂದ ಹೀನಾಯ ಬೈಗುಳ, ಹೊಡೆತ, ಒದೆತ ತಿಂದು ಕೈಲಾಗದೇ ಕಣ್ಣೀರಿಟ್ಟ ಕೂಲಿಗಳು, ಸಣ್ಣ ರೈತರು, ಗಿರಿಜನರು ಅಸಂಖ್ಯ. ಸಣ್ಣರೈತರು, ಗಿರಿಜನರು ಅಲ್ಪಸ್ವಲ್ಪ ಒತ್ತುವರಿ ಮಾಡಿಕೊಂಡಿದ್ದರೆ "ಅವರು ಜಮೀನು ಮಾಡುತ್ತಾರಲ್ಲ" ಎನ್ನುವ ದುರ್ಬುದ್ಧಿಯ ಗೌಡ ತಾನು ಮಾತ್ರ ಗುಡ್ಡದಿಂದ ಗುಡ್ಡಕ್ಕೆ ಬೇಲಿ ಹಾಕಿ, ಕಾಫಿ, ಅಡಿಕೆ ತೋಟಗಳನ್ನು ಮಾಡಿದ್ದಲ್ಲದೇ ಕಳೆದ ವರ್ಷವಷ್ಟೇ ಕೊಪ್ಪ ಸಮೀಪ 50 ಲಕ್ಷದ ಆಸ್ತಿ ಖರೀದಿಸಿದ.

'ಹುಲಿ ಬತ್ತ' ಹುಲಿ....

ಈ ಹಿಂದೆ ಮಲೆನಾಡಿನಲ್ಲಿ 'ಹುಲಿಬತ್ತ' ಎಂಬ ಪದ್ಧತಿಯಿತ್ತು. ಬಡರೈತರಿಗೆ ಮಳೆಗಾಲಕ್ಕೆ ತಿನ್ನಲು ಭತ್ತವಿಲ್ಲದಿದ್ದಾಗ ನಾರಾಯಣಗೌಡನಂತವರು ಭತ್ತ ನೀಡುತ್ತಿದ್ದರು. ಮರುವರ್ಷ ಎರಡರಷ್ಟು ಭತ್ತವನ್ನು ಈ ಗೌಡಗಳಿಗೆ ವಾಪಸ್ ನೀಡಬೇಕಿತ್ತು, ಗೌಡನಂತಹ ನೂರಾರು ಕುಳಗಳು ಈ ಪದ್ಧತಿಯ ಲಾಭ ಪಡೆದೇ ದುಂಡಗಾಗಿದ್ದಾರೆ. ನಾರಾಯಣಗೌಡನ ಮಕ್ಕಳೂ ಬಡ್ಡಿ ವ್ಯವಹಾರದ ಕುಳಗಳೇ. ಮಗ ರಾಜಶೇಖರ್ ಶೃಂಗೇರಿಯಲ್ಲಿ ಫೈನಾನ್ಸ್ ನಡೆಸುತ್ತಲೇ ಬಡ್ಡಿಮಗನಾಗಿ ಹೋಗಿದ್ದಾನೆ.



ಶಾರ್ಪ್‌ಶೂಟರ್ ಇವನು!

ಒಳ್ಳೆ ಗುರಿಕಾರನಾಗಿ ಶಿಕಾರಿಯಲ್ಲಿ 'ಹೆಸರು' ಮಾಡಿರುವ ಗೌಡ ಕುಸಲಕ್ಕಿಯಿಂದ ಹುಲಿವರೆಗೂ ಬೇಟೆಯಾಡಿದವನೇ. ಒಮ್ಮೆ ತನ್ನ ಸೋದರನಿಗೇ ಗುರಿ ಇಟ್ಟಿದ್ದ ನಟೋರಿಯಸ್ ಈ ಗೌಡ. ಗದ್ದೆ ಪುಡಾರಿಗಳ ಹಿಂದೆ ಓಡಾಡುತ್ತ ದುಡ್ಡು ಮಾಡುತ್ತಲೇ ಬಂದ ಈ ಕುತಂತ್ರಿ ಗೌಡ ಗಿರಿಜನರು, ಬಡವರಿಗೆ ಯಾವ ಸೌಲಭ್ಯಗಳೂ ಸಿಗದಂತೆ ನೋಡಿಕೊಂಡು ಬಂದ. ಈ ಎಲ್ಲ ಹೀನಗುಣಗಳಿಂದ ಬೇಸರವಾಗಿದ್ದ ಅಸಹಾಯಕರಿಗೆ ಧೈರ್ಯ ತುಂಬಲು ನಕ್ಸಲರೇ ಬರಬೇಕಾಯ್ತು.

"ಊರುಬಟ್ಟು ಹೋಗಿಬದ್ತೀನಿ.... ಬಡವರ ಮದುವೆ, ಮುಂಜಿಗಳಲ್ಲಿ ನಾನೂ ಪಾಲ್ಗೊಂಡಿದ್ದೆ" ಎಂದು ಹಲುಬುತ್ತಿದ್ದಾನೆ ಗೌಡ.

ಪೊಲೀಸರ ಲೆಫ್ಟ್‌ರೈಟ್....

ಸ್ಪಾಟ್‌ಗೆ ಬಂದಿರುವ ಪೊಲೀಸಪ್ಪಗಳು ಎಲ್ಲಿವರೆಗೆ ರಸ್ತೆ ಇದೆಯೋ ಅಲ್ಲಿಯತನಕ ಜೀಪಿನಲ್ಲಿ ಹೋಗಿ ಬಂದಿದ್ದಾರೆ. ನಕ್ಸಲ್ ನಿಗ್ರಹ ದಳಗಳು ಊರಬದಿಯ ಕಾಫಿ ತೋಟಗಳಲ್ಲಿ, ಬಯಲುಗಳಲ್ಲಿ ಜಾಲಿಟ್ರಿಪ್ ಮಾಡಿ ಹೋಗಿವೆ. ನಕ್ಸಲ್ ನಿಗ್ರಹ ದಳದ ಪೆಮ್ಮಯ್ಯ, ಪೊಲೀಸ್ ವರಿಷ್ಠಾಧಿಕಾರಿ ವಿಪುಲ್‌ಕುಮಾರ್, ವೃತ್ತ ನಿರೀಕ್ಷಕ ನಟರಾಜ್‌ಗಳು ಪುರುಸೊತ್ತಿಲ್ಲದೇ ತಿರುಗುತ್ತಾ ಸಿಕ್ಕಸಿಕ್ಕವರನ್ನು ವಿಚಾರಿಸುತ್ತಿದ್ದಾರೆ. ಈ ಸರ್ಕಾರಗಳು ಪೊಲೀಸರನ್ನು ಎಷ್ಟು ದಿನಾಂತ ಹೀಗೆ ಕುಣಿಸುತ್ತಾರೋ?

ಇಡೀ ಮಲೆನಾಡು ಇವತ್ತು ಸಮಸ್ಯೆಗಳ ಸುಳಿಯಲ್ಲಿ ಸಿಕ್ಕು ತತ್ತರಿಸುತ್ತಿದೆ. ಕುದುರೆಮುಖ ರಾಷ್ಟ್ರೀಯ ಉದ್ಯಾನ ಯೋಜನೆ, ಒತ್ತುವರಿ ಸಮಸ್ಯೆಗಳೆಲ್ಲ ಬಡವರ ಜೀವ ತಿನ್ನುತ್ತಿವೆ. ಕುದುರೆಮುಖ ಗಣಿಗಾರಿಕೆ, ಭದ್ರಾ ಮೇಲ್ದಂಡೆ ಯೋಜನೆ, ಮಾಲತಿ ಯೋಜನೆ, ತುಂಗಾ ಮೇಲ್ದಂಡೆ ಯೋಜನೆ, ವರದಾ ಯೋಜನೆ, ನೇತ್ರಾವತಿ, ತುಂಗಾ ತಿರುವು ಯೋಜನೆ ಎಲ್ಲವೂ ಆದಿವಾಸಿಗಳ ಪಾಲಿಗೆ ಸಾವಿನಂತಿವೆ. ಎಸ್ಪಿ ಮಧುಕರಶೆಟ್ಟಿ, ಡಿ.ಸಿ. ಹರ್ಷ ಗುಪ್ತಾರ ಎತ್ತಂಗಡಿಯಾದ ಮೇಲೆ ದುಷ್ಟರೆಲ್ಲ ಚಿಗಿತುಕೊಂಡು ಮತ್ತೆ ಒತ್ತುವರಿ ಮಾಡುತ್ತಲೇ ಇದ್ದಾರೆ.

ಇಂತಹ ಹೊತ್ತಲ್ಲಿ ನಾರಾಯಣಗೌಡಗಳಿಗೆಲ್ಲ ಪಾಠ ಕಲಿಸಲು ನಕ್ಸಲರಲ್ಲದೇ ಇನ್ನಾರು ಬರಲು ಸಾಧ್ಯ ಅಲ್ಲವೆ?


ಡಬಲ್ ಬ್ಯಾರಲ್ - ಡಬಲ್ ಅನುಮಾನ

17-18 ವರ್ಷಗಳ ಹಿಂದೆ ಅತ್ತಗುಳಿ ಸಮೀಪ ಕಾಡಿನಲ್ಲಿ ಅನಾಥ ಹೆಣವೊಂದು ಬಿದ್ದಿತ್ತು. ನಾ. ಗೌಡನ ನೇತೃತ್ವದಲ್ಲಿ ಊರಜನ ಶವಸಂಸ್ಕಾರ ಮಾಡಿದ್ದರು. ಆ ಹೆಣದ ವಾಸನೆ ನಾ. ಗೌಡ ಮತ್ತು ಒಬ್ಬ ದಲಿತನಿಗಷ್ಟೇ ಗೊತ್ತಿತ್ತು. ಎರಡೇ ವರ್ಷದಲ್ಲಿ ಈ ದಲಿತ ಅನುಮಾನಾಸ್ಪದ ರೀತಿಯಲ್ಲಿ ಬೇಲಿಯ ಕರೆಂಟ್ ಶಾಕ್‌ಗೆ ಬಲಿಯಾಗಿಹೋದ. ಆಗ ನಾರಾಯಣಗೌಡ ತುಂಬಾ ಚಿಂತಾಕ್ರಾಂತನಾಗಿ ವಾರಗಟ್ಟಲೇ ಊಟವನ್ನೇ ಮಾಡಿರಲಿಲ್ಲವಂತೆ.

ಡಬಲ್ ಬ್ಯಾರಲ್ ಗನ್ನಿಗೆ ಡಬ್‌ಡಬಲ್ ಅನುಮಾನಗಳು ಹುಟ್ಟಿಕೊಂಡಿದ್ದೇ ಆಗ!

ಬ್ಲೂ ಫಿಲ್ಮ್ ಹುಡುಕಾಟದಲ್ಲಿ ನಕ್ಸಲ್ ನಿಗ್ರಹ ಪಡೆ

ಕೊಪ್ಪ, ಶೃಂಗೇರಿ, ಆಗುಂಬೆ ಇತ್ಯಾದಿ ಕಡೆ ವ್ಯಾನುಗಳಲ್ಲೇ ನಕ್ಸಲ್ ನಿಗ್ರಹ ಪಡೆಯವರು ಇಸ್ಪೀಟಾಡುತ್ತಾರೆ. ಬೇಜಾರಾದಾಗ ಮೀನು ಹಿಡಿದು ತಿನ್ನುತ್ತಾರೆ, ಕುಡಿದು ಕುಪ್ಪಳಿಸುತ್ತಾರೆ. ಬ್ಲೂ ಫಿಲಂ ಸಿ.ಡಿ.ಯನ್ನು ಎಂಜಾಯ್ ಮಾಡುತ್ತಾರೆ. ಬ್ಲೂ ಫಿಲಂ ಸಿ.ಡಿ. ಕೊಡದ ಅಂಗಡಿಯವರಿಗೆ ಐ.ಡಿ. ಕಾರ್ಡ್ ತೋರಿಸಿದ ಸಿವಿಲ್ ಡ್ರೆಸ್‌ನ ಪೊಲೀಸಪ್ಪಗಳ ಬಣ್ಣ ಬಯಲಾಗಿದೆ.



ರಾಯಚೂರು:

ಭತ್ತ ಖರೀದಿ ಹೆಸರಲ್ಲಿ ರೈತರಿಗೆ ಬತ್ತಿ!

ಈ ಮುಖ್ಯಮಂತ್ರಿ ಕುಮಾರಸ್ವಾಮಿಯ ಅಂದ ದರ್ಬಾರಿನಲ್ಲಿ ಬರೀ ಯೋಜನೆಗ ಘೋಷಣೆಯಾಗುತ್ತದೆಯಷ್ಟೇ. ರಾಜಕಾರಣಿಗಳ ಸಂಬಂಧಿ ಮದುವೆ-ಮುಂಜಿಗೆಂದು ರಾಯಚೂರು ಜಿಲ್ಲೆಗೆ ಬಂದ ಮುಖ್ಯಮಂತ್ರಿಗಳು ಇಲ್ಲೊಂದು ಪೊಳ್ಳು ಭರ ನೀಡಿ ರೈತರನ್ನು ವಂಚಿಸಿದ್ದಾರೆ. ಸರ್ಕಾರ ಬೆಂಬಲ ಬೆಲೆಯ ಭತ್ತ ಖರೀದಿಸಬೇಕು ಎಂದು ಕಾಂಗ್ರೆಸ್, ರೈತ ಸಂಘಗ ಪ್ರತಿಭಟಿಸಲು ಸಿದ್ಧವಾಗಿದ್ದವು. ಇದು ಗೊತ್ತಾದೊಡ ಎಚ್ಚೆತ್ತುಕೊಂಡ ಮುಖ್ಯಮಂತ್ರಿ ಸರ್ಕಾರ ಭತ್ತ ಖರೀದಿಸುತ ಎಂದು ರೀಲು ಬಿಟ್ಟು ಓಡಿ ಹೋಗಿ 20 ದಿನಗಳಾದರು ಇನ್ನೂ ಒಂದು ಕೆಜಿ ಭತ್ತವನ್ನು ಖರೀದಿಸಿಲ್ಲ.

ಕೇಂದ್ರ ಸರ್ಕಾರ ಚೀಲಕ್ಕೆ (75 ಕೆಜಿ) ನೀಡುವ 57 ರೂ.ಗಳ ಜೊತೆಗೆ ರಾಜ್ಯ ಸರ್ಕಾರದ 30 ರೂ. ಸೇ ಒಟ್ಟು 600 ರೂ. ಎಂದು ಫಿಕ್ಸ್ ಮಾಡಿದ ಜಿಲ್ಲಾಡಳಿ ಮುಖ್ಯಮಂತ್ರಿ ಬರುವ ಹಿಂದಿನ ದಿನ (ಮೇ 1 ಸಿಂಧನೂರು, ಮಾನ್ವಿಗಳಲ್ಲಿ ಭತ್ತ ಖರೀದಿ ಕೇಂದ್ರಗಳ ತೆರೆದು, ಮೇ 20 ಕ್ಕೆ ಸಂಪುಟ ಸಭೆಯ ಒಪ್ಪಿಗೆಯ ಪಡೆಯಿತು.

ಮೊದಲೇ ಬಸವಳಿದಿರುವ ರೈತರು ಖಾಸಗಿಯವ ಬದಲು ಸರ್ಕಾರಕ್ಕೆ ಮಾರಿದರೆ 100 ರೂ. ಹೆಚ್ಚು ಸಿಗುತ್ತ ಎಂದು ಪಹಣಿ ನಕಲು, ಗುರುತಿನ ಚೀಟಿ, ಗ್ರಾಮ ಲೆಕ್ಕಿಗ, ತಹಶೀಲ್ದಾರರ ದೃಢೀಕರಣ ಪತ್ರಗಳನ್ನು ರೆ ಮಾಡಿಕೊಂಡು ಭತ್ತ ಮಾರಲು ಬಂದರೆ ಜಿಲ್ಲಾಡಳಿ ಅವ್ಯವಸ್ಥೆ ಅಸಡ್ಡೆಯೇ ಎದುರಾಗಿಬಿಟ್ಟಿತು. ಕೃಷಿ ಇಲಾಖೆ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಗ ಉದ್ಧಟರು ಕೊನೆಗೂ ಒಂದು ಕೆ.ಜಿ. ಭತ್ತವನ ಖರೀದಿಸದೇ ರೈತರನ್ನು ಯಾಮಾರಿಸಿಬಿಟ್ಟರು.

ಸನ್ಮಾನ ಮಾಡಿಸಿಕೊಳ್ಳಲು ಜಿಲ್ಲೆಗೆ ಬಂದಿದ್ದ ಆಹಾ ಮತ್ತು ನಾಗರಿಕ ಪೂರೈಕೆ ಸಚಿವ ಗೋವಿಂದ ಕಾರಜೋ ಬಣ್ಣದ ಮಾತುಗಳನ್ನಾಡಿ ಓಡಿ ಹೋದ. ಈಗ ರೈತರು 100 ರೂ. ನಷ್ಟ ಮಾಡಿಕೊಂಡು ದಲ್ಲಾಳಿಗಳಿಗೆ ಭ ಮಾರುತ್ತಿದ್ದಾರೆ. ಈಗಾಗಲೇ ಒಬ್ಬ ರೈತ ಆತ್ಮಹತ್ಯೆ ಶರಣಾಗಿದ್ದಾನೆ. ಸರ್ಕಾರ ಮಾತ್ರ ಕೊಪ್ಪಳ ಜಿಲ್ಲೆಯಲ ಭತ್ತ ಖರೀದಿ ಕೇಂದ್ರ ತೆಗೆಯುತ್ತೇವೆ ಎನ್ನುತ್ತಿದೆ. ಬರಿ ಮಾತಾಡುವ ಈ ಸರ್ಕಾರ ಇದ್ದರೆಷ್ಟು ಬಿಟ್ಟರೆಷ್ಟು?

ಪ್ರತಿ ಜಿಲ್ಲೆಗೆ ಎರಡು ಕ್ರೀಡಾಂಗಣಗಳನ್ನು ನಿರ್ಮಿಸುತ್ತೇ ಎಂದು ಊರೂರಲ್ಲಿ ರೀಲು ಬಿಡುತ್ತಾ ಅಡ್ಡಾಡುತ್ತಿರು ಜಿಲ್ಲಾ ಉಸ್ತುವಾರಿ ಹಾಗೂ ಕ್ರೀಡಾ ಸಚಿವ ಅಲ್ಲೋಡ ಹನುಮಂತಪ್ಪ ಇನ್ನೂ ಬದುಕಿದ್ದಾನಾ ಎಂಬುದೇ ರೈತ ಪ್ರಶ್ನೆಯಾಗಿದೆ.

-ಅಶೋಕ್ ನೀಮಕ

ಚಿತ್ರದುರ್ಗ: ನಿಜಾಮುದ್ದೀನನ ಕಲಬೆರಕೆ ಪೆಟ್ರೋಲು ನಾಲ್ವರನ್ನು ಭಸ್ಮ ಮಾಡಿತಲ್ಲ!

ಕಳೆದ ವಾರ ಮೊಳಕಾಲ್ಮೂರು ತಾಲ್ಲೂಕಿನ ಮಲ್ಲಸಮುದ್ರ ಗ್ರಾಮದ ಒಂದೇ ಕುಟುಂಬದ ನಾಲ್ವರು ಆಕಸ್ಮಿಕ ಬೆಂಕಿ ಅಪಘಾತದಲ್ಲಿ ಉರಿದು ಬೂದಿಯಾದರು. ದಿನಸಿ ಅಂಗಡಿ ನಡೆಸುತ್ತಿದ್ದ ವಸಂತ, ಆತನ ಸಹೋದರ ಜಯರಾಂ, ತಾಯಿ ಮಹದೇವಮ್ಮ, ಹೆಂಡತಿ ಭೂಲಕ್ಷ್ಮಿ ಇವರುಗಳು ಈ ಹೃದಯ ವಿದ್ರಾವಕ ಘಟನೆಯಲ್ಲಿ ಜೀವಹರಣ ಮಾಡಿಕೊಂಡ ನತದೃಷ್ಟರು.

ದಿನಸಿ ಅಂಗಡಿ ನಡೆಸುತ್ತಿದ್ದ ವಸಂತ ಜೊತೆ ಪೆಟ್ರೋಲು-ಡೀಸೆಲನ್ನೂ ಮಾರಾಟ ಮಾಡುತ್ತಿದ್ದ. ಅಂದು ರಾತ್ರಿ ಊಟ ಮುಗಿಸಿ ಬಾಗಿಲು ಹಾಕುವ ಸಮಯದಲ್ಲಿ ಗಿರಾಕಿಯೊಬ್ಬರು ಪೆಟ್ರೋಲು ಕೇಳಿದ್ದಾರೆ. ವಸಂತ, ಆತನ ತಮ್ಮ ಜಯರಾಮನನ್ನು ಕರೆದು ಪೆಟ್ರೋಲು ಹಾಕಲು ಹೇಳಿದ್ದಾನೆ. ಪೆಟ್ರೋಲು ಅಳೆಯಬೇಕಾದರೆ ಕರೆಂಟು ಹೋಗಿದ್ದರಿಂದ ವಸಂತ ಮೇಣದಬತ್ತಿ ಬೆಳಗಿಸಿಟ್ಟಿದ್ದಾನೆ. ಜಯರಾಂ ಪೆಟ್ರೋಲ್ ಅಳೆಯುವಾಗ ಸೋರುತ್ತಿದ್ದ ಪೆಟ್ರೋಲು ಮೇಣದ ಬತ್ತಿಯತ್ತ ಹರಿದು ಬೆಂಕಿ ಹತ್ತಿಕೊಂಡಿದೆ. ಮನೆಯೊಳಗಿಟ್ಟಿದ್ದ ಸುಮಾರು 40 [illegible] ಪೆಟ್ರೋಲಿನ [illegible] ತೀವ್ರತೆ ಮನೆಯೊಳಗಿದ್ದ [illegible] ಹೊರಬರಲಿಕ್ಕೂ ಆಗದಷ್ಟು ವ್ಯಾಪಿಸಿ ನಾಲ್ವರನ್ನೂ [illegible]. ಇಡೀ ಗ್ರಾಮದ ಜನ ಅಸಹಾಯಕರಾಗಿ [illegible]. ರಕ್ಷಿಸಲಾಗದೇ

ಪರಿತಪಿಸಿದ್ದಾರೆ. ಆದರೆ ವಸಂತ ತಾನು ಸಾವಿನ ದವಡೆಯಲ್ಲಿದ್ದರೂ ತನ್ನ ಒಂದು ವರ್ಷದ ಮಗನನ್ನು ಹೊರಗೆಸೆದು ಜೀವ ಉಳಿಸಿದ್ದಾನೆ.


ಕಲಬೆರಕೆ ಪೆಟ್ರೋಲು

ಪೊಲೀಸರು ಎಂದಿನಂತೆ ಇದೊಂದು ಆಕಸ್ಮಿಕ ಘಟನೆಯೆಂಬಂತೆ ಕೇಸು ದಾಖಲಿಸಿಕೊಂಡು ಕೈ ತೊಳೆದುಕೊಂಡಿದ್ದಾರೆ. ಕ್ಷೇತ್ರದ ಶಾಸಕ ಎನ್. ವೈ. ಗೋಪಾಲಕೃಷ್ಣ ಗ್ರಾಮಕ್ಕೆ ಭೇಟಿ ನೀಡಿದ್ದಾರೆ. ಆದರೆ ಅಂದು ನಾಲ್ವರನ್ನು ಬಲಿತೆಗೆದುಕೊಂಡ ಕಲಬೆರಕೆ ಪೆಟ್ರೋಲು ಬಂದದ್ದು ಎಲ್ಲಿಂದ ಎಂಬುದರ ಬಗ್ಗೆ ಯಾರೂ ತುಟಿ ಬಿಚ್ಚುತ್ತಿಲ್ಲ, ಜಿಲ್ಲೆಯ ಬಹುತೇಕ ಹಳ್ಳಿಗಳ ದಿನಸಿ ಅಂಗಡಿಗಳಲ್ಲಿ ಅಕ್ರಮವಾಗಿ ಪೆಟ್ರೋಲು-ಡೀಸೆಲನ್ನು ಮಾರಾಟ ಮಾಡಲಾಗುತ್ತಿದೆ.

ನಿಜಾಮುದ್ದೀನನ ದಂಧೆ

ಮಲ್ಲಸಮುದ್ರದಲ್ಲಿ ಈ ದುರ್ಘಟನೆ ನಡೆದಾಕ್ಷಣ ಚಿತ್ರದುರ್ಗದಲ್ಲಿ ಕೇಳಿಬಂದದ್ದು ನಿಜಾಮುದ್ದೀನ್ ಎಂಬಾತನ ಹೆಸರು. ಈತ ಹತ್ತು-ಹದಿನೈದು ವರ್ಷಗಳ ಹಿಂದೆ ಲಾರಿ ಕ್ಲೀನರ್ ಆಗಿದ್ದವ. ಅದು ಹೇಗೋ ಪೆಟ್ರೋಲ್ ದಂಧೆಯನ್ನು ಶುರುವಿಟ್ಟುಕೊಂಡ. ಪವಾಡ [illegible] ಜೋಗಿಮಟ್ಟಿ ರಸ್ತೆಯಲ್ಲಿ

ನಲವತ್ತು-ಐವತ್ತು ಲಕ್ಷ ರೂ ಮೌಲ್ಯದ ಮನೆ ಕಟ್ಟಿಸಿದ. ಹಳೇ ಬೆಂಗಳೂರು ರಸ್ತೆಯ ಜಮೀನಿನಲ್ಲಿ ಈತನ ಒಡೆತನದ ಹತ್ತು-ಹನ್ನೆರಡು ಪೆಟ್ರೋಲು ಟ್ಯಾಂಕರುಗಳಿವೆ. ಮಹಾರಾಷ್ಟ್ರ, ದೊಡ್ಡಮಂಗಳೂರಿನಿಂದ ಕಚ್ಚಾ ಪೆಟ್ರೋಲ್ (ವೈಟ್ ಪೆಟ್ರೋಲ್)ನ್ನು ತರಿಸಿ, ಅದಕ್ಕೆ ಕಲರ್ ಬಿಸ್ಕೆಟ್ ಹಾಕಿ ಅಸಲಿ ಪೆಟ್ರೋಲಿನ ರೂಪ ಕೊಟ್ಟು ಮಾರುತ್ತಾನೆ. ಈ ಭಾಗದಲ್ಲೆಲ್ಲಾ ಸರಬರಾಜಾಗುವುದು ನಿಜಾಮುದ್ದೀನನ ಅಕ್ರಮ ಪೆಟ್ರೋಲೇ. ಇಲಾಖೆಯಲ್ಲಿ ಅಡಿಯಿಂದ ಮುಡಿಯವರೆಗೆ ನಿಜಾಮುದ್ದೀನ್ ಸಲ್ಲಿಸುವ ಕಪ್ಪ ಕಾಣಿಕೆ ಪೊಲೀಸರನ್ನು ನಿಷ್ಕ್ರಿಯವಾಗಿಸಿದೆ. ಇದೇ ಕಾರಣಕ್ಕೆ ಬಳ್ಳಾರಿ, ದಾವಣಗೆರೆ, ಚಿತ್ರದುರ್ಗ ಜಿಲ್ಲೆಯಾದ್ಯಂತ ನಿಜಾಮುದ್ದೀನನ ಅಕ್ರಮ ಪೆಟ್ರೋಲು ಯಾವ ಅಡೆತಡೆಯೂ ಇಲ್ಲದೇ ಅವ್ಯಾಹತವಾಗಿ ಸರಬರಾಜಾಗುತ್ತಿದೆ. ಹದಿನೈದಿಪ್ಪತ್ತು ರೂಪಾಯಿಗಳಿಗೆ ತರುವ ಕಚ್ಚಾ ಪೆಟ್ರೋಲನ್ನು ಲೀಟರಿಗೆ ಮೂವತ್ತು-ಮೂವತ್ತೈದು ರೂಪಾಯಿಗಳಿಗೆ ಬಿಕರಿ [illegible].



ತಿಪ್ಪಾರೆಡ್ಡಿಯ ಶಿಷ್ಯ

ಇಂದು ಕೋಟ್ಯಾಂತರ ರೂಪಾಯಿಗಳ ಮೌಲ್ಯದ ಕಲಬೆರಕೆ ಪೆಟ್ರೋಲು ದಂಧೆಯನ್ನು ನಡೆಸುತ್ತಿರುವ ನಿಜಾಮುದ್ದೀನ್ ಕಾಂಗ್ರೆಸ್ ಮುಖಂಡ ಹಾಗೂ ಶಾಸಕ ತಿಪ್ಪಾರೆಡ್ಡಿಯ ಶಿಷ್ಯ. ತಿಪ್ಪಾರೆಡ್ಡಿಯ ಚುನಾವಣಾ ವೆಚ್ಚದ ಹೊರೆಯನ್ನು ಭರಿಸುವಲ್ಲಿ ಈತನ ಪಾಲು ದೊಡ್ಡದು. ಮುಸ್ಲಿಂ ವೇದಿಕೆಯೊಂದನ್ನು ಮಾಡಿ ಸಣ್ಣಪುಟ್ಟ 'ದಾನ ಧರ್ಮ' ಮಾಡುತ್ತಾನೆ. ದೇವಸ್ಥಾನಗಳಿಗೂ, ಉತ್ಸವಗಳಿಗೂ ಫಂಡು ಕೊಡುತ್ತಾನೆ. ಚಿತ್ರದುರ್ಗದ ಕೆಲ ಪೆಟ್ರೋಲ್ ಬಂಕ್ ಮಾಲೀಕರೂ ಈತನ ಕಲಬೆರಕೆ ಪೆಟ್ರೋಲನ್ನು ಖರೀದಿಸುವುದರಿಂದ ಅವರೂ ಬಾಯಿಗೆ ಬೀಗ ಹಾಕಿಕೊಂಡಿದ್ದಾರೆ.

ನಿಜಾಮುದ್ದೀನನ ಕಲಬೆರಕೆ ಪೆಟ್ರೋಲು ದಂಧೆಗೆ ಕಡಿವಾಣ ಹಾಕುವುದು, ಆತನ ಮೇಲೆ ಕಾನೂನು ಕ್ರಮ ಕೈಗೊಳ್ಳುವುದು ಮಲ್ಲಸಮುದ್ರದಲ್ಲಿ ಉರಿದು ಬೂದಿಯಾದವರ ಅಂತ್ಯ ಸಂಸ್ಕಾರ ಮಾಡಿದಷ್ಟು ಸುಲಭವಲ್ಲ.

-ವರದಿಗಾರ

ನಲ್ಲೂರಿನ ಶಾಲೆಗೆ ಚೆಡ್ಡಿಗಳ ಕಾಟ

ಜಿಲ್ಲೆಯ ಚನ್ನಗಿರಿ ತಾಲ್ಲೂಕಿನ ಜಿಲ್ಲಾ ಮುಖ್ಯ ರಸ್ತೆಯಲ್ಲಿ ಬರುವ ದೊಡ್ಡ ಊರಾದ ನಲ್ಲೂರಿನ ಸರ್ಕಾರಿ ಬಾಲಕರ ಪ್ರೌಢ ಶಾಲೆಗೆ ಚೆಡ್ಡಿಗಳ ಕುತಂತ್ರದ ಸೋಂಕು ತಗುಲಿದೆ. ಈ ಪ್ರೌಢಶಾಲೆಯ ಮುಖ್ಯಶಿಕ್ಷಕಿ ಶೀಲಾರಾಣಿ ಚೆಡ್ಡಿಗಳೊಂದಿಗಿನ ಸಖ್ಯದಿಂದಾಗಿ ದುಂಡಗಾಗುತ್ತಿರುವುದಲ್ಲದೆ ಮಕ್ಕಳ ಭವಿಷ್ಯವನ್ನು ಲೆಕ್ಕಿಸದೆ ನಿರಂತರ ಗಲಾಟೆ-ಗೊಂದಲಗಳಲ್ಲೇ ಕಾಲ ಕಳೆಯುತ್ತಿದ್ದಾಳೆ. ಕಳೆದ ಎರಡು ವರ್ಷಗಳಿಂದ ಪ್ರತಿನಿತ್ಯ ಇಲ್ಲವೆ ವಾರಕ್ಕೆರಡು ಬಾರಿಯಾದರೂ ಈ ಶಾಲೆಯಲ್ಲಿ ಗಲಾಟೆಗಳಾಗುತ್ತವೆ. ಈ ಗಲಾಟೆಗಳು ಒಂದು ಕಡೆ School Development and Monitory Committee (SDMC, ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ) ಸದಸ್ಯರು ಹಾಗೂ ಮುಖ್ಯಶಿಕ್ಷಕಿಯ ಮಧ್ಯೆ ನಡೆದರೆ, ಇನ್ನೊಂದು ಕಡೆ ಸಹಶಿಕ್ಷಕರು ಮತ್ತು ಮುಖ್ಯಶಿಕ್ಷಕಿಯ ಮಧ್ಯೆ ನಡೆಯುತ್ತಿದೆ.

ದಾವಣಗೆರೆ


ಈ ಗಲಾಟೆಗಳು ಯಾವ ಮಟ್ಟವನ್ನು ತಲುಪಿವೆಯೆಂದರೆ, ಶೀಲಾರಾಣಿ ಪೋಲೀಸರಿಗೆ ನೀಡಿದ ದೂರಿನಿಂದಾಗಿ SDMC ಯ ಕೆಲವು ಸದಸ್ಯರ ಮೇಲೆ ಜಾಮೀನುರಹಿತ ವಾರೆಂಟುಗಳಾಗಿವೆ. ಇನ್ನೊಂದು ಕಡೆ ಸಹಶಿಕ್ಷಕಿಯರೇ ಶೀಲಾರಾಣಿಯ ಮೇಲೆ ವಕೀಲರ ಮೂಲಕ ಜಿಲ್ಲಾ ಪಂಚಾಯಿತ್ತಿಯ ಮುಖ್ಯ ಕಾರ್ಯದರ್ಶಿಗೆ ದೂರು ನೀಡಿ ಶೀಲಾರಾಣಿಯಿಂದ ತಮಗಾಗುತ್ತಿರುವ ಕಿರುಕುಳಕ್ಕೆ ಮುಕ್ತಿ ಕೋರಿದ್ದಾರೆ.

ನಲ್ಲೂರು ಅತ್ಯಂತ ಸೂಕ್ಷ್ಮ ಪ್ರದೇಶ. ಇದು ಭೌಗೋಳಿಕವಾಗಿ ಚನ್ನಗಿರಿ ತಾಲ್ಲೂಕಿಗೆ ಸೇರಿದೆಯಾದರೂ ಶಿವಮೊಗ್ಗ ಜಿಲ್ಲೆಯ ಹೊಳೆ ಹೊನ್ನೂರು ವಿಧಾನಸಭಾ ಕ್ಷೇತ್ರಕ್ಕೆ ಸೇರುತ್ತದೆ. ರಾಜ್ಯದಲ್ಲೇ ಅತಿ ದೊಡ್ಡ ಸಹಕಾರಿ ಸಂಘದ ಕಟ್ಟಡ ಇಲ್ಲಿದ್ದು ವ್ಯವಹಾರವೂ ದೊಡ್ಡ ಮಟ್ಟದಲ್ಲಿ ನಡೆಯುತ್ತದೆ. ಎಲ್ಲ ಜನಾಂಗದವರನ್ನೊಳಗೊಂಡ 'ಕನ್ನಡ ಜಾಗೃತಿ ಸಮಿತಿ' ಇಲ್ಲಿದೆ. ಹಾಗಾಗಿ ದಾವಣಗೆರೆ ಜಿಲ್ಲೆಯಲ್ಲಿ ಯಶಸ್ವಿ ಕನ್ನಡ ಕಾರ್ಯಕ್ರಮಗಳೇನಾದರೂ ನಡೆದರೆ ನಲ್ಲೂರಿನಲ್ಲಿಯೇ ನಡೆಯುತ್ತವೆ. ಈ ಊರಿನ ಒಟ್ಟು ಜನಸಂಖ್ಯೆಯ ಅರ್ಧದಷ್ಟು ಮುಸ್ಲಿಮರಿದ್ದಾರೆ. 1981 ರಲ್ಲಿ ಇಲ್ಲಿ ಕೋಮು ಗಲಭೆಗಳಾದಾಗ ಪಿ.ಲಂಕೇಶ್‌ರವರು ಖುದ್ದಾಗಿ ಇಲ್ಲಿಗೆ ಭೇಟಿ ನೀಡಿ ಪತ್ರಿಕೆಯಲ್ಲಿ ವರದಿ ಮಾಡಿದ್ದರು.

ಚೆಡ್ಡಿಗಳದೇ ಕಾರುಬಾರು

ಈ ಊರಿನ ಶಾಲೆ ದಿನನಿತ್ಯದ ಗೊಂದಲಗಳ ಕೇಂದ್ರವಾಗುವುದಕ್ಕೆ ನೇರವಾಗಿ ಚೆಡ್ಡಿಗಳೇ ಕಾರಣರಾಗಿದ್ದಾರೆ. ಸೌಹಾರ್ದದ ಬದುಕನ್ನು ಛಿದ್ರಗೊಳಿಸಿ ತಮ್ಮ ಇಷ್ಟಾರ್ಥಗಳನ್ನು ಪೂರೈಸಿಕೊಳ್ಳುವ ಇವರಿಗೆ ಸಮಾನ ಶಕ್ತಿಗಳಾಗಿ ಮುಸ್ಲಿಮರು SDMC ಯಲ್ಲಿರುವುದನ್ನು ಸಹಿಸಿಕೊಳ್ಳಲಾಗುತ್ತಿಲ್ಲ. ಏಕೆಂದರೆ SDMC ಯ ದೇಣಿಗೆ ಮೂರು ಲಕ್ಷ ರೂ.ಗಳ ಭ್ರಷ್ಟಾಚಾರವನ್ನು ಪ್ರಶ್ನಿಸಿ ಪ್ರತಿಭಟಿಸಿದ್ದೇ SDMC ಸದಸ್ಯರಾದ ನಜರುಲ್ಲ ಮತ್ತು ಸಂಗಡಿಗರು. ಆದರೆ ಇವರ ಪ್ರತಿಭಟನೆಗೆ ಸಿಕ್ಕ ಸಮಾಧಾನವೆಂದರೆ ಜಾಮೀನು ರಹಿತ ವಾರೆಂಟುಗಳು ಮಾತ್ರ. ಇನ್ನೂ ದುರಂತವೆಂದರೆ ಪ್ರತ್ಯೇಕವಾಗಿ ಈ ಭ್ರಷ್ಟಾಚಾರಕ್ಕೆ ಸಂಬಂಧಿಸಿದ ಫೈಲುಗಳು ಮಾತ್ರವೇ ನಿಗೂಢವಾಗಿ ನಾಪತ್ತೆಯಾಗಿವೆ. ಇದು ಕಾಕತಾಳೀಯವೋ ಅಥವಾ ಕೋಮುವಾದಿಗಳ ಕುತಂತ್ರವೋ? ಎನ್ನುವುದು ಬಹಿರಂಗಗೊಳ್ಳಬೇಕಿದೆ. ಈ ಕ್ಷೇತ್ರದಿಂದ ಬಿಜೆಪಿಯ ಬಸವಣ್ಯಪ್ಪ ಶಾಸಕನಾಗಿ ಗೆದ್ದು ಬಂದ ಮೇಲಂತೂ ಇಲ್ಲಿನ ಕೋಮುವಾದಿ ಕ್ರಿಮಿಗಳಿಗೆ ಕೆಳಗೆ ಹಲ್ಲು-ಮೇಲೆ ಕೋಡುಗಳು ಮೂಡಿದಂತಾಗಿದೆ.

ಸಂಬಂಧಿಸಿದ ಶಾಲೆಯಲ್ಲಿ ಓದುತ್ತಿರುವ ಮಕ್ಕಳಿದ್ದವರು ಮಾತ್ರ SDMC ಯ ಅಧ್ಯಕ್ಷರಾಗಬೇಕೆಂಬ ನಿಯಮವಿದ್ದರೂ ಸಹ ಅವಿವಾಹಿತ ವಿಜಯಕುಮಾರ್ ಎನ್ನುವವನು ಇದರ ಅಧ್ಯಕ್ಷನಾಗಿದ್ದಾನೆ. ಇವನು, ಇವನ ತಂದೆ ರಾಮ್‌ಪ್ರಸಾದ್ ಬಿಜೆಪಿಯಲ್ಲಿ ಸಕ್ರಿಯರಾಗಿದ್ದು ಮುಖ್ಯ ಶಿಕ್ಷಕಿ ಶೀಲಾರಾಣಿಯನ್ನು ತಮ್ಮ ಹಿಡಿತದಲ್ಲಿಟ್ಟುಕೊಂಡು ಇನ್ನಿಲ್ಲದ ಕ್ಯಾತೆಗಳನ್ನು ತೆಗೆಯುತ್ತಿದ್ದಾರೆ ಮತ್ತು ಪ್ರತಿ ಸಣ್ಣ ವಿಷಯಕ್ಕೂ ತಮ್ಮ ನಾಯಕಮಣಿಗಳಿಂದ ಶಾಲೆಯ ಮೇಲಧಿಕಾರಿಗಳಿಗೆ ಫೋನ್ ಮಾಡಿಸಿ ತಮ್ಮ ದುರಾಚಾರವನ್ನು ಮೆರೆಯುತ್ತಿದ್ದಾರೆ. ಸರ್ಕಾರಿ ಉದ್ಯೋಗಿಯಾದ ಶೀಲಾರಾಣಿ ಈ ಕುತಂತ್ರಿಗಳ ಮಾತು ಕೇಳಿ ಶಾಲೆಯ ವಾತಾವರಣವನ್ನು ಗಬ್ಬೆಬ್ಬಿಸುತ್ತಿರುವುದಲ್ಲದೆ ಮಕ್ಕಳ ಭವಿಷ್ಯಕ್ಕೂ ಮಣ್ಣು ಸುರಿಯುತ್ತಿದ್ದಾಳೆ. ಈಕೆಯ



ಶೀಲಾರಾಣಿ

ನಲ್ಲೂರಿನ ಶಾಲೆಯ ಒಂದು ಸಮಾರಂಭ

ದುರಾಡಳಿತ, ಭ್ರಷ್ಟಾಚಾರಗಳ ವಿರುದ್ಧ ನಿರಂತರವಾಗಿ ಪ್ರತಿಭಟನೆಗಳು ವ್ಯಕ್ತವಾಗುತ್ತಿದ್ದರೂ ಕೂಡಾ ಚೆಡ್ಡಿಗಳ ಬೆಂಬಲದಿಂದ ಈಕೆ ಸುರಕ್ಷಿತವಾಗಿದ್ದಾಳೆ.

ಶಿಕ್ಷಕರೇ ಭಕ್ಷಕರು

ಶಾಲೆಯ ಶಿಕ್ಷಕರು ಟ್ಯೂಷನ್ ದಂಧೆಯನ್ನೇ ವೃತ್ತಿಯಾಗಿಸಿಕೊಂಡಿರುವುದರಿಂದ ಸರಿಯಾಗಿ ಪಾಠಗಳನ್ನು ಮಾಡುತ್ತಿಲ್ಲ, ಅಂತಹ ಇಂತಹ ಟ್ಯೂಷನ್‌ಗೆ ಹೋದ ಕೆಲಮಕ್ಕಳು ಮಾತ್ರ ಪಾಸಾಗುತ್ತಾರೆ. ಪರೀಕ್ಷೆಗಳು ಹತ್ತಿರ ಬಂದವೆಂದರೆ ಇಲ್ಲಿನ ಶಿಕ್ಷಕರುಗಳ ಹಬ್ಬದ ವಾತಾವರಣವೇ ಸೃಷ್ಟಿಯಾಗಿಬಿಡುತ್ತದೆ. ಕುಟುಂಬ ಸಮೇತರಾಗಿ ಸುತ್ತಮುತ್ತಲ ಹಳ್ಳಿಗಳ ವಿದ್ಯಾರ್ಥಿಗಳ ಮನೆಗಳಿಗೆ ಊಟಕ್ಕೆ ಹೋಗಿ ವಿದ್ಯಾರ್ಥಿಗಳನ್ನು ಟ್ಯೂಷನ್ ಬಲೆಗೆ ಬೀಳಿಸಿಕೊಳ್ಳುವುದು ನಡೆಯುತ್ತಿದೆ. ಈ ಬಾರಿ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆದ 185 ವಿದ್ಯಾರ್ಥಿಗಳಲ್ಲಿ ಕೇವಲ 57 ಮಂದಿ ವಿದ್ಯಾರ್ಥಿಗಳು ಮಾತ್ರ ಪಾಸಾಗಿದ್ದಾರೆಂದರೆ ಈ ಶಾಲೆಯ ಶೈಕ್ಷಣಿಕ ಗುಣಮಟ್ಟ ಅದೆಷ್ಟು ಅಧ್ವಾನವಾಗಿದೆ ಎನ್ನುವುದು ಅರ್ಥವಾಗುತ್ತದೆ.

ಇಲ್ಲಿ ಎರಡು ಪರೀಕ್ಷಾ ಕೇಂದ್ರಗಳಲ್ಲಿ ಹತ್ತನೇ ತರಗತಿ ಪರೀಕ್ಷೆಗಳು ನಡೆದಿವೆ. ಈ ಒಂದರ ಜವಾಬ್ದಾರಿಯನ್ನು ಮುಖ್ಯ ಶಿಕ್ಷಕಿ ಶೀಲಾರಾಣಿ ವಹಿಸಿಕೊಂಡು ಖಾಸಗಿ ಶಾಲೆಯ ಪ್ರಭಾವಿತರ ಮಕ್ಕಳ ತೇರ್ಗಡೆಗಾಗಿ ಎಲ್ಲ ಕಸರತ್ತುಗಳನ್ನು ಮಾಡಿದರೆ, ಇನ್ನೊಂದು ಪರೀಕ್ಷಾ ಕೇಂದ್ರದಲ್ಲಿ ಪ್ರಾಥಮಿಕ ಶಾಲೆಯ ಶಿಕ್ಷಕರೇ ಇದ್ದು ವಿದ್ಯಾರ್ಥಿಗಳಿಗೆ ಕಾಪಿ ಮಾಡಿಸುವ ಮೂಲಕ ಇದು ಪರೀಕ್ಷಾ ಕೇಂದ್ರವೆ? ಎಂಬ ಅನುಮಾನ ಹುಟ್ಟುವಂತೆ ಮಾಡಿದ್ದಾರೆ.

ಒಂದು ಪರೀಕ್ಷಾ ಕೇಂದ್ರದ ಫಲಿತಾಂಶ ಶೇ. 32 ರಷ್ಟು ಬಂದರೆ, ಇನ್ನೊಂದು ಕೇಂದ್ರದ ಫಲಿತಾಂಶ ಶೇ. 50 ರಷ್ಟು ಬಂದಿದೆ. ಒಂದೇ ಶಾಲೆಯಲ್ಲಿ ಓದಿದ ಮಕ್ಕಳ ಫಲಿತಾಂಶ ಹೀಗೆ ಏರುಪೇರಾಗಲು ಸಾಧ್ಯವಾದುದಾದರೂ ಹೇಗೆ? ಸುಮಾರು ಇಪ್ಪತ್ತು ವರ್ಷಗಳಿಂದಲೂ ಇಲ್ಲಿಯೇ ಭದ್ರವಾಗಿ ನೆಲೆಯೂರಿರುವ ಹಲವಾರು ಶಿಕ್ಷಕರು ಇಲ್ಲಿನ ಕುತಂತ್ರಿ ರಾಜಕೀಯದ ಭಾಗವಾಗಿ ಹೋಗಿರುವಾಗ ವಿದ್ಯಾರ್ಥಿಗಳ ಭವಿಷ್ಯದ ಪರಿಕಲ್ಪನೆಯಾದರೂ ಇವರಿಗೆ ಇರಲು ಸಾಧ್ಯವೇ?

ಜಾತಿ ವರ್ಣಗಳ ಸೋಂಕನ್ನು ಅಂಟಿಸಿಕೊಳ್ಳದೆ ಇರುವ 'ಕನ್ನಡ ಜಾಗೃತಿ ಸಮಿತಿ'ಯ ಪದಾಧಿಕಾರಿಗಳು 'ನಲ್ಲೂರು ಪಂಚಾಯ್ತಿಗೆ ನಾವೇ ಪರ್ಯಾಯ ಸರ್ಕಾರ' ಎಂದು ಬೀಗಿದರಷ್ಟೇ ಸಾಲದು, ತಮ್ಮ ರಾಜಕೀಯ ಖಯಾಲಿಗಳನ್ನು ಬದಿಗೊತ್ತಿ ಇನ್ನಷ್ಟು ಐಕ್ಯರಾಗಿ, ಶಾಲೆಯನ್ನು ಸರ್ವನಾಶಗೊಳಿಸುತ್ತಿರುವ ಕೋಮುವಾದಿ ಚೆಡ್ಡಿಗಳಿಗೆ ಬುದ್ಧಿ ಕಲಿಸಬೇಕು.

–ಚಂದ್ರಶೇಖರ ತೋರಣಘಟ್ಟ

ಮತ್ತೆ ವಕ್ಕರಿಸಿದ ಶನಿ 'ಸುಮ್ಮನೆ ಸಿದ್ದ'

ಈಗ್ಗೆ ಆರು ತಿಂಗಳ ಹಿಂದೆ ಲೋಕಾಯುಕ್ತರ ಬಲೆಗೆ ಸಿಕ್ಕಿಬಿದ್ದು ತನ್ನ ಕೋಟಿ ಕೋಟಿ ಅಕ್ರಮ ಆಸ್ತಿಯನ್ನು ಬಹಿರಂಗಗೊಳಿಸಿಕೊಂಡಿದ್ದ 'ಸುಮ್ಮನೆ ಸಿದ್ದ' ಮತ್ತೆ ಇದೇ ದಾವಣಗೆರೆಗೆ ಉಪವಿಭಾಗಾಧಿಕಾರಿಯಾಗಿ ವಕ್ಕರಿಸಿದ್ದಾನೆ. "ಗಂಡ್ಸು ಅಂದ್ರೆ ಇವ್ನೆ ಕಣ್ರಿ" ಎಂದು ಇವನದೇ ಹೀನ ಚಾಳಿಯ ಭ್ರಷ್ಟ ಅಧಿಕಾರಿಗಳು ಸಿದ್ದಪ್ಪನಿಗೆ ಶಭಾಷ್‌ಗಿರಿ ಕೊಟ್ಟು ರಕ್ಕಸ ನಗೆ ಬೀರುತ್ತಿದ್ದಾರೆ. ತನ್ನ ಮಕ್ಕಳಿಗೆ ರಾಷ್ಟ್ರಪತಿ, ಉಪರಾಷ್ಟ್ರಪತಿ ಮುಂತಾಗಿ ಹೆಸರುಗಳನ್ನಿಟ್ಟುಕೊಂಡಿದ್ದ ಸಿದ್ದಪ್ಪ ಸಿಕ್ಕಿಬಿದ್ದಾಗ ತಾನು ಮಹಾನ್ ದೇಶಭಕ್ತನಂತೆ ಪೋಜು ಕೊಟ್ಟಿದ್ದ. ತನ್ನ ಹುದ್ದೆಯ ಲಾಭ ತರುವಂತಹ ಕೆಲವು ಜವಾಬ್ದಾರಿಗಳನ್ನು ಇನ್ನೊಬ್ಬರಿಗೆ ವಹಿಸದೆಯೇ ರಾಜೀನಾಮೆಯ ನಾಟಕವನ್ನು ಶುರುವಿಟ್ಟುಕೊಂಡಿದ್ದ. ರಾಜಕೀಯಕ್ಕಿಳಿಯುತ್ತೇನೆಂದು ಕೆಲವು ದಿನಗಳ ಕಾಲ ಬಡಬಡಿಸಿ ಈಗ ನಿರಾಯಾಸವಾಗಿ ಮತ್ತೆ ದಾವಣಗೆರೆಗೆ ಉಪವಿಭಾಗಾಧಿಕಾರಿಯಾಗಿ ವಕ್ಕರಿಸಿದ್ದಾನೆ.

ದಾವಣಗೆರೆ

1984 ರಲ್ಲಿ ಸರ್ಕಾರಿ ಕೆಲಸಕ್ಕೆ ಸೇರಿ ಸುಮಾರು 2 ಕೋಟಿ ಮೌಲ್ಯದ ಅಕ್ರಮ ಆಸ್ತಿಯನ್ನು ಗಳಿಸಿ ಸಿಕ್ಕಿಬಿದ್ದ ಸಿದ್ದಪ್ಪ ಇಷ್ಟು ಬೇಗ ಎದ್ದುಬಿದ್ದಾಗಿ ವಕ್ಕರಿಸಲು ರಾಜಕಾರಣಿಗಳ ಬೆಂಬಲವಿಲ್ಲದೆ ಸಾಧ್ಯವಾದೀತೆ? ಈ ಮೊದಲು ಹಾಲಿ ಶಾಸಕ ಶಾಮನೂರು ಶಿವಶಂಕರಪ್ಪನ ಪಾಳೆಯದಲ್ಲಿದ್ದ ಸಿದ್ದ ಕಾಯಾ ವಾಚಾ ಮನಸಾ ಬೆಂಬಲ ನೀಡಿ ಚುನಾವಣೆಯ ಸಂದರ್ಭದಲ್ಲಿ ಅನೇಕ ಅಕ್ರಮಗಳನ್ನು ಮಾಡಿ ಶಿವಶಂಕರಪ್ಪನಿಗೆ ಸಹಕರಿಸಿದ್ದ. [illegible] ನಗರಸಭೆಯ ಒಟ್ಟು 35 ಸದಸ್ಯರಲ್ಲಿ 32 [illegible] ಸದಸ್ಯರನ್ನು ಗೆಲ್ಲಿಸಿದ್ದ [illegible] ಆದರೆ ಶಿವಶಂಕರಪ್ಪನ ಪಾಳೆಯದ [illegible] ಅಕ್ರಮಗಳಿಗೂ ಕುಮ್ಮಕ್ಕು ಬೆಂಬಲಿಸಬೇಕಾದ [illegible] ಪಾಳೆಯಕ್ಕೆ ಜಿಗಿದುಬಿಟ್ಟ. (ಈ ಕಾರಣಕ್ಕೆ ಇವನ ಮನೆಯ ಮೇಲೆ ಲೋಕಾಯುಕ್ತರ ರೈಡು ನಡೆಯಿತೆಂದು ಹೇಳಲಾಗುತ್ತಿದೆ) ಈಗ ಶಿವಶಂಕರಪ್ಪನ ಪಾಳೆಯದ ವಿರುದ್ಧ ಸಿದ್ದಪ್ಪನನ್ನು ಬಳಸಿಕೊಳ್ಳಬಹುದೆಂಬ ಕಾರಣಕ್ಕಾಗಿಯೇ ಶಿವಪ್ಪನ ಮಕ್ಕಳು ಶತಪ್ರಯತ್ನ ಮಾಡಿ ಸಿದ್ದಪ್ಪನನ್ನು ದಾವಣಗೆರೆಯಲ್ಲಿಯೇ ನೆಲೆಗೊಳಿಸಿದ್ದಾರೆನ್ನಲಾಗಿದೆ.

ಮತ್ತೊಂದು ಹೊಸ ಕೇಸು

ಈ ಮಧ್ಯೆ 27.4.2006 ರಂದು ಸಿದ್ದಪ್ಪನ ಮೇಲೆ ಬಡಾವಣೆ ಪೋಲೀಸ್ ಠಾಣೆಯಲ್ಲಿ ಮತ್ತೊಂದು ಕೇಸು (ಕ್ರೈಂ. ನಂ. 77/06) ಫಿಟ್ ಆಗಿದೆ. ಸಿದ್ದಪ್ಪ 'DUDA'ದ ಕಮಿಷನರ್ ಆಗಿದ್ದಾಗ ನಗರದ ನಿಜಲಿಂಗಪ್ಪ ಲೇಔಟನಲ್ಲಿನ ಚದರ ಅಡಿಗೆ 250 ರೂ ಬೆಲೆ ಬಾಳುವ 22 ಕಾರ್ನರ್ ಸೈಟುಗಳನ್ನು ಇಲ್ಲಿನ ರಾಜಕಾರಣಿಗಳಿಗೆ ಹಾಗೂ ಹಣವಂತರಿಗೆ ಒಂದು ಚದರಡಿಗೆ ಕೇವಲ 30-35 ರೂ.ನಂತೆ ಕೊಟ್ಟು ಸಿಕ್ಕಿ ಹಾಕಿಕೊಂಡಿದ್ದಾನೆ. ಹಾಲಿ ಶಾಸಕ ಶಾಮನೂರು ಶಿವಶಂಕರಪ್ಪ ಈ ವಿಷಯವನ್ನು [illegible] ನಗರ [illegible] ಪಾಧಿಕಾರಕ್ಕೆ ದೂರು ನೀಡಿದಾಗ ಈ ಬಗ್ಗೆ ತನಿಖೆ ನಡೆದು ಅವ್ಯವಹಾರ ನಡೆದಿರುವುದು ಕಂಡುಬಂದ ನಂತರ, ಜಿಲ್ಲಾಧಿಕಾರಿಯ ಆದೇಶದ ಮೇರೆಗೆ 'ದುಡ'ದ ಕಮಿಷನರ್ ಬಾಲಕೃಷ್ಣ ಈ ಅಕ್ರಮದ ವಿರುದ್ಧ ಸಿದ್ದಪ್ಪನ ಮೇಲೆ ದೂರು ನೀಡಿದ್ದಾರೆ. ಲೋಕಾಯುಕ್ತರಿಗೆ ಮಾಲು ಸಮೇತ ಸಿಕ್ಕಿಬಿದ್ದ 4-5 ತಿಂಗಳಲ್ಲೇ ಮತ್ತೊಂದು ಹಗರಣದಲ್ಲಿ ಈತ ಸಿಕ್ಕಿ ಬೀಳುತ್ತಾನೆಂದರೆ ಇವನಿನ್ನೆಂತಹ ಪರಮ ಪಾತಕ ದೇಶಭಕ್ತನಿರಬಹುದು!



ಈ ಕೇಸು ಹಳ್ಳ ಹಿಡಿಯುತ್ತದಾ?

ಜಿಲ್ಲಾ ಲೋಕಾಯುಕ್ತರು '1-23 ಷೆಡ್ಯೂಲ್, ಅನೆಕ್ಸರ್ ಎ' ಪ್ರಕಾರ ಪಟ್ಟಿ ಮಾಡಿದ ಎಲ್ಲಾ ಆರೋಪಗಳಿಗೆ ಮೂರು ತಿಂಗಳೊಳಗಾಗಿ ಉತ್ತರಿಸಲು ಸಿದ್ದನಿಗೆ ಗಡುವು ನೀಡಿದ್ದರು. ಆದರೆ ಲೋಕಾಯುಕ್ತರ ಆರೋಪಗಳಿಗೆ ಸಿದ್ದಪ್ಪ ಇದುವರೆಗೆ ಕ್ಯಾರೇ ಅಂದಿಲ್ಲ; ಯಾವುದೇ ಉತ್ತರವನ್ನೂ ನೀಡಿಲ್ಲ. ಹೀಗೆ ಮತ್ತೆ ಕೊನೆಯದಾಗಿ 7 ತಿಂಗಳ ಗಡುವು ನೀಡಿ ಲೋಕಾಯುಕ್ತದವರು ಸಿದ್ದನಿಗೆ ನೋಟೀಸು ಕಳುಹಿಸಿದ್ದಾರೆ. ಬಹುಶಃ ಇವನು ಇದಕ್ಕೂ ಉತ್ತರಿಸಲಾರ. ಆದರೆ ಸಿದ್ದಪ್ಪನ ಕುರಿತ ಎಲ್ಲ ದಾಖಲೆಗಳನ್ನು ಗುಡ್ಡೆ ಹಾಕಿಕೊಂಡು ಅಂತಿಮ ವರದಿ ನೀಡಲು ಲೋಕಾಯುಕ್ತ ಎಸ್ಪಿ ಕೆ.ಎಸ್. ನಾಯಕ್ ತಯಾರಾಗುತ್ತಿದ್ದಾರಾದರೂ ಈ ಕೇಸೂ ಹಳ್ಳ ಹಿಡಿಯುತ್ತದೇನೋ ಎಂಬ ಅನುಮಾನ ಶುರುವಾಗಿದೆ.

ಪ್ರಾಸಿಕ್ಯೂಷನ್ ಪರ್ಮಿಷನ್ ಎಂಬ ಭೂತ

[illegible] 2004 [illegible] ಪ್ರಸಾದ್ ಎಂಬ ಎಕ್ಸಿಕ್ಯೂಟಿವ್ ಇಂಜಿನಿಯರ್ ಮನೆಯ ಮೇಲೆ ಇದೇ ಲೋಕಾಯುಕ್ತ ರೈಡ್ ಮಾಡಿ ಅಪಾರ ಪ್ರಮಾಣದ ಅಕ್ರಮ ಆಸ್ತಿಯನ್ನು ಪತ್ತೆ ಹಚ್ಚಿದ್ದರು. ಆದರೆ ರೇಣುಕಾ ಪ್ರಸಾದನ ಮೇಲೆ ಇದುವರೆಗೂ ಚಾರ್ಜ್‌ಶೀಟ್ ಹಾಕಲು ಸಾಧ್ಯವಾಗಿಲ್ಲ. ಕಾರಣವೇನೆಂದರೆ ಚಾರ್ಜ್‌ಶೀಟ್ ಹಾಕಲು ಇದುವರೆಗೂ ಪ್ರಾಸಿಕ್ಯೂಷನ್ ಪರ್ಮಿಷನ್ ಸಿಕ್ಕಿಲ್ಲ. ಆದರೆ ಈ ಮಧ್ಯೆಯೇ ರೇಣುಕಾ ಪ್ರಸಾದ ಮಾತ್ರ ಡಬಲ್ ಪ್ರಮೋಷನ್ ಗಿಟ್ಟಿಸಿ ಈಗ ದಾವಣಗೆರೆ 'ದುಡ'ದಲ್ಲಿ ಪ್ಲಾನಿಂಗ್ ಡೈರೆಕ್ಟರ್ ಆಗಿದ್ದಾರೆ. ಈಗ ಲೋಕಾಯುಕ್ತರ ಯಾವ ಆರೋಪಗಳಿಗೂ ಉತ್ತರಿಸದ ಸಿದ್ದ ಮತ್ತೆ ದಾವಣಗೆರೆಗೇ ಅಮರಿಕೊಂಡಿದ್ದಾನೆ. ಸಿದ್ದನ ಕುರಿತ ಆರೋಪಗಳ ಮೇಲೆ ಚಾರ್ಜ್‌ಶೀಟ್ ಹಾಕಲು ಸಂಬಂಧಪಟ್ಟವರು ಇದೇ ರೀತಿ 'ಸಹಕಾರ ನೀತಿ'ಯನ್ನು ಅನುಸರಿಸಿದರೆ ಸಿದ್ದಪ್ಪನೂ ಶರವೇಗದಲ್ಲಿ ಪ್ರಮೋಷನ್ ಪಡೆಯಬಲ್ಲ, ಸಿದ್ದಪ್ಪನ ನಂತರ ರೈಡಿಗೊಳಗಾದ ಹನುಮಂತ ರೆಡ್ಡಿಯೂ ಸಿದ್ದು ಹೊಡೆಯಬಲ್ಲ.

ಲೋಕಾಯುಕ್ತರು ಚಾರ್ಜ್‌ಶೀಟ್ ಹಾಕಲು ಸಂಬಂಧಪಟ್ಟ ಇಲಾಖೆಯ ಮುಖ್ಯ ಕಾರ್ಯದರ್ಶಿಯ ಅನುಮತಿ ಪಡೆಯಬೇಕಾಗುತ್ತದೆ. ಈ ಅನುಮತಿಯನ್ನು ನೀಡಲು ಅಧಿಕಾರಶಾಹಿ ವರ್ಗ ಬೇಕಂತಲೇ ವಿಳಂಬ ಮಾಡುತ್ತಿದ್ದರೂ ಸರ್ಕಾರ ಏಕೆ ಸುಮ್ಮನಿದೆ? ದೊಡ್ಡ ಹುದ್ದೆಯಲ್ಲಿರುವ ಸಿದ್ದಪ್ಪನ ಇತ್ತೀಚಿನ ಹಲಾಲುಕೋರ ಕೆಲಸಗಳಾವುವೂ [illegible] ರದ ಗಮನಕ್ಕೆ [illegible]

[illegible]

ಒಂದು ಕೊಲೆಯ ರಾಜಕೀಯ

ಕಾವಡಿ ಕೃಷ್ಣಯ್ಯ ಪಾಟಾಳಿ ಏನು ತಪ್ಪು ಮಾಡಿದರು ಎಂದು ಭಜರಂಗಿಗಳು ಅವರ ಮೇಲೆ ಹಲ್ಲೆ ನಡೆಸಿ ಕೊಂದು ಹಾಕಿದರು? ಹಿಂದೂವೊಬ್ಬ ದನದ ವ್ಯಾಪಾರ ಮಾಡಕೂಡದು ಎಂಬ ಕಾನೂನು ಇದೆಯಾ? ದನದ ವ್ಯಾಪಾರ, ಸಾಗಾಟಗಳನ್ನು ಮಾಡುತ್ತಿದ್ದ ಮುಸ್ಲಿಮರನ್ನು ಈ ಭಜರಂಗಿಗಳು ಕರಾವಳಿಯ ಹೆದ್ದಾರಿಗಳಲ್ಲೇ ತಡೆದು ನಿಲ್ಲಿಸಿ, ಲೂಟಿ ಮಾಡಿ, ಹೊಡೆದು ಬಡಿದು ಮಾಡುತ್ತಿದ್ದಾಗ ಈ ಪ್ರಶ್ನೆ ಯಾರನ್ನೂ ಕಾಡಿರಲಿಲ್ಲ.

ಜಿ.ರಾಜಶೇಖರ್, ಕೆ.ಫಣಿರಾಜ್ ◆

"ಭಜರಂಗದಳವೇ ಇಲ್ಲಿ ಪೋಲೀಸು, ಕಾನೂನು, ಸರ್ಕಾರ ಎಲ್ಲವೂ ಅಂತ ಒಂದು ಆರ್ಡರ್ ಹಾಕಿಬಿಡಲಿ; ಆಮೇಲೆ ಇವರು ಏನು ಮಾಡಿದರೂ ಸರಿ ಎಂದು ಬಾಯಿ ಮುಚ್ಚಿಕೊಂಡು ಇರುವ...." ಕೈಲಾಗದವನ ಸಿಟ್ಟಿನ ಈ ಬಗೆಯ ಮಾತುಗಳನ್ನು ಕರಾವಳಿಯ ಉಡುಪಿ, ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಕಳೆದ ಹಲವು ವರ್ಷಗಳಿಂದ ಮುಸ್ಲಿಮರು ತಮಗೆ ತಾವೇ ಹೇಳಿಕೊಳ್ಳುತ್ತಿದ್ದಾರೆ. ಆದರೆ ಮೊನ್ನೆ, ನಮಗೆ ಈ ಮಾತನ್ನು ಯಥಾವತ್ ಅದೇ ಶಬ್ದಗಳಲ್ಲಿ ಹೇಳಿದವರು, ಉಡುಪಿ ಜಿಲ್ಲೆ ಕಸಬಾ ತಾಲೂಕು ಕಾವಡಿ ಗ್ರಾಮದ ಪಾಟಾಳಿ ಕೃಷ್ಣಯ್ಯ ಅವರ ಹಿರಿ ಮಗ ರಮೇಶರಾವ್. ಅದಕ್ಕೆ ಮೂರು ದಿನಗಳ ಮೊದಲು, ಮೇ 24, ಬುಧವಾರ ರಾತ್ರಿ, ಭಜರಂಗದಳದ ಉಡುಪಿ ಜಿಲ್ಲಾ ಕಾರ್ಯದರ್ಶಿ ಕುಮಾರಸ್ವಾಮಿ, ಕಾವಡಿಗ್ರಾಮದ ಭಜರಂಗದಳ ಶಾಖೆಯ ಕಾರ್ಯದರ್ಶಿ ಕೃಷ್ಣ ಶ್ಯಾನುಭಾಗ ಮತ್ತು ಸುಮಾರು 15 ಯುವಕರು ಒಟ್ಟಾಗಿ ರಮೇಶರಾವ್ ಅವರ ತಂದೆ ಮೇಲೆ ರಾಡು, ದೊಣ್ಣೆಗಳಿಂದ ಹಲ್ಲೆ ಮಾಡಿ, ಕಸ ಪೊರಕೆಯಿಂದ ಸಹ ಹೊಡೆದು, "ಹಿಂದೂವಾಗಿ ದನದ ವ್ಯಾಪಾರ ಮಾಡುತ್ತೀಯಾ?" ಎಂದು ಹೀಯಾಳಿಸಿ, ಹೋಗಿದ್ದರು. 70ರ ಹರೆಯದ ಕೃಷ್ಣಯ್ಯ ಪಾಟಾಳಿ, ಎರಡು ದಿನಗಳ ನಂತರ ಮಣಿಪಾಲದ ಆಸ್ಪತ್ರೆಯಲ್ಲಿ ತೀರಿಕೊಂಡರು. ಈ ಸಾವಿನೊಂದಿಗೆ, ಕರಾವಳಿಯಲ್ಲಿ ಸಂಘ ಪರಿವಾರದ ಹಿಂಸಾಸರಣಿಗೆ ಹೊಸತೊಂದು ಕೊಲೆ ಸೇರ್ಪಡೆಯಾಯಿತು.

ಕಾವಡಿ, ಉಡುಪಿ ತಾಲೂಕು ಕೋಟ ಪೋಲೀಸ್ ಠಾಣೆಯ ವ್ಯಾಪ್ತಿಯೊಳಗೆ ಬರುವ ಒಂದು ಗ್ರಾಮ. ಸಾಲಿಗ್ರಾಮ-ಮಂದರ್ತಿ ಹೆದ್ದಾರಿಯಲ್ಲಿ ಕಾರ್ಕಡ ಮತ್ತು ವಡ್ಡರ್ಸೆಗಿಂತ ಸ್ವಲ್ಪ ಮುಂದೆ ಸಿಗುವ ಕಾವಡಿಯ ಹವರಾಲು ಎಂಬ ಜಾಗದಲ್ಲಿ ಪಾಟಾಳಿ ಕೃಷ್ಣಯ್ಯನವರ ಮನೆ; ಅದಕ್ಕೆ ಸಮೀಪದಲ್ಲೇ ಅವರು ಲಾಗಾಯ್ತಿನಿಂದ ಪರಿಚಾರಕರಾಗಿ ಕೆಲಸ ಮಾಡುತ್ತಿದ್ದ ಮಹಲಿಂಗೇಶ್ವರ ದೇವಸ್ಥಾನ. ಕಳೆದ ಬುಧವಾರ ರಾತ್ರಿ ಸುಮಾರು 10 ಗಂಟೆಯ ಹೊತ್ತಿಗೆ ಕೃಷ್ಣಯ್ಯ ಚಾಪೆ ಹಾಸಿ ಮಲಗಲು ಅಣಿಯಾಗುತ್ತಿದ್ದಂತೆ ಕುಮಾರಸ್ವಾಮಿ ಮತ್ತು ಕೃಷ್ಣ ಶ್ಯಾನುಭಾಗ 'ನಿಮ್ಮ ಹತ್ತಿರ ಮಾತಾಡುವುದಿದೆ' ಎಂದು ಹೊರಗೆ ಕರೆದುಕೊಂಡು ಹೋಗಿ, ಅವರ ಮನೆಯಿಂದ ಸ್ವಲ್ಪ ದೂರದಲ್ಲಿ ಅವರ ಮೇಲೆ ಹಲ್ಲೆ ನಡೆಸಿದ್ದಾರೆ.




ಯೆಡ್ತಾಡಿ ಕಂಬಳದ ಪ್ರಶಸ್ತಿಯೊಂದಿಗೆ ಪಾಟಾಳಿ ಕೃಷ್ಣಯ್ಯ

ಸುಮಾರು 30-35 ವರ್ಷ ಪ್ರಾಯದ ಕುಮಾರ ಸ್ವಾಮಿ ಮತ್ತು ಕೃಷ್ಣ ಶ್ಯಾನುಭಾಗ ಅದೇ ಗ್ರಾಮದವರು; ಕೃಷ್ಣಯ್ಯನವರ ಜಾತಿಗೇ ಸೇರಿದವರು ಮತ್ತು ಅವರಿಗೆ ಮೊದಲಿನಿಂದಲೂ ಪರಿಚಿತರು. ಕುಮಾರಸ್ವಾಮಿ ಕಾವಡಿಗೆ ಹತ್ತಿರದ ಬಾರಕೂರಿನಲ್ಲಿ ವೆಲ್ಡಿಂಗ್ ಶಾಪ್ ನಡೆಸಿಕೊಂಡಿದ್ದಾನೆ; ಜೊತೆಗೆ ಬಾರಕೂರು ಬ್ರಹ್ಮಾವರ ಪರಿಸರದಲ್ಲಿ ರೋಲ್‌ಕಾಲ್ ಮಾಡುತ್ತಾನೆ ಎಂದು ಕೂಡ ಪ್ರತೀತಿ. ಕೃಷ್ಣ ಶ್ಯಾನುಭಾಗ, ಕಾವಡಿಗೆ ಸಮೀಪದ ಯೆಡ್ತಾಡಿಯಲ್ಲಿ ಒಂದು ಹೋಟೆಲು ನಡೆಸಿಕೊಂಡಿದ್ದಾನೆ. ಆ ಹೋಟೆಲಿನ ಹೆಸರೇ ಅವನಿಗೂ ಅಂಟಿಕೊಂಡಿದ್ದು ಊರಿನಲ್ಲಿ ಎಲ್ಲರೂ ಅವನನ್ನು ... ಶ್ಯಾನುಭಾಗ ಎಂದೇ ಕರೆಯುತ್ತ... ಇದರ ವ್ಯಂಗ್ಯ ನೋಡಿ! ಹೋ... ಇಟ್ಟ ಬ್ರಾಹ್ಮಣ ಮತ್ತು ವೆ... ಶಾಪ್ ನಡೆಸುವ ಇನ್ನೊಬ್ಬ ಬ್ರಾ... ಗುಂಪು ಕಟ್ಟಿಕೊಂಡು ಬಂದು... ಊರಿನ ದೇವಸ್ಥಾನದ ... ಮಾಡಿಕೊಂಡಿದ್ದ 70ರ ಹರೆ... ಬ್ರಾಹ್ಮಣನೊಬ್ಬನಿಗೆ "ಹ... ಹಿಂದೂವಾಗಿ ದನದ ವ್ಯಾ... ಮಾಡುತ್ತೀಯಾ?" ಎಂದು ... ಹೊಡೆದು ಅವರ ಪ್ರಾಣ ತೆಗೆದಿ... ಆದರೆ ಈ ಸನ್ನಿವೇಶದ ವ್ಯಂಗ್ಯ ಇ... ಮುಗಿಯುವುದಿಲ್ಲ.

ಕೃಷ್ಣಯ್ಯ ಪಾಟಾಳಿ ಕಾವಡಿ ಗ... ಮಾತ್ರವಲ್ಲ ಸುತ್ತಮುತ್ತಲಿನ ಯೆ... ಶಿರಿಯಾರ, ಸ್ಯಾಬರ ಕಟ್ಟೆ, ಬಾರಕೂ... ಪರಿಸರದಲ್ಲಿ ಒಬ್ಬ ಜನಪ್ರಿಯ ... ಇಂಗ್ಲಿಷ್‌ನಲ್ಲಿ "Rooted a... rooted tree" ಎಂಬ ಮಾ... ಕೃಷ್ಣಯ್ಯ ಅವರ ಹುರಿಮೀಸೆಯಿಂ... ಅವರಿಗೆ ಮೀಸೆ ಕೃಷ್ಣಯ್ಯ ... ಹೆಸರೂ ಅಂಟಿಕೊಂಡಿತ್ತು- ಆ ಮಾತಿಗೆ ... ದೃಷ್ಟಾಂತವೆಂಬಂತಿದ್ದರು. ಮಹಲಿಂಗೇಶ್ವರ ದೇವಸ್ಥಾ... ಪರಿಚಾರಿಕೆಯ ಜೊತೆ ಅವರು ಆ ಗ್ರಾಮದ ಭ... ಮಂಡಳಿಯ ನಿರ್ವಾಹಕರೂ ಆಗಿದ್ದರು. ಅವರ ಭ... ಮಂಡಳಿ ಉಡುಪಿ ಕೃಷ್ಣ ಮಠದ ಭಜನಾ ... ಗಳಲ್ಲೂ ಭಾಗವಹಿಸಿ ಪ್ರಶಸ್ತಿ ಪಡೆದುಕೊಂಡಿ... (ಆದರೆ ಉಡುಪಿಯ ಅಷ್ಟಮಠಗಳ ಯಾ... ಯತಿಯೂ ಇವರ ನಿಧನದ ಬಗ್ಗೆ ಸಂತಾಪ ಸೂಚ... ಹಾಗೆ ಇಲ್ಲ!) ಕೃಷ್ಣಯ್ಯ ಒಬ್ಬ ಯಕ್ಷಗಾನ ವೇಷ... ಕೂಡ. ಕಾವಡಿಯ ವಾಣಿ ಯಕ್ಷಗಾನ ... ಮಂಡಳಿಯಲ್ಲೂ ಅವರು ಒಬ್ಬ ಪದಾಧಿಕಾರಿ.

ಕೃಷ್ಣಯ್ಯನವರ ವ್ಯಕ್ತಿತ್ವದ ಶ್ರದ್ಧೆ ಮತ್ತು ರಸಿಕ... ಹಾಗೆ ಊರಿನ ದಿನನಿತ್ಯದ ಬದುಕಿನಲ್ಲಿ ಅ...



ಮುಸ್ಲಿಂ ಯುವತಿಯರ ಮಾರಾಟದ ವಿರುದ್ಧ 'ಶಹೀನ್'!

ಮುಸ್ಲಿಂ ಮಹಿಳೆಯರನ್ನು ಎಷ್ಟೊಂದು ಕತ್ತಲಲ್ಲಿಟ್ಟಿದ್ದಾರೆಂ... ಮುಸ್ಲಿಂ ವ್ಯಕ್ತಿ ನಿಯಮವೆಂದರೇನೆಂದೇ ಪದವೀಧರ ಹೆಣ್ಣುಮಕ್ಕಳಿಗೆ ತಿಳಿಯದು! ಮಹಿಳೆಯರ ಈ ಅಜ್ಞಾನವೇ ಧಾರ್ಮಿಕ ಮುಖಂಡರ ಬಂಡವಾಳ. ಈ... ಈ ಮಹಿಳೆಯರಲ್ಲೂ ಎಚ್ಚರ ಮೂಡುತ್ತಿರುವುದು ಹಾಗೂ ಸಮಾಜದ ಪುರುಷರೂ ಕೂಡ ಈ ಶೋಷಣೆಯ ವಿರುದ್ಧ ಧ್ವ... ಎತ್ತುತ್ತಾ ಮಹಿಳೆಯರೊಡನೆ ಜೋಡಿಸುತ್ತಿರುವುದು ಆಶಾದಾಯಕ ಬೆಳವಣಿಗೆಯಾಗಿದೆ.

ಕಳೆದ ಡಿಸೆಂಬರ್ ತಿಂಗಳಲ್ಲಿ ಹೈದ್ರಾಬಾದಿನಲ್ಲಿ ಹೈದರಾಬಾದ್ ಬುಕ್ ಟ್ರಸ್ಟ್‌ನ ಆಶ್ರಯದಲ್ಲಿ ಮುಸ್ಲಿಂ ಸಾಹಿತ್ಯ ಸಮ್ಮೇಳನವೊಂದು ಜರುಗಿತು. ಇದರ ಉದ್ಘಾಟನೆಗೆ ನನ್ನನ್ನು ಆಮಂತ್ರಿಸಲಾಗಿತ್ತು. ಈ ಸಂದರ್ಭದಲ್ಲಿ ಅಲ್ಲಿನ ಮುಸ್ಲಿಂ ಮಹಿಳೆಯರ ಕಿರು ಪರಿಚಯವೊಂದು ನನಗೆ ದೊರೆಯಿತು. ಇತ್ತೀಚೆಗೆ ಧರ್ಮದ ಹೆಸರಿನಲ್ಲಿ ಮುಸ್ಲಿಂ ಮಹಿಳೆಯರ ಮೇಲೆ ನಡೆಯುತ್ತಿರುವ ದೌರ್ಜನ್ಯಗಳ ಹಿನ್ನೆಲೆಯಲ್ಲಿ ಈ ಸಮಾವೇಶವನ್ನು ಹಮ್ಮಿಕೊಳ್ಳಲಾಗಿತ್ತು. ಪ್ರಗತಿಪರ ಚಿಂತನೆಗಳನ್ನು ಮೈಗೂಡಿಸಿಕೊಂಡು ಹೊಸ ಪ್ರಗತಿಪರ ಒಂದು ವಿಧದ ಮೇಲರಿಮೆ ಇದೆ. ತೆಲುಗು ಮುಸ್ಲಿಮರ ಈ ಚಿಂತನಾ ಸಭೆಗೆ ಇವರು ಉರ್ದು ಮುಸ್ಲಿಮರನ್ನು ಆಮಂತ್ರಿಸಿದ್ದರೂ ಅವರು ಯಾರೂ ಈ ಕಡೆ ಸುಳಿಯಲಿಲ್ಲ. ಆದರೆ ಈ ತೆಲುಗು ಮುಸ್ಲಿಮರು ಮತ್ತು ದಲಿತರು ಒಂದಾಗಿದ್ದಾರೆ. ಈ ಎರಡು ಸಮುದಾಯಗಳೂ ಸಮಾನವಾಗಿ ತುಳಿತಕ್ಕೊಳಗಾದವರಾಗಿದ್ದು ಅದರ ವಿರುದ್ಧ ಹೋರಾಡಬೇಕಾದ ಅಗತ್ಯತೆಯು ಇವರನ್ನು ಸಮೀಪ ತಂದಿರಬಹುದು. ಆದರೂ ಇದೊಂದು ಉತ್ತಮ ಪ್ರಾರಂಭವೆಂದು ನನಗನ್ನಿಸಿತು.

ಗಳ ಕುರಿತೂ ಚಿಂತನೆ ನಡೆಯಿತು.

ಈ ಸಮಾವೇಶಕ್ಕೆ ಉರ್ದು ಮುಸ್ಲಿಮರು ಬರದಿದ್ದರೂ ಇವರ ಒಂದು ಮಹಿಳಾ ಸಮಾಜಕ್ಕೆ ನನ್ನನ್ನು ಕರೆದೊಯ್ದು ಕೆಲವು ಮಹಿಳೆಯರ ಪರಿಚಯ ಮಾಡಿಸಿದರು. ಗಂಡನ ದೌರ್ಜನ್ಯದಿಂದ ಅರ್ಧ ಮೂಗೇ ಇಲ್ಲದೆ ಮುಖ ವಿಕಾರವಾಗಿ ಕಾಣುತ್ತಿದ್ದ ಮುಸ್ಲಿಂ ಮಹಿಳೆಯೋರ್ವಳನ್ನು ನನಗೆ ಪರಿಚಯಿಸಿದರು. ಇಲ್ಲಿ ನಾನು ಕಂಡ ಈರ್ವರು ಚಿಕ್ಕ ಪ್ರಾಯದ ಹೆಣ್ಣುಮಕ್ಕಳ ಅನುಭವ ಬಹಳ ಕುತೂಹಲಕಾರಿಯಾಗಿತ್ತು.

ಸಂಘಟನೆಯೊಂದನ್ನಾರಂಭಿಸುವುದು ಕೂಡಾ ಈ ಸಮಾವೇಶದ ಉದ್ದೇಶವಾಗಿತ್ತು. ನನ್ನ 'ಚಂದ್ರಗಿರಿ ತೀರದಲ್ಲಿ' ಕಾದಂಬರಿಯ ತೆಲುಗು ಅನುವಾದವನ್ನು ಓದಿದ ಈ ಜನರು ಈ ಸಮಾವೇಶಕ್ಕೆ ನನ್ನನ್ನು ಆಮಂತ್ರಿಸಿದ್ದರು.

ಮುಸ್ಲಿಂ ಸಂಸ್ಕೃತಿ ಮತ್ತು ಉರ್ದು ಭಾಷೆಯ ಎರಡನೇ ತವರು ನೆಲವೆಂದೇ ಕರೆಸಿಕೊಳ್ಳುವ ಹೈದ್ರಾಬಾದಿನಲ್ಲಿ ಉರ್ದು ಓದಲು, ಬರೆಯಲು ಮತ್ತು ಮಾತನಾಡಲು ಕೂಡಾ ತಿಳಿಯದ ಮುಸ್ಲಿಮರಿದ್ದಾರೆ ಅಂದರೆ ನಂಬಲು ಕಷ್ಟವಾಗಬಹುದು. ಆದರೆ ಅದು ನಿಜ. ಈ ಜನರ ಮಾತೃಭಾಷೆ ತೆಲುಗು. ಇವರು ಶಿಕ್ಷಣಕ್ಕಾಗಿ ಮೆಚ್ಚಿಕೊಂಡದ್ದೂ ತೆಲುಗು ಭಾಷೆಯನ್ನೇ. ಹೀಗಾಗಿ ಇವರು ಉರ್ದು ಭಾಷೆಯಿಂದ ದೂರವಾಗಿಯೇ ಇದ್ದಾರೆ. ಈ ಕಾರಣದಿಂದಾಗಿಯೇ ಇವರು ಒಂದೇ ಧರ್ಮಾನುಯಾಯಿಗಳಾಗಿದ್ದರೂ ಭಾಷೆಯಿಂದ ಇವರು ಬೇರ್ಪಟ್ಟಿದ್ದಾರೆ. ಉರ್ದು ಮುಸ್ಲಿಮರಲ್ಲಿ

ಅಲ್ಲಿ ಭಾಷೆಯ ತೊಡಕು ನನ್ನನ್ನೂ ಕಾಡಿದರೂ ನಾನು ಭಾಷಣವನ್ನು ಇಂಗ್ಲಿಷಿನಲ್ಲಿಯೇ ಸಿದ್ಧಪಡಿಸಿಕೊಂಡೊಯ್ದಿದ್ದರಿಂದ ನನ್ನ ವಿಚಾರ ಮಂಡನೆಗೆ ನನಗೆ ತೊಡಕಾಗಲಿಲ್ಲ. ಆದರೆ ಇಲ್ಲಿ ಸೇರಿದ್ದ ಹಲವರು ಪದವೀಧರರಾಗಿದ್ದರೂ ತೆಲುಗು ಮಾಧ್ಯಮದಲ್ಲಿ ಓದಿದ್ದ ಇವರಿಗೆ ಇಂಗ್ಲಿಷ್‌ನಲ್ಲಿ ಮಾತನಾಡಲು ಕಷ್ಟವಾಗುತ್ತಿತ್ತು.

ಪ್ರಗತಿಪರ ಮುಸ್ಲಿಮರ ಸಂಘಟನೆಯೊಂದು ಇಂದಿನ ಅವಶ್ಯಕತೆಯಾಗಿದೆಯೆಂದು ಅಲ್ಲಿ ಸೇರಿದವರೆಲ್ಲರೂ ಅಭಿಪ್ರಾಯಪಟ್ಟರು. ಬುರ್ಖಾದ ಕುರಿತ ಖುರ್‌ಆನ್ ವಾಕ್ಯ ಇಂದಿನ ಮೂಲಭೂತವಾದಿಗಳು ಇದನ್ನು ಮಹಿಳೆಯರ ಮೇಲೆ ಕಡ್ಡಾಯಗೊಳಿಸಿದ್ದು ಹಾಗೂ ಇಂದು ಮುಸ್ಲಿಂ ಸಮಾಜದಲ್ಲಿ ಹರಡಿರುವ ಬಹುಪತ್ನಿತ್ವ ಹಾಗೂ ಸುಲಭದ ವಿವಾಹ ವಿಚ್ಛೇದನ ಪದ್ಧತಿ ಮುಂತಾದ ಎಲ್ಲ ವಿಷಯಗಳೂ ಅಲ್ಲಿ ಚರ್ಚಿಸಲ್ಪಟ್ಟವು. ಬಡತನದಿಂದಾದ ಶೈಕ್ಷಣಿಕ ಹಿಂದುಳಿದಿರುವಿಕೆ, ಕುಟುಂಬ ಯೋಜನೆಯ ಅಗತ್ಯ ಮುಂತಾದ ವಿಷಯ

ಹೈದರಾಬಾದಿನಲ್ಲಿ ಈಗಲೂ ಕೊಲ್ಲಿ ರಾಷ್ಟ್ರಗಳಿಂದ ಮುದುಕರು ಬಂದು ಚಿಕ್ಕ ಪ್ರಾಯದ ಹುಡುಗಿಯರನ್ನು ಮದುವೆಯಾಗುವ ದಂಧೆ ಅವ್ಯಾಹತವಾಗಿ ನಡೆಯುತ್ತಲೇ ಇದೆ. ಇದಕ್ಕಾಗಿ ಸಾಕಷ್ಟು ಮಧ್ಯವರ್ತಿಗಳು ಕಾರ್ಯೋನ್ಮುಖರಾಗುತ್ತಲೇ ಇದ್ದಾರೆ. ಈ ಮುದುಕರು ನೀಡುವ 25,000 ರೂಪಾಯಿಗಳಲ್ಲಿ 10,000 ರೂಪಾಯಿಗಳು ಈ ದಲ್ಲಾಳಿಗಳ ಪಾಲಾಗುತ್ತವೆ. ಉಳಿದ ಹತ್ತು ಅಥವಾ ಹದಿನೈದು ಸಾವಿರ ರೂಪಾಯಿಗಳಿಗಾಗಿ ಇಲ್ಲಿನ ಹೆಣ್ಣುಮಕ್ಕಳ ಹೆತ್ತವರು ತಮ್ಮ ಬಡತನದಿಂದಾಗಿ ಇವರನ್ನು ಆ ಮುದುಕರಿಗೆ ಮದುವೆ ಮಾಡಿ ಕೊಡುತ್ತಾರೆ. ಒಂದೆರಡು ವಾರ ಅಥವಾ ಆಕೆ ಗರ್ಭಿಣಿಯಾಗುವವರೆಗೆ ಆತ ಊರಲ್ಲಿದ್ದು ಬಳಿಕ, 'ನಿನಗೆ ಕೂಡಲೇ ವಿಸಾ ಕಳಿಸುವೆ' ಎಂದು ವಾಗ್ದಾನ ನೀಡಿ ಪರಾರಿಯಾಗುತ್ತಾನೆ. ಸರ್ಕಾರವಾಗಲಿ, ಸಮಾಜವಾಗಲಿ ಮುಸ್ಲಿಂ ಹೆಣ್ಣುಮಕ್ಕಳ ಈ ಸಮಸ್ಯೆಗೆ ಯಾವುದೇ ರೀತಿಯ ಪರಿಹಾರವನ್ನೂ ಒದಗಿಸುವುದಿಲ್ಲ. ಇಂತಹ ಮದುವೆಗಳು ಯಾವುದೇ ಪ್ರಚಾರವಿಲ್ಲದೆ, ಯಾರಿಗೂ ತಿಳಿಯದಂತೆ ಗುಟ್ಟಾಗಿ ನಡ... ಹೋಗುತ್ತವೆ. ದಲ್ಲಾಳಿಗಳು, ಮೌಲ್ವಿಗಳು ಹಾ... ಹುಡುಗಿಯ ತಂದೆತಾಯಿಗಳು ಗುಟ್ಟಾಗಿ ಈ ಮ... ನೆರವೇರಿಸುತ್ತಾರೆ.

ನಾನು ಅಲ್ಲಿಗೆ ಹೋಗುವ ಒಂದು ತಿಂಗಳ ... ಕೊಲ್ಲಿಯ ಮುದುಕನೊಬ್ಬನು ಒಂದೇ ರಾತ್ರಿ ... ಹೆಣ್ಣುಮಕ್ಕಳನ್ನು ಮದುವೆಯಾದನು. ಓರ್ವ ಹು... ಆತನ ಹೋಟೆಲ್ ಕೋಣೆ ಪ್ರವೇಶಿಸುವಾಗ, ಇನ್ನೋರ್ವ ವಧುವನ್ನು ಕಂಡು ಆಘಾತಗೊಂ... ಕೊನೆಗೆ ಇಬ್ಬರೂ ಹೊರಬಂದು ಪೋಲೀಸರನ್ನು ... ಆತನನ್ನು ಒಡಿಸಿದರು! ಹೀಗೆಯೇ ಇನ್ನೊ... ಮುದುಕ ಎರಡು ವಾರಗಳೊಳಗೆ ಮೂ... ಹುಡುಗಿಯರನ್ನು ಮದುವೆಯಾದನು. ತಮ್ಮ ಬಡ... ಅಜ್ಞಾನ, ಅನಕ್ಷರತೆ ಮಾತ್ರವಲ್ಲ ಧಾರ್... ಮುಖಂಡರ ಬೋಧನೆಯಿಂದ ಕುಟು... ಯೋಜನೆಯನ್ನೂ ಕೈಗೊಳ್ಳದ ಈ ಜನ... ಸಹಜವಾಗಿಯೇ ಸಾಕಷ್ಟು ಮಕ್ಕಳಿರುತ್ತಾ...

ಗಿಕೊಂಡಿದ್ದ ಬಗೆ ಕೂಡ ಸಮುದಾಯದ ಜೊತೆ
ಗೆ ಇದ್ದ ಸಜೀವ ಸಂಬಂಧವನ್ನೇ ಸೂಚಿಸುತ್ತದೆ.
ಕಾವಡಿ ಹಾಲು ಉತ್ಪಾದಕರ ಸಹಕಾರಿ ಸಂಘ
, ಶಿರಿಯಾರ ಸಹಕಾರಿ ಬ್ಯಾಂಕುಗಳ ನಿರ್ದೇಶಕ
ಕಾವಡಿ ಪ್ರೌಢಶಾಲೆಯ ಅಭಿವೃದ್ಧಿ ಸಮಿತಿಯ
ರಾಗಿದ್ದರು. ಅವರು ಮುತುವರ್ಜಿ ವಹಿಸಿ, ಇತರರ
ಸೇರಿ ಕಟ್ಟಿಸಿದ ಒರಣವಾದ ಕಾವಡಿ ಶಾಲೆಯ
ಂಗಣದಲ್ಲೇ ಅವರ ಮರಣದ ಶೋಕ ಸಭೆಯೂ
ದ್ದು ಈ ಪ್ರಸಂಗದ ಇನ್ನೊಂದು ದುರ್ಭರ ವ್ಯಂಗ್ಯ.

ಈ ಸಭೆಗೆ ಕಾವಡಿ
, ಆಸುಪಾಸಿನ
ಗಳ ಸುಮಾರು
ಜನ ಸೇರಿದ್ದರು.
ಲ್ಲಿ ಅರ್ಧದಷ್ಟು
ಳೆಯರೇ ಇದ್ದರು.
ಯ್ಯನವರ ಮಗಳು
ವತಿ, ಆ ಹಳ್ಳಿಯ
ಕ ಸೇವಾ ಸಮಿತಿ
ವಾಯನಕೆರೆ)
ಯ
ರ್ಗದರ್ಶಿಯಾದರೆ
ಶೋಭಾರಾವ್
ೇಶ್ ರಾವ್ ಪತ್ನಿ) ಆ
ರದ 25 ಸ್ತ್ರೀ ಶಕ್ತಿ
ಗಳ ಒಕ್ಕೂಟದ
. ಕೃಷ್ಣಯ್ಯ
ವಲ್ಲ ಅವರ ಇಡೀ
ಂಬ, ಹಳ್ಳಿಯ
ಸ್ತರಿಗೆ ಆಪ್ತವಾಗಿತ್ತು.
ಯ್ಯನವರ ಕಳೇಬರ
ಯಿಂದ ಮರಳಿದಾಗ,
ಮನೆ ಅಂಗಳದಲ್ಲಿ ಒಂದು ಸಾವಿರಕ್ಕೂ
ಜನ ಸೇರಿದ್ದರಂತೆ. ಭಜರಂಗಿಗಳ ಬಗ್ಗೆ
ಲ್ಲಿ ಕುದಿಯುತ್ತಿದ್ದ ಅವರು ಕುಮಾರಸ್ವಾಮಿ
ಸಿರಿ ಶ್ಯಾನುಭಾಗನ ಮನೆಗಳನ್ನು ಧ್ವಂಸ

ಸೌಹಾರ್ದ ವೇದಿಕೆ, ಉಡುಪಿ.

ಬಜರಂಗದಳದ ಅಮಾನುಷ ಕೃತ್ಯ

ಕಾವಡಿ ಗ್ರಾಮದ ಹಿರಿಯ ಶ್ರೀ ಕೃಷ್ಣಯ್ಯ ಅವರ ಕಗ್ಗೊಲೆ.
ಕರಾವಳಿಯಲ್ಲಿ ಹೆಚ್ಚುತ್ತಿರುವ ಬಜರಂಗಿಗಳ ಫ್ಯಾಸಿಸ್ಟ್ ಹಿಂಸೆಯನ್ನು ಪ್ರತಿಭಟಿಸಿರಿ.

ಉಡುಪಿ ತಾಲೂಕು ಕಾವಡಿ ಗ್ರಾಮದ ಸಾಮಾಜಿಕ ಕಾರ್ಯಕರ್ತರೂ ಸ್ಥಳೀಯ ಶ್ರೀ ಮಹಾಲಿಂಗೇಶ್ವರ ದೇವಳದ ಅರ್ಚಕರೂ ಆಗಿದ್ದ 70ರ ಹರೆಯದ ಶ್ರೀ ಕೃಷ್ಣಯ್ಯ ಅವರನ್ನು ಬಜರಂಗದಳದ ಪುಂಡರು ಕುಮಾರಸ್ವಾಮಿ ಮತ್ತು ಇತರರು ಇದೇ ತಾರೀಕು 24-5-2006ರ ಬುಧವಾರ ರಾತ್ರಿ ಮಾರಕ ಹಲ್ಲೆ ನಡೆಸಿ ಕೊಲೆ ಮಾಡಿರುವುದನ್ನು ನಾವು ತೀವ್ರವಾಗಿ ಖಂಡಿಸುತ್ತೇವೆ. ದಿವಂಗತರು ಪೊಲೀಸರ ಸಮಕ್ಷಮ ನೀಡಿರುವ ತಮ್ಮ ಮರಣ ಪೂರ್ವ ಹೇಳಿಕೆಯಲ್ಲಿ ತನ್ನ ಮೇಲೆ ಹಲ್ಲೆ ನಡೆಸಿದವರ ಹೆಸರು ಮತ್ತಿತರ ವಿವರಗಳನ್ನು ಸ್ಪಷ್ಟವಾಗಿ ತಿಳಿಸಿದ್ದಾರೆ. ಕುಮಾರಸ್ವಾಮಿ ಮತ್ತು ಇತರ ಬಜರಂಗಿಗಳು ಕೃಷ್ಣಯ್ಯನವರ ಮೇಲೆ ಹಲ್ಲೆ ನಡೆಸುವಾಗ "ಹಿಂದುವಾಗಿ ದನದ ವ್ಯಾಪಾರ ಮಾಡುತ್ತೀಯಾ" ಎಂದು ಪ್ರಶ್ನಿಸಿದ್ದು, ಈ ಕೊಲೆ ಕೋಮುವಾದದ ಉದ್ದೇಶದಿಂದ ನಡೆದಿರುವ ಬರ್ಬರ ಕೃತ್ಯ ಎನ್ನುವುದು ಸ್ಪಷ್ಟವಾಗಿದೆ.

ಕೃಷ್ಣಯ್ಯ ಅವರ ಕೊಲೆ ಒಂದು ಬಿಡಿಯಾದ ಅಪರಾಧ ಅಲ್ಲ; ಅದೊಂದು ಆಕಸ್ಮಿಕ ಘಟನೆಯೂ ಅಲ್ಲ. ಬಜರಂಗದಳ ಕರಾವಳಿ ಕರ್ನಾಟಕದಲ್ಲಿ ಕಳೆದ ಅನೇಕ ವರ್ಷಗಳಿಂದ ಅವ್ಯಾಹತವಾಗಿ ನಡೆಸಿರುವ ಹಿಂಸಾಚಾರದ ಸರಣಿಯಲ್ಲಿ ಇದು ಇತ್ತೀಚೆಗಿನ ಪ್ರಕರಣ. ಬಜರಂಗಿಗಳ ಹಿಂಸಾಚಾರಕ್ಕೆ ಮುಸ್ಲಿಂ ಮತ್ತು ಕ್ರೈಸ್ತ ಪ್ರಜೆಗಳ ಜೊತೆ ಈಗೀಗ ಹಿಂದೂ ಧರ್ಮೀಯರೂ ಬಲಿಯಾಗುತ್ತಿದ್ದಾರೆ. ಒಂದೆರಡು ವರ್ಷಗಳ ಕೆಳಗೆ ಇವರ ಅಪಪ್ರಚಾರದಿಂದ ಮನನೊಂದು ಕಾರ್ಕಳ ಸಮೀಪದ ಪಾಣ್ಯಾಲ ಎಂಬ ಗ್ರಾಮದ ಇಬ್ಬರು ಹಿಂದು ತರುಣಿಯರು ಆತ್ಮಹತ್ಯೆ ಮಾಡಿಕೊಂಡರು. ಕೆಲವು ತಿಂಗಳ ಹಿಂದೆ ಹೆಜಮಾಡಿ ಗ್ರಾಮದ ವನಿತ ಇವರ ದ್ವೇಷಕ್ಕೆ ಬಲಿಯಾದಳು. ಈಗ ತನ್ನ ಕುಟುಂಬಕ್ಕೆ ಮಾತ್ರವಲ್ಲ ಇಡೀ ಊರಿಗೆ ಹಿರಿಯರೂ ಆದರಣೀಯರೂ ಆಗಿದ್ದ ಕೃಷ್ಣಯ್ಯ ಬಜರಂಗಿಗಳ ಹಿಂಸೆಗೆ ಬಲಿಯಾಗಿದ್ದಾರೆ.

ಈ ಪ್ರಕರಣದ ತನಿಖೆ ನಡೆಸಿ ತಪ್ಪಿತಸ್ಥರಿಗೆ ಶಿಕ್ಷೆಯಾಗಿ ಮೃತರ ಕುಟುಂಬಕ್ಕೆ ನ್ಯಾಯ ಒದಗಿಸಿ ಕೊಡಬೇಕು ಎಂದು ರಾಜ್ಯ ಗೃಹಮಂತ್ರಿಗಳೂ ಆಗಿರುವ ಮುಖ್ಯ ಮಂತ್ರಿಯವರನ್ನು ಸೌಹಾರ್ದ ವೇದಿಕೆ ಒತ್ತಾಯಿಸುತ್ತದೆ. ಕರಾವಳಿಯಲ್ಲಿ ಬಜರಂಗಿಗಳಿಗೆ ಯಾವ ಕಾನೂನೂ ಸಹ ಇಲ್ಲ ಎಂಬ ವಾತಾವರಣವಿದೆ. ಸರಕಾರ ಈ ಬಗ್ಗೆ ಈಗಿಂದೀಗ ಸೂಕ್ತ ಕ್ರಮ ತೆಗೆದುಕೊಳ್ಳಬೇಕು ಎಂದು ನಾವು ಆಗ್ರಹ ಪಡಿಸುತ್ತೇವೆ.

ಕೃಷ್ಣಯ್ಯನವರ ಘೋರ ಹತ್ಯೆ ಪ್ರತಿಭಟನ ಧರಣಿ ಕಾರ್ಯಕ್ರಮ
ಉಡುಪಿ ತಾಲೂಕು ಕಛೇರಿಯ ಎದುರು ತಾ. 02-06-2006 ಶುಕ್ರವಾರ ಸಂಜೆ 4.00ಗಂಟೆಗೆ ಸರಿಯಾಗಿ.

ದಯವಿಟ್ಟು ಭಾಗವಹಿಸಿ.

ವಿಮಾ ನೌಕರರ ಸಂಘ, ಉಡುಪಿ (ಎ.ಐ.ಐ.ಇ.ಎ.)	ಡಿ.ವೈ.ಎಫ್.ಐ.
ದಲಿತ ಸಂಘರ್ಷ ಸಮಿತಿ (ದಸಂಸ)	ಜಿಲ್ಲಾ ಅಲ್ಪ ಸಂಖ್ಯಾತರ ವೇದಿಕೆ
ಸಿ.ಐ.ಟಿ.ಯು.	ಜಿಲ್ಲಾ ಮುಸ್ಲಿಮ್ ಒಕ್ಕೂಟ
ಕ್ಯಾಥೊಲಿಕ್ ಸಭಾ (ಉಡುಪಿ ವಲಯ)	ವಿಚಾರವಾದಿ ಸಂಘ, ಉಡುಪಿ

ಮಾಡುವುದಕ್ಕೆ ತಯಾರಾಗಿ ನಿಂತಿದ್ದರು. ಸ್ಥಳದಲ್ಲಿದ್ದ ಬ್ರಹ್ಮಾವರ ವಿಧಾನಸಭಾ ಕ್ಷೇತ್ರದ ಶಾಸಕ, ಜಯಪ್ರಕಾಶ್ ಹೆಗ್ಡೆ "ನೀವು ಇಂತಹದ್ದನ್ನು ಏನಾದರೂ ಮಾಡಿದರೆ ಭಜರಂಗದಳದ ಕೈಗಳನ್ನೇ ಬಲಪಡಿಸಿದಂತಾಗುತ್ತದೆ. ಯಾವ ಕಾರಣಕ್ಕೂ ನಾವು ಕಾನೂನು ಮೀರಿ ನಡೆಯಕೂಡದು" ಎಂದು ಆ ಗುಂಪನ್ನು ಸಮಾಧಾನಪಡಿಸದೆ ಇರುತ್ತಿದ್ದರೆ ಅವತ್ತು ಏನಾಗುತ್ತಿತ್ತು ಎಂದು ಹೇಳುವುದು ಕಷ್ಟ.

ಕಾವಡಿ ಕೃಷ್ಣಯ್ಯ ಪಾಟಾಳಿ ಏನು ತಪ್ಪು ಮಾಡಿದರು ಎಂದು ಭಜರಂಗಿಗಳು ಅವರ ಮೇಲೆ ಹಲ್ಲೆ ನಡೆಸಿ ಕೊಂದು ಹಾಕಿದರು? ಹಿಂದೂವೊಬ್ಬ ದನದ ವ್ಯಾಪಾರ ಮಾಡಕೂಡದು ಎಂಬ ಕಾನೂನು ಇದೆಯಾ? ದನದ ವ್ಯಾಪಾರ, ಸಾಗಾಟಗಳನ್ನು ಮಾಡುತ್ತಿದ್ದ ಮುಸ್ಲಿಮರನ್ನು ಈ ಭಜರಂಗಿಗಳು ಕರಾವಳಿಯ ಹೆದ್ದಾರಿಗಳಲ್ಲೇ ತಡೆದು ನಿಲ್ಲಿಸಿ, ಲೂಟಿ ಮಾಡಿ, ಹೊಡೆದು ಬಡಿದು ಮಾಡುತ್ತಿದ್ದಾಗ ಈ ಪ್ರಶ್ನೆ ಯಾರನ್ನೂ ಕಾಡಿರಲಿಲ್ಲ.

ಭಜರಂಗದಳದ ಹಿಂದೂ ಧರ್ಮ ಸಂರಕ್ಷಣೆಯ ಲೇಟೆಸ್ಟ್ ಸಾಹಸದಿಂದಾಗಿ ಕಾವಡಿ ಕೃಷ್ಣಯ್ಯನವರ ಕೊಲೆಯಾಗಿರುವುದರ ಅರ್ಥವೇನು ಎಂದು ಈಗ ಎಲ್ಲರೂ ದಿಗ್ಭ್ರಾಂತರಾಗಿದ್ದಾರೆ.

(ಲೇಖನದ ಉಳಿದ ಭಾಗ ಮುಂದಿನವಾರ)

ವಿಶೇಷ ಲೇಖನ

ಸಾರಾ ಅಬೂಬಕ್ಕರ್

ಮಕ್ಕಳ ಮದುವೆ ದೊಡ್ಡ ಹೊರೆ. ಈ
ಯನ್ನು ಕೆಳಗಿಳಿಸಲು
ಅದರಿಂದ
ಯುವ ಹತ್ತೊ
ಐದು ಸಾವಿರ
ಯಿ ಗಳನ್ನು
ದೊಡ್ಡ ಲಾಭ
ಪರಿ ಗಣಿಸುತ್ತಾರೆ.
ಗುಟ್ಟಾಗಿ ನಡೆಯುತ್ತಿರುವ
ಹ ಮದುವೆಗಳನ್ನು ಬಯಲಿಗೆಳೆಯಲು 'ಶಹೀನ್'
ಮಹಿಳಾ ಅಭಿವೃದ್ಧಿ ಸಂಘಟನೆಯ ಇಬ್ಬರು
ಗಿಯರು ಪ್ರಯತ್ನಿಸಿದರು. ಇವರು ರಹಸ್ಯವಾಗಿ,
ಗೂ ತಿಳಿಯದಂತೆ ದಲ್ಲಾಳಿಯೊಬ್ಬನನ್ನು
ಯಾಗಿ ತಾವು ಈ ಕೊಲ್ಲಿ ಮದುವೆಗೆ
ರುವುದಾಗಿ ತಿಳಿಸಿದರು. ಪಾಸ್ ಪೋರ್ಟ್
ರುವುದೇ ಈ ಮದುವೆಗೆ ಒಂದು ಅರ್ಹತೆ!
ಪೋರ್ಟ್ ಇರುವವರನ್ನು ಇಂತಹ ಮದುವೆಗೆ
ಮಾಡಿಕೊಳ್ಳುವುದಿಲ್ಲ! ಹಾಗೆಯೇ ಈ
ಗಿಯರೊಡನೆ ಮಾತುಕತೆಯಾಗಿ ಮದುವೆಗೆ
ಯಾಯಿತು. ಹುಡುಗಿಯರು
ಚಾನೆಲ್ ವರದಿಗಾರರಿಗೆ
ಗಿ ಸುದ್ದಿ ತಿಳಿಸಿ ನಿಕಾಹ್‌ನ
ಮುಕ್ಕೆ ಅವರನ್ನು ಕರೆಸಿದರು.
ವರದಿಗಾರರನ್ನು ಕಂಡೊಡನೆ
ವರನೂ, ದಲ್ಲಾಳಿಗಳೂ
ಯಾದರು!

ಮೀಲಾ ನಿಶತ್ ಎಂಬ
ಕವಯಿತ್ರಿ 'ಶಹೀನ್'
ಮಹಿಳಾ ಸಂಘಟನೆಯನ್ನು
ಭಿಸಿ ತಲಾಖ್ ಪೀಡಿತ
ಇತರ ಶೋಷಿತ ಮಹಿಳೆ
ನೆರವು ನೀಡುತ್ತಿದ್ದಾರೆ.
ಯ ಗುಂಪುಗಳನ್ನಾರಂಭಿಸಿ,
ಮತ್ತು ಇತರ ಕರಕುಶಲ
ಗಳನ್ನು ತಯಾರಿಸಿ ಪ್ರದರ್ಶನಕ್ಕಿಟ್ಟು ಮಾರಾಟ
ಈ ಮಹಿಳೆಯರ ಬದುಕಿಗೆ ಕೊಂಚವಾದರೂ
ದೊರೆಯುವಂತೆ ಪ್ರಯತ್ನಿಸುತ್ತಿದ್ದಾರೆ.

ಸಮಾಜ ಸರ್ಕಾರದೊಡನೆ ಕೈಜೋಡಿಸಿ ಕೊಲ್ಲಿ
ಬರುವ ಮುದುಕರ ಮದುವೆಗೆ ಕಡಿವಾಣ
ಬೇಕು. ಈ ದಿಶೆಯಲ್ಲೂ ಕೆಲವು ಮುಸ್ಲಿಮರು



ಪ್ರಯತ್ನಿಸುತ್ತಿದ್ದಾರೆ. ಸಮಾಜ ಸೇವಾ ಕಾರ್ಯಕರ್ತರೊಬ್ಬರು ಈ ಕುರಿತು ಡಾಕ್ಯುಮೆಂಟರಿ ಚಿತ್ರವೊಂದನ್ನು ತಯಾರಿಸಿದ್ದಾರೆ. ಸರ್ಕಾರ ಇಂತಹ ಮದುವೆಗಳನ್ನು ನಿಷೇಧಿಸುವಂತೆ ಕಾನೂನು ರೂಪಿಸಬೇಕೆಂದು ಈ ಡಾಕ್ಯುಮೆಂಟರಿಯ ನನ್ನ ಸಂದರ್ಶನದಲ್ಲಿ ನಾನು ಸಲಹೆ ನೀಡಿದ್ದೇನೆ. ಓಟಿನ ರಾಜಕೀಯ ಮಾಡುವ ರಾಜಕಾರಣಿಗಳು ಇಂತಹ ಮಹಿಳಾ ಶೋಷಣೆಯ ವಿರುದ್ಧ ಕಾನೂನು ರೂಪಿಸುತ್ತಾರೆಯೇ? ಆಂಧ್ರದ ಮುಖ್ಯಮಂತ್ರಿ ಮುಸ್ಲಿಮರಂತೆ ಟೋಪ್ಪಿ ಇಟ್ಟು ಹಜ್ ಯಾತ್ರೆಗೆ ಹೊರಟವರೊಡನೆ ಫೋಟೋ ತೆಗೆಸಿಕೊಂಡ ಚಿತ್ರ ಅಲ್ಲಲ್ಲಿ ರಾರಾಜಿಸುತ್ತಿತ್ತು!

ಈ ಮುಸ್ಲಿಂ ಸಮಾವೇಶದಲ್ಲಿ ಮುಸ್ಲಿಂ ವ್ಯಕ್ತಿ ನಿಯಮದ ಕುರಿತೂ ಚರ್ಚೆಗಳಾದವು. ಮುಸ್ಲಿಂ ಮಹಿಳೆಯರನ್ನು ಎಷ್ಟೊಂದು ಕತ್ತಲಲ್ಲಿಟ್ಟಿದ್ದಾರೆಂದರೆ ಮುಸ್ಲಿಂ ವ್ಯಕ್ತಿ ನಿಯಮವೆಂದರೇನೆಂದೇ ಪದವೀಧರ ಹೆಣ್ಣುಮಕ್ಕಳಿಗೆ ತಿಳಿಯದು! ಮಹಿಳೆಯರ ಈ ಅಜ್ಞಾನವೇ ಧಾರ್ಮಿಕ ಮುಖಂಡರ ಬಂಡವಾಳ. ಈಗ ಈ ಮಹಿಳೆಯರಲ್ಲೂ ಎಚ್ಚರ ಮೂಡುತ್ತಿರುವುದು ಹಾಗೂ ಸಮಾಜದ ಪುರುಷರೂ ಕೂಡಾ ಈ ಶೋಷಣೆಯ ವಿರುದ್ಧ ಧ್ವನಿ ಎತ್ತುತ್ತಾ ಮಹಿಳೆಯರೊಡನೆ ಕೈ ಜೋಡಿಸುತ್ತಿರುವುದು ಆಶಾದಾಯಕ ಬೆಳವಣಿಗೆಯಾಗಿದೆ.

ಹೈದರಾಬಾದಿನಲ್ಲಿ ನಾನು ಗಮನಿಸಿದ ಇನ್ನೊಂದು ಅಂಶ ತೆಲುಗು ಪುಸ್ತಕಗಳ ಮಾರಾಟ. ಇಂತಹ ಸಮಾವೇಶಗಳಲ್ಲಿ ಪುಸ್ತಕ ವ್ಯಾಪಾರಿಗಳ ಹಾಜರಿ ಇದ್ದೇ ಇದೆ. ಇತ್ತೀಚೆಗೆ ದಲಿತರು ಅಧಿಕ ಸಂಖ್ಯೆಯಲ್ಲಿ ಪುಸ್ತಕಗಳನ್ನು ಕೊಂಡು ಓದುತ್ತಿದ್ದಾರೆ. ಹೈದರಾಬಾದ್ ಬುಕ್ ಟ್ರಸ್ಟ್‌ನಿಂದ ವಿಚಾರ ಪ್ರಚೋದಕ ಸಾಹಿತ್ಯ ಕೃತಿಗಳು ಅಧಿಕ ಸಂಖ್ಯೆಯಲ್ಲಿ ಹೊರಬರುತ್ತಿವೆ.



ಪ್ರೇಮದ ಒಳಗಣ್ಣು ತೆರೆದಾಗ ಭಯೋತ್ಪಾದನೆಯ ಅಂಧಕಾರ

ಆಕೆಗೆ ಕಣ್ಣು ಬರುವ ಹೊತ್ತಿಗೆ ಆತ ಸತ್ತ ಸುದ್ದಿ ಬಂದಿರುತ್ತದೆ. ಆತನಿಂದ ಬಳುವಳಿ ಪಡೆದ ಮಗುವನ್ನು ಸಾಕುತ್ತಾ ಆಕೆ ಜೀವಿಸುತ್ತಿರುತ್ತಾಳೆ. ಸತ್ತಿರದ ಆತ ಭಯೋತ್ಪಾದಕ... ಭಾರತದ ಸೈನ್ಯ ಸೇರಿಕೊಂಡು ದೇಶನಾಶ ಮಾಡಲು ಶಪಥ ಮಾಡಿರುವ ಉಗ್ರಗಾಮಿ... ಕಮಾಂಡರ್ ವೇಷದ ಆ ಉಗ್ರಗಾಮಿ ಮತ್ತೆ ಆಕೆಗೆ ಸಿಗುತ್ತಾನೆ. ತನಗೆ ಕಣ್ಣು ಕೊಟ್ಟವನನ್ನು, ಪ್ರೀತಿ ಹಂಚಿಕೊಂಡವನನ್ನು ಗುರುತಿಸದಂತಹ ಸ್ಥಿತಿಯಲ್ಲೂ ಆಕೆ ಆತನ ಉಸಿರು, ಸ್ಪರ್ಶಗಳಲ್ಲಿ ಹಳೆಯ ಪ್ರೇಮಿಯನ್ನೆ ಕಾಣುತ್ತಾಳೆ... ಮೆಲ್ಲಗೆ ಪ್ರೇಮ ಮರುಜೀವ ಪಡೆಯುತ್ತದೆ. ಅಂಥದ್ದರಿಂದ ಹೊರಬಂದ ಮೇಲೆ ಆತನನ್ನು ಕಳೆದುಕೊಂಡಿದ್ದ ಆಕೆಗೆ ಆತ ಸಿಕ್ಕು, ಆಕೆಯ ಪ್ರೇಮದ ಒಳಗಣ್ಣು ತೆರೆಯುವ ವೇಳೆಗೆ ಎದುರಿಗೆ ಭಯೋತ್ಪಾದನೆ ಎಂಬ ಗಾಢ ಅಂಧಕಾರ ಕವಿದಿರುತ್ತದೆ. ಪ್ರೇಮಿಯೊ? ಉಗ್ರಗಾಮಿಯೊ? ಆಕೆ ಪ್ರೇಮಿಯನ್ನು ಹೃದಯದಾಳದಲ್ಲಿಟ್ಟುಕೊಂಡು ಉಗ್ರಗಾಮಿಯನ್ನು ಕೊಲ್ಲುತ್ತಾಳೆ!

ಅಲ್ಲಿಗದು ಗಾಢ ಅಂಧಕಾರದ ನಾಶ... ಫನಾ...

ಅದ್ಭುತವಾದ ಕಥೆ ಎಳೆಯಿದೆ... ಆದರೆ ಚಿತ್ರಕಥೆ ನಿರೀಕ್ಷಿಸಿದಷ್ಟು ಬಿಗಿಯಾಗಿಲ್ಲ. ಭಯೋತ್ಪಾದನೆ ಬಿಂಬಿಸುವ ದೃಶ್ಯಗಳು ಎಳೆದಂತೆ ಭಾಸವಾಗುತ್ತವೆ. ಈ ಎಲ್ಲ ಕೊರತೆಗಳ ನಡುವೆಯೂ 'ಫನಾ' ನೋಡಬಹುದಾದ ಚಿತ್ರ ಎನಿಸುವುದು ಅಮೀರ್‌ಖಾನ್, ಕಾಜೋಲ್‌ರ ಲವಲವಿಕೆ, ತಾಜಾತನ, ಅರ್ಥಪೂರ್ಣ ಅಭಿನಯಗಳಿಂದ...

ಅಮೀರ್ ಯುವಕನಂತೆ, ವಿವಾಹಿತೆ ಕಾಜೋಲ್ ಕಾಲೇಜು ಗೆಳತಿಯಂತೆ ಭಾಸವಾಗುತ್ತಾರೆ.... ಚಿತ್ರ ಆರಂಭವಾಗುವುದೇ 'ಸಾರೆ ಜಹಾಂಸೆ ಅಚ್ಛಾ' ಸಂತೂರ್‌ನಲ್ಲಿ ತೇಲಿಬರುವ ಮೂಲಕ... ತೆರೆಯ ಮೇಲೆ ಕಾಶ್ಮೀರ ಕೊಳ್ಳದ ಶಾಂತ ಸರೋವರಗಳು, ಜುಳು ಜುಳು ನಾದದ ಝರಿಗಳು, ಹಿಮದಿಂದಾವೃತವಾದ ಬೆಟ್ಟ ಗುಡ್ಡಗಳು ಕಣ್ಣು ಮನಸ್ಸಿಗೆ ಇಂಪು ಕೊಡುತ್ತಿರುವಾಗ ಕ್ಯಾಮರಾ ಭಾರತದ ಧ್ವಜದ ಎದುರು ಸಲಾಮ್ ಮಾಡುತ್ತಿರುವ ಝೂನಿ ಅಲಿ ಬೇಗ್ (ಕಾಜೋಲ್)ಳ ಕಡೆ ತಿರುಗುತ್ತದೆ. ಸುಂದರ, ಫ್ರೆಶ್ ಝೂನಿ... ಆದರೆ ಆಕೆ ಅಂಧೆ!

ಪ್ರಜಾ ರಾಜ್ಯೋತ್ಸವ ದಿನದ ಕಾರ್ಯಕ್ರಮದಲ್ಲಿ ಭಾಗವಹಿಸಲು ದೆಹಲಿಗೆ ಬರುವ ಝೂನಿಯನ್ನು ತಮಾಷೆಯ, ಪಾದರಸದಷ್ಟು ಚುರುಕಿನ 'ಗೈಡ್' ರೆಹಾನ್ ಖಾದ್ರಿ (ಅಮೀರ್) ಪ್ರೇಮಿಸತೊಡಗುತ್ತಾನೆ. ಕಾಜೋಲ್ ಮತ್ತು ಗೆಳತಿಯರಿಗೆ ಶಾಯರಿಗಳ ಮೂಲಕ ಕಾಡುವ ರೆಹಾನ್ ಪಾತ್ರದಲ್ಲಿ ಅಮೀರ್ ಎಲ್ಲರ ಮನ ಗೆಲ್ಲುತ್ತಾನೆ. ತಮಾಷೆ, ಲೇವಡಿ, ವ್ಯಂಗ್ಯಗಳ ಶಾಯರಿಗಳ ನಡುವೆ ಸ್ಪರ್ಶ, ಸೆಳೆತ, ಸಿಂಚನಗಳ ಪ್ರೇಮ-ಶಾಯರಿಗಳು ಅರಳುತ್ತಾ ಅಂಧೆ ಝೂನಿ ರೆಹಾನ್‌ನಲ್ಲಿ ಒಂದಾಗುತ್ತಾ ಸಾಗುವ ಮೊದಲರ್ಧ ಚೇತೋಹಾರಿಯಾಗಿದೆ. ತಬಲಾ, ಹಾರ್ಮೋನಿಯಂ, ವೀಣೆ, ಕೊಳಲುಗಳ ಸಂಗೀತದಲ್ಲಿ ಹಾಯಾಗಿ ತೇಲಿಬರುವ ಪ್ರೇಮಿಗಳ ಸಂಭಾಷಣೆಗಳು ಮುದ ನೀಡುತ್ತವೆ. ಎರಡು ಹಾಡುಗಳು ಹಿತಕರವಾಗಿವೆ.

ಝೂನಿಗೆ ಕಣ್ಣಿನ ಆಪರೇಷನ್ ವ್ಯವಸ್ಥೆ ಮಾಡಿ, ಪಾರ್ಲಿಮೆಂಟ್ ಸ್ಫೋಟಿಸುವ ದುಷ್ಕೃತ್ಯವನ್ನು ರೆಹಾನ್ ಮಾಡುತ್ತಾನೆ. ಇತ್ತ ಝೂನಿಗೆ ಕಣ್ಣು ಬಂದಾಗ, ರೆಹಾನ್ ಸತ್ತನೆಂಬ ಸುದ್ದಿ ಮುಟ್ಟುತ್ತದೆ....

ನಂತರ ಮೇಲೆ ಹೇಳಿದಂತೆ ದ್ವಿತೀಯಾರ್ಧ ಸ್ವಲ್ಪ ಎಳೆದಂತೆ ಭಾಸವಾಗಿ ಕೊನೆಗೆ ಝೂನಿಯ ದೇಶಪ್ರೇಮ ಪ್ರೀತಿ, ಪ್ರೇಮವನ್ನು ಹೃದಯದಲ್ಲಿರಿಸಿಕೊಂಡೇ ಭಯೋತ್ಪಾದನೆಯನ್ನು ಕೊಲ್ಲುತ್ತದೆ.

ಝೂನಿ (ಕಾಜೋಲ್)ಯ ತೊಡೆಯ ಮೇಲೆ ರೆಹಾನ್ (ಅಮೀರ್) ಮಲಗಿ, ಆವಳ ಕೈಯಲ್ಲಿ ತನ್ನ ಕೈ ಇಟ್ಟು ಪ್ರಾಣಬಿಡುವಾಗ.... "ಮೇರೆ ಹಾಥೊ ಮೆ ತೇರಾ ಹಾಥ್ ಹೋನಾ.... ಸಾರೆ ಜಿಂದಗಿ ತೇರಾ ಸಾಥ್ ಹೋನಾ...." ಎಂಬ ಹಿನ್ನೆಲೆ ಗೀತೆ ತೇಲಿಬರುತ್ತದೆ.

ಯಶರಾಜ್ ಫಿಲ್ಮ್ಸ್ ನಿರ್ಮಾಣದ, ಕುನಲ್ ಕೊಹ್ಲಿ ನಿರ್ದೇಶನದ 'ಫನಾ' (ನಾಶ, ಅಂತ)ವನ್ನು ನೀವೂ ಒಮ್ಮೆ ನೋಡಿ....


ಗುಜರಾತ್ ಗಲಭೆ ವಿರುದ್ಧ ನರ್ಮದಾ ಸಂತ್ರಸ್ತರ ಪರ ಮಾತಾಡಿದ ಅಮೀರ್ ಖಾನ್ ವಿರುದ್ಧ ಗುಜರಾತ್ ಚಿಡ್ಡಿಗಳು ಹಾರಾಡಿ, ಅಲ್ಲಿ 'ಫನಾ' ನಿಷೇಧಿಸಿವೆ. ಯಾವ ಕಾರಣಕ್ಕೂ ಕ್ಷಮೆ ಕೇಳುವುದಿಲ್ಲ ಎಂದು ಹೇಳಿ ಅಮೀರ್ ದಿಟ್ಟತನ ಮೆರೆದಿದ್ದಾನೆ.

-ಪಿ.ಕೆ. ಮಲ್ಲನಗೌಡರ್

ನಿರಾಕಾರದಾಸೆ

ನಿನ್ನ ಬಾಚಿ ತಬ್ಬಿ
ಮುತ್ತಿನ ಮಳೆ ಸುರಿಸುವಾಸೆ
ಕಣ್ಣಾಲಿಗಳಲ್ಲಿ ನಿನ್ನ ತುಂಬಿಕೊಂಡು
ರೆಪ್ಪೆ ಮುಚ್ಚಿ ನಿನ್ನ ಕಾಣುವಾಸೆ,
ಕಾಯುವಾಸೆ
ನಿನ್ನ ಕಣ್ಣುಗಳ ಮೇಲೆ ನನ್ನ ತುಟಿಯ
ಮುದ್ರೆಯನೊತ್ತಿ
ಆ ಕನಸಿಗೆ ಕಾವಲಾಗುವ ಆಸೆ
ನಿನ್ನ ಸಂದೇಶಕ್ಕೆ ಮುಳುಗೊಳ್ಳುವ ನಾನು
ನಿಜವಾಗಿ ನಿನ್ನೆದುರು ಕುಳಿತಾಗ
ನೀರೇ ಆಗಿಬಿಡುವ ಏಕಾಂತವನ್ನು ನೆನೆದು
ನೆನೆದು ಹೋಗುತ್ತಿರುವೆ ಶುದ್ಧಾಂಗವಾಗಿ
ಪ್ರೀತಿಯ ನನ್ನವನೇ,
ನನ್ನ ಇಡಿಯ ತನವನ್ನು
ದೇಹ, ಪ್ರಾಣಗಳನ್ನು
ನಿನ್ನೊಳಗೆ ಕಳೆದೇಕೊಂಡು ಬಿಡುವಾಸೆ
ಮತ್ತೆ ನಾನೆಂದರೇನೆಂದು ನನಗೆ ತಿಳಿಯದಂತೆ
ಅಲೆಯದು ಸಾಗರದೊಡನೆ ಒಂದಾಗುವಂತೆ
ನಿನ್ನ ಕೂಡುವಾಸೆ ಕಾಲ ಸಮ್ಮತಿಸಿದರೆ
ನಿರಾಕಾರದಾಸೆ.

-ಜ್ಯೋತಿ ಗುರುಪ್ರಸಾದ್



ದೇವರು ಹಾಗೂ ಜನಪ್ರಿಯ ವ್ಯಕ್ತಿಯ ಸಾವು

ಜನಪ್ರಿಯ ವ್ಯಕ್ತಿಗಳು ಮರಣ ಹೊಂದಿದಾಗ ದೊಂಬಿ ನಡೆದು ಅಮಾಯಕರು ತೊಂದರೆಗೆ ಈಡಾಗುವುದು ಸರ್ವೇಸಾಮಾನ್ಯ ಆಗಿದೆ. ಪ್ರಸಿದ್ಧ ವ್ಯಕ್ತಿಯ ಸಂಬಂಧಿಕರೇನೋ ದೊಡ್ಡ ಆಲದ ಮರ ಉರುಳಿ ಬಿದ್ದಾಗ ಭೂಮಿ ನಡುಗುವುದು ಸಹಜ ಎಂಬುದಾಗಿ ರಾಜೀವ್ ಗಾಂಧಿ ಶೈಲಿಯಲ್ಲಿ ಹೇಳಬಹುದು. ಆದರೆ ಈ 'ಸಹಜ' ನಡವಳಿಕೆಗಳಿಂದ ಹಾನಿಗೊಳಗಾದ ಸಂಸಾರಗಳು ತಮ್ಮ ಇಡೀ ಜೀವನಪರ್ಯಂತ ಇದನ್ನು ದುಃಸ್ವಪ್ನ ಕಂಡಂತೆ ಬೆದರುವುದು ಖಂಡಿತ. ಮಗ ಅಪಾಪೋಲಿಯಾಗಿ ಮನೆಗೆ ಮಾರಿಯಾಗಿದ್ದು ಇಂತಹ ಗಲಭೆಗಳಲ್ಲಿ ಅವನು ಅಸುನೀಗಿದರೆ ಲೋಕಾಪವಾದಕ್ಕೆ ಅಂಜಿ ಕಣ್ಣೀರು ಸುರಿಸಿದರೂ ಆ ಸಾವು ತರಬಹುದಾದ ಹಣದಿಂದ ಒಳಒಳಗೆ ಖುಷಿ ಪಡುವವರು ಇದ್ದರೂ ಇರಬಹುದು. ದುಡಿಯುವ ಮಗ ಹೀಗೆ ಅಕಾಲ ಮೃತ್ಯುವಿಗೆ ಗುರಿಯಾದರೆ ಆ ಮನೆಯ ಕಣ್ಣೀರು ಒರೆಸುವವರು ಯಾರು?



ಇದು ಒಂದು ರೀತಿಯ ಸಮಸ್ಯೆ ಆದರೆ ದಿಢೀರ್ ಬಂದ್‌ನಿಂದಾಗಿ ಪರ ಊರುಗಳಲ್ಲಿ ಸಿಕ್ಕಿ ನರಳುವವರ ಪರಿಸ್ಥಿತಿ, ಅವರ ಮನೆಯವರು ಪಡುವ ಆತಂಕ, ಇವುಗಳು ಮರಣ ಹೊಂದಿದ ಜನಪ್ರಿಯ ವ್ಯಕ್ತಿಗಳ ಅಭಿಮಾನಿಗಳ ಗಮನಕ್ಕೇ ಬರದಿರುವುದು ಶೋಚನೀಯ ಸಂಗತಿ ಆಗಿದೆ. ತಮಿಳುನಾಡಿನ ಮುಖ್ಯಮಂತ್ರಿ ಆಗಿದ್ದ ಪ್ರಸಿದ್ಧ ಸಿನಿಮಾ ನಟ ಎಂ.ಜಿ. ರಾಮಚಂದ್ರನ್ ಮರಣ ಹೊಂದಿದ ದಿವಸ ಆದ ಅನುಭವಗಳನ್ನು ಎಸ್. ಜಯರಾಮ್ ಅವರು ಈ ರೀತಿ ಚಿತ್ರಿಸಿದ್ದಾರೆ:

ಅಂದು ಡಿಸೆಂಬರ್ 24, 1987. ನಾನು ಆಗ ವಿಶ್ವಸಂಸ್ಥೆಯ ಮೀನುಗಾರಿಕೆ ಯೋಜನೆಯ ಕೆಲಸ ನಿರ್ವಹಿಸುತ್ತಿದ್ದೆ. ಅವತ್ತು ಬೆಳಿಗ್ಗೆ ಚೆನ್ನೈನಿಂದ ಮಧುರೈಗೆ ವಿಮಾನದಲ್ಲಿ ಹೋಗಿ ಅಲ್ಲಿಂದ ಕನ್ಯಾಕುಮಾರಿಗೆ ಟ್ಯಾಕ್ಸಿಯಲ್ಲಿ ಪ್ರಯಾಣಿಸಿ ಮೀನುಗಾರಿಕೆ ಹಾಗೂ ಮೀನುಗಾರರ ಕುರಿತು ಸಂಶೋಧನೆ ನಡೆಸಬೇಕಿತ್ತು.

ನನ್ನ ನಿಗದಿತ ಕಾರ್ಯಕ್ರಮದಂತೆ ಅಂದು ಚೆನ್ನೈನಲ್ಲಿ ವಿಮಾನ ಹತ್ತಿ ಕುಳಿತೆ. ಆಗ ಎಂಜಿಆರ್ ಮರಣದ ಸುದ್ದಿ ತಿಳಿಯಿತು. 'ಮೂರೋ ನಾಲ್ಕೋ ದಿನ ತಮಿಳುನಾಡು ಬಂದ್ ಇರುತ್ತದೆ' ಎಂದು ಸಹ ಪ್ರಯಾಣಿಕರು ಮಾತನಾಡಿಕೊಳ್ಳುತ್ತಿದ್ದರು. ಅದು ನಿಜವೋ ಎಂಬಂತೆ ಮಧುರೈ ತಲುಪಿದಾಗ ಅಲ್ಲಿನ ವಿಮಾನ ನಿಲ್ದಾಣ ಸ್ತಬ್ಧಗೊಂಡಿತ್ತು, ಟ್ಯಾಕ್ಸಿಯವರನ್ನು ವಿಚಾರಿಸಲಾಗಿ 'ನಿಮ್ಮನ್ನು ಕನ್ಯಾಕುಮಾರಿಗೆ ತಲುಪಿಸಲು ಸಾಧ್ಯವೇ ಇಲ್ಲ, ಮಧುರೈ ಊರಿನ ಒಳಗೂ ಟ್ಯಾಕ್ಸಿ ಓಡಿಸುವಂತಿಲ್ಲ' ಎಂದು ತಮ್ಮ ಅಸಹಾಯಕತೆ ತೋಡಿಕೊಂಡರು.

ನನ್ನ ಮುಂದೆ ಇರುವ ಮಾರ್ಗಗಳನ್ನು ಚಿಂತಿಸಿದೆ. ನಾನು ಕನ್ಯಾಕುಮಾರಿಯನ್ನು ಹೇಗಾದರೂ ಮಾಡಿ ರೈಲಿನಲ್ಲಿ ತಲುಪಿದರೂ ಈ ಉದ್ವಿಗ್ನ ವಾತಾವರಣದಲ್ಲಿ ಮೀನುಗಾರರ ಕುರಿತು ಸಂದರ್ಶನಾಧಾರಿತ ಸಂಶೋಧನೆ ಮಾಡುವುದು ಕಷ್ಟಸಾಧ್ಯ. ಚೆನ್ನೈನಲ್ಲಿದ್ದ ನನ್ನ ಕಚೇರಿಯನ್ನು ಸಂಪರ್ಕಿಸಿದೆ. ಅವರು ಕೂಡಲೆ ಚೆನ್ನೈಗೆ ಹಿಂತಿರುಗುವಂತೆ ಸೂಚಿಸಿದರು. ಆದರೆ ಮಾರನೆ ಬೆಳಗಿನವರೆವಿಗೂ ಯಾವುದೇ ವಿಮಾನ ಇರಲಿಲ್ಲ.

ಹತ್ತಿರದ ಯಾವುದಾದರೂ ಹೋಟೆಲಿನಲ್ಲಿ ಒಂದು ದಿನದ ಮಟ್ಟಿಗೆ ತಂಗಲು ನಿರ್ಧರಿಸಿದೆ. ವಿಮಾನ ನಿಲ್ದಾಣದ ಬಳಿ ನಿಂತಿದ್ದ ಸೈಕಲ್ ರಿಕ್ಷಾದಲ್ಲಿ ಹೋಟೆಲಿಗೆ ಹೋದೆ. ಬೇರೇನು ಮಾಡಲೂ ಸಾಧ್ಯವಿಲ್ಲದ್ದರಿಂದ ಓದುತ್ತಾ ರೂಮಿನಲ್ಲಿ ಬಿದ್ದುಕೊಂಡಿದ್ದೆ. ಮಧ್ಯಾಹ್ನದ ಊಟದ ಸಮಯ ಆಯಿತು. ಆ ಹೋಟಲಿನಲ್ಲಿ ಊಟದ ವ್ಯವಸ್ಥೆ ಇರಲಿಲ್ಲ, ಯಾವುದಾದರೂ ಒಳ್ಳೆಯ ಹೋಟೆಲಿಗೆ ಕರೆದುಕೊಂಡು ಹೋಗುವಂತೆ ಹೋಟೆಲಿನ ಎದುರೇ ನಿಂತಿದ್ದ ರಿಕ್ಷಾದವನನ್ನು ಕೇಳಿದೆ. ಸೈಕಲ್ ರಿಕ್ಷಾದವನು 'ಇವತ್ತು ಸೈಕಲ್ ರಿಕ್ಷಾವನ್ನು ಓಡಿಸುವಂತಿಲ್ಲ, ಹಾಗೇನಾದರೂ ಮಾಡಿ ಸಿಕ್ಕಿ ಹಾಕಿಕೊಂಡರೆ ಮೈ ಮೂಳೆ ಮುರಿಯುವಂತೆ ಹೊಡೆತ ತಿನ್ನಬೇಕಾಗುತ್ತದೆ. ನಿಮಗೋಸ್ಕರ ನಾನು ಈ ಅಪಾಯ ಎದುರಿಸುತ್ತೇನೆ ಸಾರ್. ಆದರೆ ನೀವು ನನಗೆ ಐವತ್ತು ರೂಪಾಯಿ ಕೊಡಬೇಕು' ಎಂಬುದಾಗಿ ಚೌಕಾಶಿ ಮಾಡಿದ. ಅದಕ್ಕೆ ಒಪ್ಪಿದೆ.

ಒಂದು ಅಷ್ಟು ದೂರ ರಿಕ್ಷಾ ಓಡಿರಬೇಕು. ರಿಕ್ಷಾದವನು 'ಅಯ್ಯೋ ಆಂಡವನೇ' ಎಂದು ಭಯಾಶ್ಚರ್ಯ ಕೂಗು ಹಾಕಿದ. ರೌಡಿಗಳ ಗುಂಪೊಂದು ನಮ್ಮ ಕಡೆಯೇ ಬರುತ್ತಿತ್ತು. 'ಎಂಜಿಆರ್ ಹರತಾಳ' ನಡೆಸಲು ನಿರ್ಧರಿಸಿದ್ದ ಗುಂಪು ಅದು. ರಿಕ್ಷಾ ನಿಲ್ಲಿಸಿ ಕೆಳಕ್ಕೆ ನೆಗೆದು ಎಲ್ಲಿಯೋ ಮಂಗಮಾಯ ಆದ ರಿಕ್ಷಾ ಚಾಲಕ!

ಅಣಕ

ಗುಂಪು ರಿಕ್ಷಾ ಬಳಿಗೆ ಬಂದಿತು. ರೌಡಿಗಳ ನಾಯಕ ನನ್ನನ್ನು ದುರುಗುಟ್ಟಿ ನೋಡಿದ. ನಾನು ನೋಟ ಹಿಂತಿರುಗಿಸಿದೆ.

'ರಿಕ್ಷಾಕಾರನ್ ಎಲ್ಲಿ' ಕೇಳಿದ ಅವನು.

'ನಿಮ್ಮನ್ನು ನೋಡಿ ಓಡಿ ಹೋದ' ಎಂದೆ ನಾನು.

'ಅವನು ಇಲ್ಲೇ ಎಲ್ಲೋ ಇರಬೇಕು ಹುಡುಕಿರೋ' ಎಂದು ತನ್ನ ಹಿಂಬಾಲಕರಿಗೆ ಹೇಳಿದ ನಾಯಕ. ಅವನು ಹೇಳಿದಂತೆಯೇ ಆಯಿತು. ರಿಕ್ಷಾ ಚಾಲಕ ಒಂದು ಓಣಿಯಲ್ಲಿ ಮುದುಡಿ ಕುಳಿತಿದ್ದ, ಭಯದಿಂದ ನಡುಗುತ್ತಿದ್ದ, ನಾಯಕನ ಬಳಿ ಬರಲು ಪ್ರತಿಭಟಿಸುತ್ತಿದ್ದ ಅವನನ್ನು ಇಬ್ಬರು ಹಿಂಬಾಲಕರು ಎಳೆದು ತಂದರು.

ರೌಡಿ ನಾಯಕ: ಏನಾಗಿದೆಯೋ ನಿನಗೆ?

ರಿಕ್ಷಾವಾಲ : ಏನೂ ಇಲ್ಲ ಸಾರು. ಒಂದ ಮಾಡಕ್ಕೆ ಅಂತ ಓಣಿಗೆ ಹೋಗಿದ್ದೆ.

ರೌಡಿ ನಾಯಕ : ಅಷ್ಟೇನಾ? ಇವತ್ತು ಬೆಳಿಗ್ಗೆ ಏನಾಗಿದೆ ಗೊತ್ತಾ?

ರಿಕ್ಷಾ ವಾಲಾ: ಗೊತ್ತು ಸಾರು. ಪುರಚ್ಚಿ ತಲೈವರ್ ಮರಣ ಹೊಂದಿದರು.

ರೌಡಿ ನಾಯಕ: ಗೊತ್ತಿದ್ರೂ ಯಾಕೆ ರಿಕ್ಷಾ ಓಡಿಸುತ್ತಿದ್ದಿ? ಬೆನ್ನಲ್ಲಿ ತಿಮಿರು ಹೆಚ್ಚಾಗಿದೆಯಾ? ಬೇಕಾ ಗೂಸಾ?

ಕೆಲವೇ ನಿಮಿಷಗಳ ಹಿಂದೆ ರಿಕ್ಷಾದವನು ರಿಕ್ಷಾ ಬಿಟ್ಟು ಓಡಿಹೋಗಿದ್ದನ್ನು ಕಂಡಿದ್ದ ನಾನು ಅವನು ನರಸತ್ತವನು ಅಂದುಕೊಂಡಿದ್ದೆ. ಆದರೆ ಅವನು 'ಈ ಸಾರು ಮದರಾಸಿನಿಂದ ಇಲ್ಲಿಗೆ ಮೀನಾಕ್ಷಿ ಅಮ್ಮನ ಪೂಜೆಗೆ ಅಂತ ಬಂದಿದ್ದಾರೆ. ಅವರು ದೇವರ ಹೆಸರನ್ನು ಹೇಳಲಾಗಿ ನಾನು ದೇವಸ್ಥಾನಕ್ಕೆ ಕರೆದುಕೊಂಡು ಹೋಗಲು ಒಪ್ಪಿದೆ. ಬೇಕಾದರೆ ಸಾರು ಅವರನ್ನೇ ಕೇಳಿ. ನಾನು ನಿಮ್ಮನ್ನು ದೇವಸ್ಥಾನಕ್ಕೆ ಕರೆದುಕೊಂಡು ಹೋಗ್ತೀನಿ, ಆದರೆ ಒಂದು ಪೈಸೆಯನ್ನೂ ತೆಗೆದುಕೊಳ್ಳುವುದಿಲ್ಲ ಅಂತ ಹೇಳಿದೆ. ಬೇಕಾದರೆ ಸಾರುನ ಕೇಳಿ' ಎಂದಾಗ ಇವನು ಬಲೇ ಚಾಲಾಕಿ ಇದಾನೆ ಅನ್ನಿಸಿತು.

ರೌಡಿ ನಾಯಕ: ಹಾಗೋ ಸರಿ. ನಾವೂ ನಿನ್ನ ರಿಕ್ಷಾದಲ್ಲೇ ಬರ್‍ತೀವಿ. ಸಾರ್‌ನ ದೇವಸ್ಥಾನದ ಬಳಿ ಇಳಿಸು... ಆಮೇಲೆ ಉಳಿದ ದಿವಸವೆಲ್ಲ ನಮ್ಮನ್ನು ರಿಕ್ಷಾದಲ್ಲಿ... ಬಿಟ್ಟು ಓಡಾಡಿಸಬೇಕು.

ನನ್ನನ್ನು ದೇವಸ್ಥಾನದ ಬಳಿ ಎ... ಹಾಕಿದರು. ಅನಿರೀಕ್ಷಿತವಾಗಿ ದೇವಿ... ಮೀನಾಕ್ಷಿ ದರ್ಶನ ಮಾಡುವಂತಾಯಿತು... ಇದನ್ನು ನನ್ನ ಹೆಂಡತಿಗೆ ಹೇಳಿದಾಗ... 'ನಿಮಗೆ ಸರಿಯಾಗೆ ಆಗಿದೆ. ಮಧುರೈಗೆ... ಹೋಗಿ ಮೀನಾಕ್ಷಿ ಅಮ್ಮನ ದರ್ಶನ... ಮಾಡಲಿಲ್ಲ ಅಂದರೆ ಹೇಗೆ? ನಿಮಗೆ... ಬುದ್ಧಿ ಬರಲಿ ಅಂತ ಆ ತಾಯಿ ಹೀಗೆ... ಮಾಡಿ ಕರೆಸಿಕೊಂಡಳು' ಅಂದಳು!

ಈ ಅನುಭವ ಆದ ನಂತರ ಮತ್ತೆ ಇನ್ನೊಂದು... ರಿಕ್ಷಾದಲ್ಲಿ ಪಯಣಿಸುವ ಪ್ರಯೋಗ ನಡೆಸಲು ಮನಸ್ಸು... ಬರಲಿಲ್ಲ, ಹಸಿವು ಬಳಲಿಕೆಯಿಂದ ಸುಸ್ತಾಗಿ... ನಡೆದುಕೊಂಡೇ ಹೋಟೆಲ್ ತಲುಪಿದೆ. ಬೀದಿ... ಬದಿಯಲ್ಲಿ ಮಾರಾಟವಾಗುತ್ತಿದ್ದ ಕಡಲೆಕಾಯಿ... ಬಾಳೆಹಣ್ಣಿನಿಂದಲೇ ಹಸಿದ ಹೊಟ್ಟೆ ಶಮನ... ಮಾಡಿಕೊಂಡೆ.

ಹಿಂದಿನ ವಾರ ನಮ್ಮ ಕಚೇರಿಯಲ್ಲಿ ನಡೆದ ನೌಕರರ... ಚರ್ಚೆ ನೆನಪಿಗೆ ಬಂತು. ಮೀನುಗಾರರ ಕುರಿತು... ಸಂಶೋಧನೆ ನಡೆಸಲು ನನ್ನ ಕೆಲವು ಸಹ ಉದ್ಯೋಗಿಗಳು... ಬಾಂಗ್ಲಾ ದೇಶದ ಒಂದು ಕೊಂಪೆಯ ಹಳ್ಳಿಗೆ... ಹೋಗಿದ್ದರು. ಅಲ್ಲಿ ತಿನ್ನಲು ಕುಡಿಯಲು ಏನೂ... ಸಿಗಲಿಲ್ಲವಂತೆ. ಅನಿವಾರ್ಯವಾಗಿ ಹಸಿದೇ... ಇರಬೇಕಾಯಿತಂತೆ. ಅದರ ಬಗ್ಗೆ ಗೊಣಗಾಡಿದರು... ಇದನ್ನು ಕೇಳಿಸಿಕೊಂಡ ನನ್ನ ಸ್ವೀಡನ್ ದೇಶದ... ಮೇಲಧಿಕಾರಿ ಪ್ರತಿಕ್ರಿಯಿಸಿದರು: 'ನಮ್ಮಲ್ಲಿ ಬಹುಮಂದಿ... ಬಹಳ ಸಲ ಅತಿಹೆಚ್ಚು ತಿಂತೀವಿ. ಉಪವಾಸ ಬೀಳುವ... ಪ್ರಸಂಗ ದೊರೆತರೆ ಅಂತಹ ಅವಕಾಶವನ್ನು ನಮ್ಮ... ದೇಹವನ್ನು ಸರಿಯಾಗಿ ಇಡಲು ಬಾಚಿ ಬಳಸಿ... ಕೊಳ್ಳಬೇಕು.'

ಮಧುರೈನಲ್ಲಿ ನಾನು ಉಳಿದ ಸಮಯದಲ್ಲಿ... ಮಾಡಿದ್ದು ಅದನ್ನೇ. ಮಾರನೆ ಬೆಳಿಗ್ಗೆ-ನನ್ನ... ಉಪವಾಸವನ್ನು ಮುರಿದದ್ದು ಮಧುರೈ-ಚೆನ್ನೈ ವಿಮಾನದ... ಗಗನಸಖಿ ಕಾಫಿ ನೀಡುವುದರ ಮುಖಾಂತರ. ಈ... ಘಟನೆಯನ್ನು ಯಾವ ವರದಿಗಾರನೂ... ಛಾಯಾಚಿತ್ರಗಾರನೂ ದಾಖಲಿಸಲಿಲ್ಲ ಎನ್ನುವುದು ಬೇರೆ... ಮಾತು.

ಮಧುರೈ ಅನುಭವದಿಂದ ನಾನು ಬುದ್ಧಿ ಕಲಿತೆ... ನಾನು ಪರ ಊರಿಗೆ ಪ್ರಯಾಣಿಸಬೇಕಾಗಿ ಬಂದಾಗಲೆಲ್ಲ... ತಮ್ಮ ಸಾವಿನಿಂದ ಗಲಭೆ ಮೂಡಿಸಬಹುದಾದ ಎಲ್ಲ... ವಿಐಪಿಗಳೂ ಆರೋಗ್ಯದಿಂದ ಇದ್ದಾರೆ ಎಂಬುದನ್ನು... ಖಚಿತಪಡಿಸಿಕೊಳ್ಳುತ್ತೇನೆ.

-ಎಚ್.ಎಲ್. ಕೇಶವಮೂರ್ತಿ

ವೀಆರ್‌ಎಲ್ ಮಾಲೀಕನ 'ವಿಕ' ಬಸ್ ಮುಗ್ಗರಿಸಿತಲ್ಲಾ?

ಲಂಕೇಶ್ ಮುಖಪುಟದಲ್ಲಿ ಸ್ನೇಕ್ ಸಿಂಡ್ರೋಮ್ ಎಂಬ ತಲೆಬರಹದಲ್ಲಿ ಜಾರಿ ಬಿದ್ದು ಹೊಲಸು ಮೆತ್ತಿಕೊಂಡಿರುವ ಹಲವು ಮುಖಗಳ ಹಣೆಬರಹಗಳನ್ನು ಪ್ರಕಟಿಸಿದ್ದಕ್ಕೆ Thanks.




ವಿ.ಎಸ್. ನಾಯಕ್ ಬಲೆಗೆ ಬಿದ್ದ ಮಿಕಗಳು ಒಂದಕ್ಕಿಂತ ಒಂದು ದೊಡ್ಡವು. ಸಚಿನ್ ಬ್ಯಾಟ್ ಹಿಡಿದು ಮಾಂತ್ರಿಕನಂತೆ ಸಿಕ್ಸರ್, ಬೌಂಡ್ರಿ ಹೊಡೆದರೆ ಅದ್ಭುತ. ಆದ್ರೆ ಅದೇ ಸಚಿನ್ ಇಂದು ಸರ್ಪದೋಷವೆಂದು ಪೂಜೆ ಸಲ್ಲಿಸಿದರೆ ಅವನಂಥ ಮೂರ್ಖ ಯಾರೂ ಇಲ್ಲ. ಟೀವಿ ಜಾಹೀರಾತಿನಲ್ಲಿ ಬೂಸ್ಟ್ ಈಸ್ ದಿ ಸೀಕ್ರೆಟ್ ಆಫ್ ಮೈ ಎನರ್ಜಿ ಅನ್ನೋ ಸಚಿನ್ ಹೀಗೆ ಯಾಕ್ ಆದ? ಇನ್ನೊಂದು ವಿಷಯ 'ಮುಕ್ತ' ನಿರ್ದೇಶಕ ಟಿ.ಎನ್. ಸೀತಾರಾಮ್ ಕುಕ್ಕೆಯಲ್ಲಿ ಕುಕ್ಕರಲು ಕುಂತಿದ್ದು ನಿಜವಾಗಲೂ ನಾಚಿಕೆಗೇಡಿನ ಪರಿಸ್ಥಿತಿ. ಇವರೆಲ್ಲ ಹೇಳೋದು ಆಚಾರ ಮಾಡೋದು ಅನಾಚಾರ ಅನ್ನುವ ಹಾಗೆ ಆಯ್ತು.

-ಮುತ್ತಣ್ಣಪೂಜಾರ್, ಕದಲಬಾರು

ಈ ವಾರದ ಸಂಚಿಕೆಯಲ್ಲಿ '171 ಕೋಟಿಗೆ ವಿಜಯ ಕರ್ನಾಟಕ ಹರಾಜ್' ಎಂಬ ಮುಖ ಪುಟ ಹೊತ್ತು ಬಂದ ಪತ್ರಿಕೆ ನೋಡಿ ದಿಗಿಲು ಆಯಿತು. ಆದರೆ ಪತ್ರಿಕೆಯ ಪುಟ ಬಿಚ್ಚಿ ಸಂಪಾದಕೀಯ ಮತ್ತು ವರದಿ ಓದುತ್ತಿದ್ದರೆ ಎಷ್ಟೊಂದು ಸ್ವಾರಸ್ಯಕರವಾಗಿತ್ತು! ಸತತ ಐದು ವರ್ಷಗಳ ಕಾಲ ಪತ್ರಿಕೋದ್ಯಮವೆಂಬ ಕಾಡು ಕುದುರೆಯ ಮೇಲೆ ಸವಾರಿ ನಡೆಸುತ್ತಾ ಬಂದ ವಿಜಯ ಸಂಕೇಶ್ವರ್ ಎಂಬ ಉದ್ಯಮಿಪತಿ, ತಾನು ಲಾರಿ ಡ್ರೈವರೋ, ವಿಜಯಾನಂದ ರೋಡ್‌ಲೈನ್ಸ್ ಮಾಲೀಕನೋ ಅಥವಾ ಒಂದು ಪಕ್ಷದ ಸಂಸದನೋ ಯಾವುದನ್ನೂ ಸರಿಯಾಗಿ ನಿಭಾಯಿಸಲಿಲ್ಲ ಅನ್ನಿಸುತ್ತೆ. ಈಗ ತನ್ನ ಪತ್ರಿಕೆ ಮತ್ತು ಅದರ ಒಡೆತನ ಹರಾಜಿಗಿಟ್ಟು ಗುಡ್ ಬೈ ಹೇಳುತ್ತಿರುವುದು ನೋಡಿದರೆ ಇಂಥ ಮಹಾಶಯ ಇನ್ನೊಬ್ಬ ಪತ್ರಿಕಾ ಉದ್ಯಮಕ್ಕೆ ಹುಟ್ಟದಿರಲಿ ಅನ್ನಿಸುತ್ತೆ...

-ರಮಜಾನ ಕೆ. ಕೊರ್ತಿ, ಬಾದಾಮಿ



ನಾನು ತಮ್ಮ ಪತ್ರಿಕೆಯು ಪ್ರಾರಂಭವಾದಾಗಿನಿಂದ ಇಂದಿನವರೆಗೂ ಕೊಂಡು ಓದುತ್ತಿದ್ದೇನೆ. ಪ್ರಾರಂಭದಿಂದ ಇಂದಿನವರೆಗೂ ನಿಮ್ಮ ಪ್ರತಿಯೊಂದು ಸಂಚಿಕೆಯೂ ನನ್ನ ಸಂಗ್ರಹಾಲಯದಲ್ಲಿ ಜೋಪಾನವಾಗಿವೆ. ಸಮಯ ಸಿಕ್ಕಾಗಲೆಲ್ಲಾ ಕಂಡಹಾಗೆ ಸಂಪಾದಕೀಯ, ಬಯಲು ಸೀಮೆ ಕಟ್ಟೆಪುರಾಣ, ಮರೆಯುವ ಮುನ್ನ, ಥೂತ್ತೇರಿ, ಅಣಕ ಇವುಗಳನ್ನು ಓದುತ್ತಿರುತ್ತೇನೆ. ಒಂದಲ್ಲ ಒಂದು ರೀತಿಯಲ್ಲಿ ನಮ್ಮ ಜ್ಞಾನಬಿಂದಿಗೆಯು ತುಂಬಲು ಲಂಕೇಶ್ ನೆರವಾಗುತ್ತಿದೆ ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತೇನೆ.

-ಶಿವಕುಮಾರ್, ಮೈಸೂರು

ಹೊಗಾ ತೆಗಾ ಲಿಖಿ

ಸ್ಪಷ್ಟೀಕರಣ

ಕಳೆದ ಸಂಚಿಕೆಯ '171 ಕೋಟಿಗೆ ವಿಜಯಕರ್ನಾಟಕ ಹರಾಜ್' ಎಂಬ ವರದಿಯಲ್ಲಿ 'ಉಷಾಕಿರಣ' ದಿನಪತ್ರಿಕೆಯ ಸಂಪಾದಕರಾದ ವೆಂಕಟನಾರಾಯಣರವರ ಹೆಸರನ್ನು ವೆಂಕಟರಮಣ ಭಟ್ ಎಂಬುದಾಗಿ ತಪ್ಪಾಗಿ ಬರೆಯಲಾಗಿತ್ತು.

ಈ ಅಚಾತುರ್ಯಕ್ಕಾಗಿ ವಿಷಾದಿಸುತ್ತೇವೆ.

-ಸಂ

ಅಪರೂಪದ ಪ್ರತಿಭೆ ರೇಶ್ಮೆ....

ಕಳೆದ ವಾರ ಗೌರಿಯವರು ಬರೆದ ರವೀಂದ್ರ ರೇಶ್ಮೆ ಅಪಘಾತದ ಸುದ್ದಿ ಓದಿ ನೋವಾಯಿತು. ಗೌರಿಯವರ ಹಾರ್ಲಿಕೆ ನುಡಿಯ ಬಗ್ಗೆ, ಸರ್ಕಾರ ನಡೆಸುವ 'ಏರೋ ಸ್ಪೋರ್ಟ್ಸ್'ನಲ್ಲಿನ ಅವ್ಯವಸ್ಥೆ ಬೇಜವಾಬ್ದಾರಿತನದ ಬಗ್ಗೆ ಬರೆದ ಟಿಪ್ಪಣಿಗೆ ರೇಶ್ಮೆಯವರು ಮೆಚ್ಚುಗೆ ಸೂಚಿಸಿ ಪ್ರೀತಿಯಿಂದ ಆಸ್ಪತ್ರೆಯಿಂದಲೇ ಬರೆದ ಪತ್ರ ಓದಿ ಅವರ ಬರೆಯುವ ತುಡಿತ ಅರಿವಾಯಿತು. ಪತ್ರಿಕೆಯ ಪ್ರಾರಂಭದಲ್ಲಿ ಬಿ. ಚಂದ್ರೇಗೌಡರು, ಎಚ್.ಎಲ್. ಕೇಶವಮೂರ್ತಿಯವರು, ಮುಂತಾದವರ ಜೊತೆ ರೇಶ್ಮೆಯವರನ್ನು ಕಾಣದೆ ನಿರಾಸೆಯಾಗಿತ್ತು, ನಂತರ 'ಲಂಕೇಶ್'ನಲ್ಲಿ ಅವರ ಲೇಖನಗಳನ್ನು ಓದಿ ಸಂತೋಷಗೊಂಡವರಲ್ಲಿ ನಾನೂ ಒಬ್ಬ. ಪಿ. ಲಂಕೇಶರ ಬಳಗದ ಅಪರೂಪದ ಪ್ರತಿಭೆ ಬೇಗ ಗುಣಮುಖರಾಗಲಿ ಎಂದು ಹಾರೈಸುವೆ.

-ದಿ.ಎಲ್. ಮಂಜು, ಮಂಡ್ಯ

ಕಾವ್ಯವೆಂದರೆ ಮರಳ ಕಣದಲ್ಲಿ ಜಗತ್ತನ್ನು ಕಾಣುವುದು -ಬ್ಲೇಕ್

ನಮ್ಮ ಅಪ್ಪಾಜಿ ಮನೆಯಲ್ಲಿ ಇದ್ದರೆ ನಮಗೆಲ್ಲಾ ...ನ್ನ! ಅವರು ಎಷ್ಟೇ ಬ್ಯುಸಿ ಇದ್ದರೂ ಸಾಧ್ಯವಾದಾಗಲೆಲ್ಲ ...ಮ್ಮ ಶೂಟಿಂಗ್‌ನಿಂದ ಫ್ರೀ ಮಾಡಿಕೊಂಡು ಮನೆಗೆ ...ಯುತ್ತಿದ್ದರು. ಮಕ್ಕಳ ಜೊತೆ ಆಟವಾಡುವುದೆಂದರೆ ಅವರಿಗೆ ...ಲ್ಲಿಲ್ಲದ ಇಷ್ಟ. ಕೆಲವೊಮ್ಮೆ ಶೂಟಿಂಗ್ ಇಲ್ಲದಿದ್ದಾಗ ...ನೆಯಲ್ಲಿದ್ದ ಎಲ್ಲ ಮಕ್ಕಳನ್ನು ಅಪ್ಪಾಜಿ ಬೀಚ್‌ಗೆ ...ದುಕೊಂಡು ಹೋಗಿ ನಮ್ಮೆಲ್ಲರೊಂದಿಗೆ ಆಟವಾಡು...ತ್ತಿದ್ದರು.

ಈ ಬೀಚ್ ಪಾರ್ಟಿಯ ವಿಶೇಷತೆ ಏನೆಂದರೆ ಅಪ್ಪಾಜಿ ...ಮಗೆಲ್ಲಾ ಬಿರಿಯಾನಿ ತರಿಸಿಕೊಡುತ್ತಿದ್ದದ್ದು. ಬಿರಿಯಾನಿ ...ದ ನಂತರ ಅಲ್ಲಿಗೇ ಟೀ, ಕಾಫಿ ತರಿಸಿಕೊಡುತ್ತಿದ್ದರು. ...ಜೆ ಸೂರ್ಯ ಮುಳುಗಿದ ನಂತರವೇ ನಾವೆಲ್ಲಾ ಮನೆಗೆ ...ತಿರುಗುತ್ತಿದ್ದೆವು. ಆ ದಿನಗಳಲ್ಲಿ ನಮ್ಮೊಂದಿಗೆ ಮಾತ್ರವಲ್ಲ, ...ನ್ನ ಕಸಿನ್ಸ್‌ಗಳ ಜೊತೆ ಕೂಡ ಅಪ್ಪಾಜಿ ಚಿಕ್ಕ ಮಗುವಿನ ...ತೆ ಆಟವಾಡುತ್ತಿದ್ದರು. ಈ ಕಾರಣಕ್ಕೇ ಅಪ್ಪಾಜಿಯವರ ...ಟಿಂಗ್‌ಗೆ ಯಾವತ್ತು ರಜೆ ಇರುತ್ತದೆ ಎಂದು ನಾವೆಲ್ಲಾ ...ತುರದಿಂದ ಕಾಯುತ್ತಿದ್ದೆವು. ನಮ್ಮ ತರಹ ಅಪ್ಪಾಜಿ ...ದ ರಜಾ ದಿನಗಳಿಗಾಗಿ ಕಾತರಿಸುತ್ತಿದ್ದರು. ಅವರೊಂದಿಗೆ ...ಲ ತೀರದಲ್ಲಿ ಬಿರಿಯಾನಿ ತಿಂದ ಅದೆಷ್ಟೋ ಕ್ಷಣಗಳು ...ನ್ನ ಮನಸ್ಸಿನಲ್ಲಿ ಅಚ್ಚಳಿಯದೆ ಹಾಗೇ ಉಳಿದಿವೆ.

ಅಪ್ಪಾಜಿ ಮನೆಯಲ್ಲಿ ಇದ್ದಾರೆಂದರೆ ಆ ದಿನ ನಾನ್ ...ಜ್ ಊಟ ಗ್ಯಾರೆಂಟಿ. ಉಳಿದ ದಿನಗಳಲ್ಲಿ ನಮ್ಮ ...ನೆಯಲ್ಲಿ ವೆಜಿಟೇರಿಯನ್ ಊಟ. ತಾವು ಮನೆಯಲ್ಲಿದ್ದ ...ಾ ದಿನಗಳಲ್ಲಿ ಮಕ್ಕಳಿಗೆಲ್ಲಾ ನಾನ್‌ವೆಜ್ ಊಟ ...ಕಿಸಬೇಕೆಂಬುದು ಅಪ್ಪಾಜಿಯವರ ಆದೇಶವಾಗಿತ್ತು.

ನಮಗೆ ಸಿನಿಮಾ ನೋಡುವ ಹುಚ್ಚು ಇರಲಿಲ್ಲ. ...ದರೆ ತಿಂಗಳಿಗೊಂದು ಬಾರಿ ನಮ್ಮೆಲ್ಲರನ್ನೂ ವರದಪ್ಪ ...ಮಾಕ್ಕೆ ಕಳುಹಿಸುತ್ತಿದ್ದರು. ನಾವು ಯಾವ ಸಿನಿಮಾ ...ೀಡಬಹುದು, ಯಾವ ಸಿನಿಮಾ ನೋಡಬಾರದು ...ಬ ನಿರ್ಧಾರ ವರದಪ್ಪನವರದ್ದಾಗಿರುತ್ತಿತ್ತು. ಸಿನಿಮಾ ...ೀಡುವ ದಿನ ನಾವಷ್ಟೂ ಕಸಿನ್ಸ್‌ಗಳು ತಯಾರಾಗಿ ...ತ್ತಿದ್ದೆವು. ನಮ್ಮನ್ನೆಲ್ಲ ಕರೆದುಕೊಂಡು ಹೋಗುವ ...ಾಬ್ದಾರಿ ಡ್ರೈವರ್ ಯಲ್ಲಪ್ಪನವರದ್ದಾಗಿತ್ತು. ಸಾಧಾರಣ...ಗಿ ನಮ್ಮ ಚಿಕ್ಕಪ್ಪ ನಮಗೆ ಇಂಗ್ಲಿಷ್ ಸಿನಿಮಾವನ್ನೇ ...ೀರಿಸುತ್ತಿದರು. ಆ ಸಿನಿಮಾವನ್ನು ಅವರು ನೋಡಿದ ...ತರವೇ ನಮಗೆ ನೋಡಲು ಶಿಫಾರಸ್ಸು ಮಾಡುತ್ತಿದ್ದರು. ...ರುವ ಕಾರಿದ್ದ ಮಕ್ಕಳ ಚಿತ್ರ 'ಚಿಟಿ ಚಿಟಿ ಬ್ಯಾಂಗ್ ...ಬ್ಯಾಂಗ್' ಸೇರಿದಂತೆ ಹಲವಾರು ಇಂಗ್ಲಿಷ್ ಸಿನಿಮಾಗಳನ್ನು ...ೀಡಿದ ನೆನಪು ಇನ್ನೂ ಇದೆ.

ಸಿನಿಮಾ ನೋಡಿದ ನಂತರ ನಾವು ಎಂದೂ ನೇರವಾಗಿ ...ನೆಗೆ ಹಿಂತಿರುಗುತ್ತಿರಲಿಲ್ಲ. ಪ್ರತಿ ಬಾರಿಯೂ ಚಿಕ್ಕಪ್ಪ ...ಮ್ಮನ್ನು ಯಾವುದಾದರೊಂದು ರೆಸ್ಟೋರೆಂಟಿಗೆ ...ದೊಯ್ಯುತ್ತಿದ್ದರು. ಹೆಚ್ಚಿನ ಸಂದರ್ಭಗಳಲ್ಲಿ ವುಡ್‌ಲ್ಯಾಂಡ್ಸ್ ...ರ ಡ್ರೈವ್-ಇನ್-ರೆಸ್ಟೋರೆಂಟಿಗೆ ನಮ್ಮನ್ನು ...ದುಕೊಂಡು ಹೋಗಿತ್ತಿದ್ದರು. ಅಲ್ಲಿ ನಮಗೆಲ್ಲಾ ಸ್ನಾಕ್ಸ್, ...ಟ್ಸ್, ಕಾಫಿ ಇತ್ಯಾದಿಗಳು ಸರಬರಾಜಾಗುತ್ತಿದ್ದವು. ...ಜವಾದ ಇಂಗ್ಲಿಷ್ ಸಿನಿಮಾ, ಆನಂತರ ತಿಂಡಿ- ಕಾಫಿ...

ಇದೇ ನಮಗೆ ದೊಡ್ಡ ಥ್ರಿಲ್ ನೀಡುತ್ತಿದ್ದವು.

ಈ ಘಟನೆಗಳನ್ನೆಲ್ಲಾ ನಾನು ಹೇಗೆ ಮರೆಯಲು ಸಾಧ್ಯವಿಲ್ಲವೋ ಹಾಗೆಯೇ ನಾನಾಗಲೇ ಹೇಳಿರುವಂತೆ ನನ್ನ ಅವ್ವ ನನ್ನನ್ನು ಸ್ಕೂಲಿಗೆ ಕರೆದುಕೊಂಡು ಹೋಗುತ್ತಿದ್ದ ಕ್ಷಣಗಳನ್ನೂ ಮರೆಯಲು ಸಾಧ್ಯವಿಲ್ಲ. ಅಂದಹಾಗೆ ನನ್ನವ್ವನ



ಸಿನಿಮಾಗೂ, ನನಗೂ ಆಗುವುದಿಲ್ಲ!

ಬಗ್ಗೆ ಈಗ ನನಗೆ ಇನ್ನೊಂದು ವಿಷಯ ನೆನಪಾಗುತ್ತಿದೆ. ನನ್ನವ್ವ ಯಾವಾಗಲೂ ತಮ್ಮ ಸೊಂಟದಲ್ಲಿ ಒಂದು ಬಟ್ಟೆಯ ಕೈಚೀಲವನ್ನು ಸಿಗಿಸಿಕೊಂಡಿರುತ್ತಿದ್ದರು. ಅದರಲ್ಲಿ ಯಾವಾಗಲೂ ಹಣವಿರುತ್ತಿತ್ತು. ಆ ಚೀಲವನ್ನು ಕಂಡರೆ ನನಗೆ ಏನೋ ಒಂದು ರೀತಿಯ ಆಕರ್ಷಣೆ. ಅದೆಷ್ಟೋ ಬಾರಿ ನಾನು ನನ್ನವ್ವನ ಚೀಲದಿಂದ ಐದು ಪೈಸೆ, ಹತ್ತು ಪೈಸೆಯನ್ನು ಕದ್ದಿದ್ದೆ. ಅಷ್ಟೇ ಅಲ್ಲ, ಕೆಲವು ಬಾರಿ ಅವ್ವನಿಗೆ ಕನ್ಫ್ಯೂಸ್ ಮಾಡಲು ಎಲ್ಲಿಂದಲೋ ಹಣವನ್ನು ತಂದು ಅವರ ಚೀಲಕ್ಕೆ ಹಾಕುತ್ತಿದ್ದೆ. ಇಂತಹ ತುಂಟಾಟಗಳಲ್ಲಿ ನನಗೆ ಒಂದು ರೀತಿಯ ವಿಶೇಷ ವಾದ ಆನಂದ ಸಿಗುತ್ತಿತ್ತು.

ನಿರೂಪಣೆ: ಸದಾಶಿವ ಶೆಣೈ

6



ಹ್ಯಾಟ್ರಿಕ್ ಹೀರೋನ ಹಾರ್ಟ್ ಬೀಟ್!

ನಾವು ಬೇಸಿಗೆ ರಜೆ ಬಂದಾಗ ಬೆಂಗಳೂರಿಗೆ ಬರುತ್ತಿದ್ದೆವು. ಆದರೆ ಇಲ್ಲಿ ನಾವು ಎರಡು ದಿನಗಳಿಗಿಂತ ಹೆಚ್ಚು ಕಾಲವನ್ನು ಕಳೆಯುತ್ತಿರಲಿಲ್ಲ. ಬೆಂಗಳೂರು ನಗರವನ್ನು ಸುತ್ತಾಡುವ ಆಸಕ್ತಿಯೂ ಆಗ ನಮಗಿರಲಿಲ್ಲ. ಹಾಗೆಯೇ ನಾವು ಇಲ್ಲಿದ್ದಾಗ ಯಾವತ್ತೂ ಸಿನಿಮಾ ಶೂಟಿಂಗ್ ನೋಡಲು ಹೋಗುತ್ತಿರಲಿಲ್ಲ. ಅದರ ಬಗ್ಗೆಯೂ ನಮಗೆ ವಿಶೇಷ ಆಸಕ್ತಿಯೇನೂ ಇರಲಿಲ್ಲ. ಇಲ್ಲಿ ಎರಡು ದಿನ ಕಳೆದ ನಂತರ ನಾವೆಲ್ಲ ಗಾಜನೂರಿಗೆ ಹೋಗುತ್ತಿದ್ದೆವು. ಅಲ್ಲಿಗೆ ಹೋಗುವುದೆಂದರೆ ನಮಗೆಲ್ಲ ಎಲ್ಲಿಲ್ಲದ ಸಂತೋಷ. ಹೀಗಾಗಿ ರಜಾ ದಿನ ಅಂದ ಕೂಡಲೇ ನಮಗೆಲ್ಲಾ ನೆನಪಾಗುತ್ತಿದ್ದದ್ದು ಗಾಜನೂರು ಮತ್ತು ಅದರ ಸುತ್ತ ಇರುವ ಬೆಟ್ಟ ಗುಡ್ಡಗಳು.

ಗಾಜನೂರಿನಲ್ಲಿ ನಾವು ಸುತ್ತಾಡಿದ ದಿನಗಳಿಗೆ ಲೆಕ್ಕವೇ ಇಲ್ಲ. ನಾವು ಕಸಿನ್ಸ್‌ಗಳೆಲ್ಲಾ ಅಲ್ಲಿನ ಮರಗಳನ್ನು ಹತ್ತುವುದರಲ್ಲಿ, ಗುಡ್ಡ ಬೆಟ್ಟ, ಇಳಿಜಾರುಗಳಲ್ಲಿ ಆಟವಾಡುವುದರಲ್ಲಿ ಅತ್ಯಂತ ಆನಂದವನ್ನು ಪಡೆಯುತ್ತಿದ್ದೆವು. ಆಗಲೂ ಅಷ್ಟೆ, ಶೂಟಿಂಗ್ ಇಲ್ಲದಿದ್ದಾಗ ನಮ್ಮ ಅಪ್ಪಾಜಿ ಗಾಜನೂರಿಗೆ ಬಂದು ನಮ್ಮನ್ನು ಸೇರಿಕೊಳ್ಳುತ್ತಿದ್ದರು. ಆ ಸಂದರ್ಭ, ಆ ಮಜಾ, ಆ ಸಂಭ್ರಮ ನೆನೆಸಿಕೊಂಡರೆ ಇವತ್ತಿಗೂ ನನ್ನ ಮೈ ಜುಮ್ಮೆನ್ನುತ್ತದೆ. ನನಗೆ ಆ ಹಳೆಯ ದಿನಗಳು, ಆ ಕ್ಷಣಗಳು ನೆನಪಾಗುತ್ತಾ ಹೋದಂತೆ ನನ್ನ ಅಪ್ಪಾಜಿಯ ನೆನಪು ಮತ್ತೆ ಮತ್ತೆ ಕಾಡಲಾರಂಭಿಸುತ್ತವೆ......

ನಾನು 'ಧೂಮಕೇತು' ಚಿತ್ರದಲ್ಲಿ ನಟಿಸಿದ್ದರ ಬಗ್ಗೆ ನೆನಪಿಲ್ಲದಿದ್ದರೂ, ಆನಂತರ 'ಶ್ರೀನಿವಾಸ ಕಲ್ಯಾಣ' ಚಿತ್ರದಲ್ಲಿ ನಟಿಸಿದ್ದು ಸ್ಪಷ್ಟವಾಗಿ ನೆನಪಿದೆ. ಈ ಚಿತ್ರದಲ್ಲಿ ನಟಿಸುತ್ತೀಯಾ ಎಂದು ಮನೆಯವರು ಕೇಳಿದಾಗ ನನಗೆ "ನೋ.." ಎನ್ನಲು ಮನಸ್ಸು ಬರಲಿಲ್ಲ. ಯಾಕೆಂದರೆ ಮುಖಕ್ಕೆ ಬಣ್ಣ ಹಚ್ಚಿ ನಟಿಸಬೇಕೆಂಬ ಆಸೆ ನನ್ನಲ್ಲಿ ಆಗ ಚಿಕ್ಕದಾಗಿ ಚಿಗುರೊಡೆದಿತ್ತು. ಆದರೆ ಈ ಚಿತ್ರದ ಶೂಟಿಂಗ್ ಸಮಯದಲ್ಲಿ ನಾನು ಪಟ್ಟ ಕಷ್ಟ ಅಷ್ಟಿಷ್ಟಲ್ಲ.

ನನಗಿನ್ನೂ ನೆನಪಿದೆ.... ಆ ಚಿತ್ರದಲ್ಲಿ ನಾನು ಮಂಜುಳಾ ಅವರ ಸಹೋದರನಾಗಿ ನಟಿಸಿದ್ದೆ. ನನಗೆ ಶೂಟಿಂಗ್ ಟೈಂ ಅನ್ನು ಅನುಸರಿಸುವುದು ಬಹಳ ಕಷ್ಟವಾಗಿದ್ದರಿಂದ ಶೂಟಿಂಗ್‌ಗೆ ಸರಿಯಾದ ಸಮಯಕ್ಕೆ ಹೋಗುವುದು ದೊಡ್ಡ ಹಿಂಸೆಯಾಗುತ್ತಿತ್ತು. ಇದಕ್ಕೆ ಮುಖ್ಯ ಕಾರಣ ನಾನು ಟೈಮಿಗೆ ಸರಿಯಾಗಿ ಊಟ ಮಾಡುವ ಅಭ್ಯಾಸ ಉಳ್ಳವನಾಗಿದ್ದು, ಆದರೆ ಈ ಶೂಟಿಂಗ್‌ನಲ್ಲಿ ಊಟದ ಸಮಯ ಏರುಪೇರಾಗುತ್ತಿತ್ತು. ಅಷ್ಟೇ ಅಲ್ಲ, ದಿನ ಪೂರ್ತಿ ತಲೆಗೆ ವಿಗ್ ಹಾಕಿಕೊಂಡು ಗಂಟೆಗಟ್ಟಲೆ ಕಾಯುತ್ತಾ ಕೂರುವುದು ನನಗೆ ದಿನನಿತ್ಯದ ಯಾತನೆಯಾಗಿತ್ತು. ಆಗ ಎಷ್ಟೋ ಬಾರಿ "ಯಾಕಪ್ಪಾ ನಾನು ಈ ಸಿನಿಮಾದಲ್ಲಿ ನಟಿಸೋದಕ್ಕೆ ಒಪ್ಕೊಂಡೆ" ಎಂದು ನನಗೆ ನಾನೇ ಶಾಪ ಹಾಕಿಕೊಂಡಿದ್ದೂ ಉಂಟು.

ಈ ಎಲ್ಲ ಕಾರಣಗಳು ಸೇರಿದ್ದರಿಂದ ಎಷ್ಟೋ ಬಾರಿ ಆ ಚಿತ್ರದ ನಿರ್ದೇಶಕರು ನನ್ನಿಂದಾಗಿ ಚಿತ್ರೀಕರಣದಲ್ಲಿ ಕಾಂಪ್ರೊಮೈಸ್ ಮಾಡಿಕೊಂಡಿದ್ದೂ ಉಂಟು. ತಲೆಗೆ ವಿಗ್ ಹಾಕಿಕೊಂಡು, ವಿಚಿತ್ರವಾದ ಉಡುಪು ಧರಿಸಿ ಇಡೀ ದಿನ ಕುಳಿತುಕೊಳ್ಳುವುದು ನನ್ನಿಂದ ಸಾಧ್ಯವಾಗುತ್ತಿರಲಿಲ್ಲ. ಆದ್ದರಿಂದ ನಾನು ವಿಗ್ ಹಾಕದೇ ಆ ಚಿತ್ರದ ಕೆಲವು ದೃಶ್ಯಗಳಲ್ಲಿ ನಟಿಸಿದ್ದೆ. ಕೆಲವು ದೃಶ್ಯಗಳಲ್ಲಿ ನಾನು ನಾಪತ್ತೆಯಾಗಿರುವುದೂ ಇದೆ. ಇದನ್ನೆಲ್ಲಾ ನೆನೆಸಿಕೊಂಡರೆ ನನಗೀಗ ನಗು ಬರುತ್ತದೆ. ಸಿನಿಮಾ ಜಗತ್ತು ಹೇಗಿರುತ್ತದೆ ಅಂದರೆ ಚಿತ್ರೀಕರಣ ನಡೆಯುವಾಗ ಬೇರೆಯವರು ನಟಿಸುತ್ತಿದ್ದರೆ ನಾವೆಲ್ಲಾ ನಗುತ್ತಿರುವವರಂತೆ ನಟಿಸಬೇಕಿರುತ್ತದೆ. ಆದರೆ ಆ ಚಿಕ್ಕ ವಯಸ್ಸಿನಲ್ಲಿ ಹಾಗೆ ಬಲವಂತವಾಗಿ ನಗುವುದು ನನಗೆ ಕಷ್ಟದ ಕೆಲಸವಾಗಿತ್ತು. ಆಗಲೇ ಸಿನಿಮಾ ಎಂದರೆ ಹೂವಿನ ಹಾಸಿಗೆಯಲ್ಲ ಬದಲಾಗಿ ಕಲ್ಲು ಮುಳ್ಳಿನ ದಾರಿ ಎಂಬುದರ ಬಗ್ಗೆ ನನಗೆ ಅರಿವಾಗಿದ್ದು.

ಈ ಎಲ್ಲ ಕಾರಣಗಳಿಂದಾಗಿ ಸಿನಿಮಾ ಜಗತ್ತು ಖಂಡಿತವಾಗಿಯೂ ನನಗೆ ಸರಿಹೊಂದುವುದಿಲ್ಲ ಎಂದು ನಾನು ಅವತ್ತು ಅಂದುಕೊಂಡಿದ್ದೆ. ಅಂದಹಾಗೆ ನನ್ನ ಅಪ್ಪಾಜಿ ಕೂಡ ಆಗ ಇದೇ ಅಭಿಪ್ರಾಯವನ್ನು ಹೊಂದಿದ್ದರು. ನಾನು ಸಮಯ ಸಿಕ್ಕಾಗಲೆಲ್ಲ ಗೆಳೆಯರ ಜೊತೆ ಕ್ರಿಕೆಟ್ ಅಥವಾ ವಾಲಿಬಾಲ್ ಆಡುತ್ತಿದ್ದದ್ದು ಮತ್ತು ನಾನು ಆಟದಲ್ಲಿ ಯಾವಾಗಲೂ ಮುಂದಿರುವೆ ಎಂದು ಮೇಷ್ಟ್ರು ಹೇಳುತ್ತಿದ್ದದ್ದನ್ನು ಗಮನಿಸಿ ನಾನು ದೊಡ್ಡ ಕ್ರೀಡಾಪಟುವಾಗುತ್ತೇನೆ ಎಂಬುದು ನನ್ನ ಅಪ್ಪಾಜಿಯವರ ಅನಿಸಿಕೆಯಾಗಿತ್ತು.

ಅಪ್ಪಾಜಿ ಮುಂಬೈಗೆ ಅಥವಾ ವಿದೇಶಕ್ಕೆ ಶೂಟಿಂಗ್‌ಗೆಂದು ಹೋದಾಗಲೆಲ್ಲಾ 'ನಿನಗೆ ಏನು ತರಲಿ?' ಎಂದು ನನ್ನನ್ನು ಕೇಳುತ್ತಿದ್ದರು. ನಾನು ಪ್ರತೀ ಬಾರಿ 'ಅಪ್ಪಾಜಿ ನನಗೆ ಕ್ರಿಕೆಟ್ ಬ್ಯಾಟು ಬೇಕು' ಎಂದೇ ಹೇಳುತ್ತಿದ್ದೆ. ಅದೇ ರೀತಿ ಅಪ್ಪಾಜಿ ನನಗೆ ಕ್ರಿಕೆಟ್ ಬ್ಯಾಟ್ ತಂದುಕೊಡುತ್ತಿದ್ದರು. ಅದನ್ನು ನಾನು ನನ್ನ ಕಸಿನ್ಸ್‌ಗಳಿಗೆ ಮಾತ್ರವಲ್ಲ ನಮ್ಮ ರಸ್ತೆಯಲ್ಲಿದ್ದ ಎಲ್ಲರಿಗೂ ತೋರಿಸುತ್ತಿದ್ದೆ. ಈ ಬ್ಯಾಟನ್ನು ಮುಟ್ಟಿ ನೋಡುವುದರಲ್ಲೇ ಅವರೆಲ್ಲ ಒಂದು ರೀತಿಯ ವಿಚಿತ್ರ ಸಂತೋಷ ಮತ್ತು ಸಂಭ್ರಮವನ್ನು ಪಡೆಯುತ್ತಿದ್ದರು. ಹೀಗೆ ನನಗೆ ಸಿನಿಮಾಕ್ಕಿಂತ ಆಟದ ಮೇಲೇ ಹೆಚ್ಚು ವ್ಯಾಮೋಹವಿತ್ತು.....

(ಮುಂದುವರೆಯುವುದು)



ಅಪ್ಪಿ ಅತ್ತರು ವಿಷ್ಣು-ಬಾಬು!

'ಹಾವಿನ ದ್ವೇಷ ಹನ್ನೆರಡು ವರುಷ' ಎಂದು 'ನಾಗರಹಾವು' ಚಿತ್ರದಲ್ಲಿ ನಾಯಕ ರಾಮಾಚಾರಿಯಾಗಿ ವಿಷ್ಣುವರ್ಧನ್ ಹಾಡಿದ್ದು ನಿಮಗಿನ್ನೂ ನೆನಪಿರಬಹುದು. ಚಿತ್ರ ಜೀವನದಂತೆ ನಿಜ ಜೀವನದಲ್ಲೂ ವಿಷ್ಣು ಹನ್ನೆರಡು ವರ್ಷಗಳ ಕಾಲ ದ್ವೇಷ ಸಾಧಿಸಿ ಈಗ ಮತ್ತೆ ಸ್ನೇಹದ ಅಧ್ಯಾಯಕ್ಕೆ ನಾಂದಿ ಹಾಡಿದ್ದಾರೆ.

ಕನ್ನಡ ಚಿತ್ರರಂಗದ ಆಜನ್ಮ ವೈರಿಗಳಂತೆ ಕಳೆದ ಹನ್ನೆರಡು ವರ್ಷಗಳಿಂದ ಪರಸ್ಪರ ಭೇಟಿಯಾಗದಿರುವ, ಮಾತನಾಡದಿರುವ ನಿರ್ದೇಶಕ ರಾಜೇಂದ್ರಸಿಂಗ್ ಬಾಬು ಮತ್ತು ನಾಯಕ ನಟ ವಿಷ್ಣುವರ್ಧನ್ ಇದ್ದಕ್ಕಿದ್ದಂತೆ ತಮ್ಮ ಹಳೆಯ ವೈಮನಸ್ಸನ್ನು ಮರೆತು ಚಡ್ಡಿ ದೋಸ್ತಿಗಳ ಥರ ಪರಸ್ಪರ ಅಲಿಂಗಿಸಿ ಒಂದಾಗಿದ್ದಾರೆ.

ವಿಷ್ಣು ಮತ್ತು ಬಾಬು ಅವರನ್ನು ಹತ್ತಿರದಿಂದ ಬಲ್ಲವರು ಈ ಸುದ್ದಿಯನ್ನು ನಂಬಲಾರರು. ಏಕೆಂದರೆ ಇವರಿಬ್ಬರನ್ನೂ ಒಂದು ಮಾಡಲು ಅನೇಕರು ಪ್ರಯತ್ನಿಸಿ ವಿಫಲರಾಗಿದ್ದರು. "ಇವರಿಬ್ಬರೂ ಎಂದಿಗೂ ಒಟ್ಟಾಗಲ್ಲ, ಉದ್ಧಾರವೂ ಆಗೋದಿಲ್ಲ" ಎಂದೇ ಅನೇಕ ಹಿತೈಷಿಗಳು ತೀರ್ಮಾನಿಸಿದ್ದರು.

ಈಗ ಮೊನ್ನೆ ಮೇ 29ರಂದು ರಾತ್ರಿ 12 ಗಂಟೆಗೆ ...ಹೋಟೆಲ್ ಅಶೋಕದಲ್ಲಿ ನಡೆಯುತ್ತಿದ್ದ ರೆಬೆಲ್ ಸ್ಟಾರ್ ಅಂಬರೀಶ್‌ರವರ ಹುಟ್ಟುಹಬ್ಬದ ಸಂತೋಷ ಕೂಟದಲ್ಲಿ ಮೈಸೂರಿನ ಈ ಬಾಲ್ಯದ ಗೆಳೆಯರು ಒಂದಾದರು. ಇದು ಹೇಗೆ ಸಾಧ್ಯವಾಯಿತು ಗೊತ್ತಾ?

ವೇದಿಕೆಯ ಮೇಲಿದ್ದ ಅಂಬರೀಶ್‌ಗೆ ವಿಶ್ ಮಾಡಿ ಸಾಹಸಸಿಂಹ ವಿಷ್ಣುವರ್ಧನ್ ಕೆಳಗೆ ಬರುತ್ತಿದ್ದರು. ಅದೇ ಸಮಯದಲ್ಲಿ ಅಂಬಿಗೆ ವಿಶ್ ಮಾಡಲು ರಾಜೇಂದ್ರಸಿಂಗ್ ಬಾಬು ವೇದಿಕೆಯೇರುತ್ತಿದ್ದರು. ಈ ಹಿಂದೆ ಇವರಿಬ್ಬರೂ ಆಕಸ್ಮಿಕವಾಗಿ ಮುಖಾಮುಖಿಯಾದಾಗಲೆಲ್ಲ ಇಬ್ಬರೂ ಮುಖ ತಿರುಗಿಸಿ ವಿರುದ್ಧ ದಿಕ್ಕಿನಲ್ಲಿ ಸಾಗುತ್ತಿದ್ದದ್ದು ಮಾಮೂಲಿ ದೃಶ್ಯವಾಗಿತ್ತು. ಅಂದೂ ಇದೇ ತಮಾಷೆಯನ್ನು ನಿರೀಕ್ಷಿಸುತ್ತಿದ್ದ ಜನರಿಗೆ ಅಚ್ಚರಿ ಕಾದಿತ್ತು.

ವಿಷ್ಣು ಹತ್ತಿರ ಬರುತ್ತಿದ್ದಂತೆ ರಾಜೇಂದ್ರ ಸಿಂಗ್ ಬಾಬು ತಮ್ಮ ಕೈ ಚಾಚಿದರು. ಆ ಕ್ಷಣ ವಿಷ್ಣು ಕೂಡ ಮುಖ ತಿರುಗಿಸದೆ ಬಾಬುಗೆ ತಮ್ಮ ಕೈ ನೀಡಿದರು. ಇಬ್ಬರೂ ಹಸ್ತಲಾಘವ ಮಾಡಿದ ನಂತರ ಒಬ್ಬರನ್ನೊಬ್ಬರು ಅಪ್ಪಿಕೊಂಡರು.

"ಹನ್ನೆರಡು ವರ್ಷಗಳ ನಂತರ ವಿಷ್ಣುವನ್ನು ತಬ್ಬಿಕೊಂಡ ಆ ಕ್ಷಣ ರೋಮಾಂಚನವಾಯಿತು. ಆತನ ಸ್ಪರ್ಶ ನನ್ನಲ್ಲಿ ವಿದ್ಯುತ್ ಸಂಚಾರ ಮೂಡಿಸಿತು. ನಿಜವಾದ ಸ್ನೇಹ ಅಂದರೆ ಇದೆ. ನಮ್ಮ ನಡುವೆ ಯಾವ ಮಾತುಕತೆಯೂ ನಡೆಯಲಿಲ್ಲ. ಎಲ್ಲವೂ ನಿಮಿಷಾರ್ಧದಲ್ಲಿ ಸಿನಿಮೀಯ ರೀತಿಯಲ್ಲಿ ನಡೆದುಹೋಯಿತು" ಎಂದು ಆ ಕ್ಷಣವನ್ನು ರಾಜೇಂದ್ರ ಸಿಂಗ್ ಬಾಬು ವಿವರಿಸಿದರು.

ಇವರಿಬ್ಬರೂ ಅಪ್ಪಿಕೊಂಡಿರುವುದನ್ನು ನೋಡಿ ಅಂಬರೀಶ್ ಸಂತೋಷಗೊಂಡರಂತೆ. "ನನ್ನ ಬರ್ತ್ ಡೇ ಪಾರ್ಟಿಯಲ್ಲೇ ಇವರಿಬ್ಬರೂ ಒಂದಾಗಿರುವುದು ನನಗೆ ಬಹಳ ಸಂತೋಷವಾಗಿದೆ. ಇಷ್ಟಾಗಿಯೂ ನಾವು ಮೂವರು ಮೈಸೂರಿನವರು. ಸಿನಿಮಾ ರಂಗಕ್ಕೆ ಕಾಲಿಡುವ ಮೊದಲೇ ನಾವು ಸ್ನೇಹಿತರಾಗಿದ್ದೆವು. ಇಬ್ಬರಿಗೂ ಒಳ್ಳೆಯದಾಗಲಿ" ಎಂದು ಅಂಬಿ ಹೇಳಿ ಮುಗಿಸುತ್ತಿದ್ದಂತೆ ಅಂಬಿ-ವಿಷ್ಣು- ಬಾಬು ಮೂವರೂ ಪರಸ್ಪರ ತಬ್ಬಿಕೊಂಡು ಜೋರಾಗಿ ಅತ್ತುಬಿಟ್ಟರು!

"ನಿಮ್ಮ ನಡುವೆ ಅಂತಹ ವೈಮನಸ್ಯ ಏನಿತ್ತು?" ಎಂದು ಬಾಬುರವರನ್ನು ಕೇಳಿದರೆ "ನನ್ನ ಮತ್ತು ವಿಷ್ಣು ನಡುವೆ ಯಾವ ರೀತಿಯ ಕಲಹ ನಡೆದೇ ಇಲ್ಲ. ಆದರೆ ಬಹುಶಃ ಇಬ್ಬರಲ್ಲೂ ಸಣ್ಣ ಅಹಂ ಇತ್ತು ಅನ್ನಿಸುತ್ತೆ. ನಾನಂತೂ ಈ ಅಹಂಕಾರಕ್ಕೆ ದೊಡ್ಡ ಬೆಲೆಯನ್ನೇ ತೆತ್ತಿದ್ದೇನೆ. ಕಳೆದ ಹನ್ನೆರಡು ವರ್ಷಗಳಲ್ಲಿ ಎಷ್ಟೋ ಕತೆಗಳನ್ನು ಬರೆದು ವಿಷ್ಣು ಅಲ್ಲದೆ ಬೇರೆ ಯಾರೂ ಆ ಪಾತ್ರಕ್ಕೆ ಜೀವ ತುಂಬಲು ಸಾಧ್ಯವಿಲ್ಲ ಎಂದು ನಿರ್ಧರಿಸಿ ಅವುಗಳನ್ನು ಎತ್ತಿಟ್ಟಿದ್ದೇನೆ. ಹೀಗಾಗಿ ವಿಷ್ಣುವಿನೊಂದಿಗಿನ ವಿರಸದಿಂದಾಗಿ ನನಗೆ ತುಂಬ ದೊಡ್ಡ ನಷ್ಟವಾಗಿದೆ.. ಅದಕ್ಕಾಗಿ ನಾನು ಈಗ ಪಶ್ಚಾತ್ತಾಪ ಪಡುತ್ತಿದ್ದೇನೆ" ಎಂದು ಬಾಬು ಯಾವುದೇ ಮುಚ್ಚುಮರೆಯಿಲ್ಲದೆ ಹೇಳಿದರು.

ಅಂದಹಾಗೆ, ಇವರಿಬ್ಬರೂ ಪರಸ್ಪರ ಮುನಿಸಿಕೊಂಡು ಬೇರೆ ಆಗುವ ಮುನ್ನ ಎಂಟು ಚಿತ್ರಗಳಲ್ಲಿ ಜೊತೆಯಾಗಿ ಕೆಲಸ ಮಾಡಿದ್ದರು. ಅವುಗಳಲ್ಲಿ 'ಬಂಧನ', 'ಮುತ್ತಿನ ಹಾರ'ದಂತಹ ಸಿನಿಮಾಗಳು ಯಶಸ್ವಿ ಕೂಡ ಆಗಿದ್ದವು. "ಅದಕ್ಕೆ ಕಾರಣ ನಾನು ಪ್ರತಿ ಚಿತ್ರವನ್ನು ವಿಭಿನ್ನ ರೀತಿಯಲ್ಲಿ ಮಾಡಲು ಪ್ರಯತ್ನಿಸಿದ್ದೆ ವಿನಃ ವಿಷ್ಣು ಕಾಲ್‌ಶೀಟ್ ಸಿಕ್ಕಿದೆ ಎಂದು ಯಾವತ್ತೂ ರೀಲು ಸುತ್ತಿದವನಲ್ಲ" ಎಂದು ಬಾಬು ಫ್ಲ್ಯಾಶ್‌ಬ್ಯಾಕ್‌ಗೆ ಹೊರಳಿದರು.

"ಮೊನ್ನೆ ನೀವು ಜೊತೆಯಾದಾಗ ಇಬ್ಬರು ಮತ್ತೆ ಒಟ್ಟಿಗೆ ಸಿನಿಮಾ ಮಾಡುವುದರ ಬಗ್ಗೆ ಚರ್ಚಿಸಿದಿರಾ?" ಎಂದು ಕೇಳಿದಾಗ "ನಾನು ಅಂದು ಏನೇನು ಮಾತನಾಡಿದೆ ಎಂದು ನನಗೇ ನೆನಪಿಲ್ಲ. ಹಾಗೆಯೇ ವಿಷ್ಣುಗೂ ಕೂಡ. ಏಕೆಂದರೆ ಹನ್ನೆರಡು ವರ್ಷಗಳ ನಂತರ ಮಾತನಾಡಿದ ನಾವು ನಮ್ಮ ಎಲ್ಲ ಭಾವನೆಗಳನ್ನೂ ಒಮ್ಮೆಲೇ ಹೊರಹಾಕಲು ಪ್ರಯತ್ನಿಸಿದೆವು. ನನ್ನ ಮನಸ್ಸಿನಲ್ಲಿ ವಿಷ್ಣುವಿಗಾಗಿ ಒಂದು ಕಥೆ ಇರುವುದು ನಿಜ. ಈ ಕಥೆ ನಾಲ್ಕೈದು ವರ್ಷದ ಹಿಂದೆ ನನ್ನ ಮನಸ್ಸಿನಲ್ಲಿ ಮೂಡಿಬಂದಿತ್ತು. ಆದರೆ ಮೊನ್ನೆ ಮೊನ್ನೆ ಇದೇ ಕತೆಯನ್ನು ರಾಷ್ಟ್ರಪತಿ ಅಬ್ದುಲ್ ಕಲಾಂ ಯಾವುದೋ ಶಾಲೆಯಲ್ಲಿ ಮಕ್ಕಳಿಗೆ ಹೇಳಿದ್ದಾರೆ. ಹೀಗಾಗಿ ಈಗ ಈ ಕಥೆಯನ್ನು ಸಿನಿಮಾ ಮಾಡಲು ನಾನು ಅವರ ಅನುಮತಿ ಕೋರಿ ಪತ್ರ ಬರೆದಿದ್ದೇನೆ. ಅವರು ನನ್ನ ಪತ್ರಕ್ಕೆ ಸ್ಪಂದಿಸಿ ಅನುಮತಿ ನೀಡಿದರೆ ಖಂಡಿತವಾಗಿಯೂ ವಿಷ್ಣುವನ್ನು ಹಾಕಿಕೊಂಡು ಆ ಸಿನಿಮಾವನ್ನು ಮಾಡಬೇಕೆಂಬ ಆಸೆ ನನ್ನ ಹೃದಯದಲ್ಲಿದೆ" ಎಂದು ಬಾಬು ವಿವರಿಸಿದರು.

-ಸದಾಶಿವ ಶೆಣೈ

ಕವನದ ಶಬ್ದಗಳಿಗೆ ಭೂಮಿಯ ಮೇಲೆ ನಡೆಯುವ ಅರ್ಥ ಮತ್ತು ಗಾಳಿಯಲ್ಲಿ ಮೇಲೇರುವ ಸಂಗೀತವಿದೆ -ಬಾಗೂರ್

R.B.P. LANKESH, Kannada Weekly Price Rs. 10/- 14-6-2006 RNI No. KARKAN2005/14648 Regd.No.KA/BG(S)/2036/2005-




ರಾಧಿಕಾ ಬಿಚ್ಚಮ್ಮ ರಕ್ಷಿತಾ ಗೌರಮ್ಮ

ರಾಧಿಕಾ ಮಾಡಿದ್ದನ್ನು ರಕ್ಷಿತಾ ಮಾಡಲು ಸಾಧ್ಯವೇ? ಈ ಪ್ರಶ್ನೆ ಯಾಕೆಂದರೆ, 'ತವರಿಗೆ ಬಾ ತಂಗಿ' ಮತ್ತು 'ಅಣ್ಣ-ತಂಗಿ' ಚಿತ್ರಗಳಲ್ಲಿ ಕರಾವಳಿ ಕನ್ಯೆ ರಾಧಿಕಾ ತಂಗಿಯಾಗಿ ನಟಿಸಿ ಪ್ರೇಕ್ಷಕರ ಹೃದಯ ಗೆದ್ದಿದ್ದಳು. ಈ ಎರಡೂ ಚಿತ್ರಗಳಲ್ಲಿ ಆಕೆ ಶಿವರಾಜ್‌ಕುಮಾರ್‌ಗೆ ತಂಗಿಯಾಗಿ ನಟಿಸಿದ್ದಳು. ಈ ಮಧ್ಯೆ ಅದೆಷ್ಟೋ ಚಿತ್ರಗಳಲ್ಲಿ ಆಕೆ ಗ್ಲಾಮರ್ ಹೆಸರಲ್ಲಿ ಮೈಮೇಲಿರುವ ಬಟ್ಟೆಯನ್ನು ಬಿಸಾಕಿದರೂ ಆ ಚಿತ್ರಗಳು ಹಿಟ್ ಆಗಿರಲಿಲ್ಲ. ಹೀಗಾಗಿ ರಾಧಿಕಾ ನಾಯಕಿಗಿಂತ ತಂಗಿಯಾಗಿ ಹೆಚ್ಚು ಜನಪ್ರಿಯತೆ ಪಡೆದಳು.

ಈಗ ರಕ್ಷಿತಾ 'ನೀನೆಲ್ಲೋ ನಾನಲ್ಲೇ' ಚಿತ್ರದಲ್ಲಿ ವಿಷ್ಣುವರ್ಧನ್ ತಂಗಿಯಾಗಿ ನಟಿಸಿದ್ದಾಳೆ. ಹಾಗೆ ನೋಡಿದರೆ ರಕ್ಷಿತಾ ಈ ತನಕ ಬೋಲ್ಡ್ ಆಗಿ ಗ್ಲಾಮರ್ ಪಾತ್ರಗಳಲ್ಲಿ ಕಾಣಿಸಿಕೊಂಡು ಕ್ರೇಜಿ ಕ್ವೀನ್ ಎಂಬ ಬಿರುದು ಪಡೆದವಳು. ಇದೇ ಮೊದಲ ಬಾರಿಗೆ ಈಕೆ ತಂಗಿಯಾಗಿ ಮೈತುಂಬ ಬಟ್ಟೆ ತೊಟ್ಟು ಕಾಣಿಸಿಕೊಂಡಿದ್ದಾಳೆ. 'ಗೌರಮ್ಮ'ಳಾಗಿದ್ದ ರಾಧಿಕಾ 'ಬಿಚ್ಚಮ್ಮ' ಆಗಲು ಹೋಗಿ ತೋಪಾಗಿದ್ದಳು. ಈಗ 'ಬಿಚ್ಚಮ್ಮ'ಳಿಂದ 'ಗೌರಮ್ಮ'ಳಾಗುವ ಯತ್ನ ರಕ್ಷಿತಾ ಮಾಡುತ್ತಿದ್ದಾಳೆ. ಏನಾಗುತ್ತೋ ನೋಡೋಣ.



'ತನನಂ, ತನನಂ' ಚಿತ್ರದಲ್ಲಿ ಶ್ಯಾಮ್ ಮತ್ತು ರಕ್ಷಿತಾ



ರಾಕ್‌ಲೈನ್ ಈಗ ಕಬಡ್ಡಿ ಬಾಬು?

'ನಾಗರಹಾವು' ಚಿತ್ರ ಬಿಡುಗಡೆಯಾಗುವ ಮೊದಲು ನಿರ್ಮಾಪಕ ರಾಕ್‌ಲೈನ್ ವೆಂಕಟೇಶ್ ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ತಾರೆಗಳ ಕ್ರಿಕೆಟ್ ಪಂದ್ಯ ಏರ್ಪಡಿಸಿದ್ದರು. ಆ ಚಿತ್ರ ಹಿಟ್ ಆಗಲಿಲ್ಲ ಎಂಬುದು ಬೇರೆ ವಿಷಯ.

ಈಗ ರಾಕ್‌ಲೈನ್ ಕಬಡ್ಡಿ ಪಂದ್ಯ ಏರ್ಪಡಿಸಲು ಮುಂದಾಗಿದ್ದಾರೆ. ವ್ಯತ್ಯಾಸವೇನೆಂದರೆ ಅವರ ನಿರ್ಮಾಣದ 'ಅಜಯ್' ಚಿತ್ರ 50 ದಿನಗಳು ತಲುಪಿದ ನಂತರ ಈ ಕಬಡ್ಡಿ ಟೂರ್ನಮೆಂಟ್ ಹಮ್ಮಿಕೊಳ್ಳಲಿದ್ದಾರೆ. 'ಅಜಯ್' ಚಿತ್ರದಲ್ಲಿ ನಾಯಕ ಪುನೀತ್ ರಾಜ್‌ಕುಮಾರ್ ಕಬಡ್ಡಿ ಆಟಗಾರನಾಗಿ ಕಾಣಿಸಿಕೊಂಡಿರುವುದರಿಂದ ಈ ಪಂದ್ಯ ಏರ್ಪಡಿಸಲಿದ್ದಾರಂತೆ.

ಅಂತೂ ಸಿನಿಮಾದ ಜೊತೆ ಕ್ರೀಡೆಯನ್ನು ಬೆರೆಸುವ ರಾಕ್‌ಲೈನ್‌ರವರ ಹುಚ್ಚು ಸಾಹಸ ಇನ್ನೂ ನಡೆಯುತ್ತಲೇ ಇದೆ.

ಕನ್ನಡದ ಆಸ್ತಿಯಲ್ಲ ಈ 'ಮಾಸ್ತಿ'!

ಕನ್ನಡ ಚಿತ್ರರಂಗ ಉದ್ಧಾರವಾಗುತ್ತಿದೆಯೋ ಅಥವಾ ಪಾತಾಳಕ್ಕಿಳಿಯುತ್ತಿದೆಯೋ ಎಂಬುದನ್ನು ಈ ಟಿಪ್ಪಣಿ ಓದಿ ನೀವೇ ನಿರ್ಧರಿಸಿ.


ಸದ್ಯದಲ್ಲೇ ರಾಮು ನಿರ್ಮಾಣದ 'ಮಾಸ್ತಿ' ಎಂಬ ಚಿತ್ರ ಸೆಟ್ಟೇರಲಿದೆ. ಉಪೇಂದ್ರ ಈ ಚಿತ್ರದ ನಾಯಕ. ಶಿವಮಣಿ ಇದರ ನಿರ್ದೇಶಕ.

ಈ ಸುದ್ದಿಯನ್ನು ಓದಿ ನಮ್ಮ ಕನ್ನಡ ಚಿತ್ರರಂಗ ಸಾಹಿತಿ ಮಾಸ್ತಿಯವರನ್ನು ನೆನಪಿಸಿಕೊಳ್ಳುತ್ತಿದೆಯಲ್ಲಾ ಎಂದು ನೀವು ಸಂತೋಷ ಪಡಬಹುದು. ಆದರೆ ರಾಮು ಅವರ 'ಮಾಸ್ತಿ'ಗೂ ಕನ್ನಡ ಸಾಹಿತ್ಯ ಲೋಕದ ಆಸ್ತಿಯಾಗಿದ್ದ 'ಮಾಸ್ತಿ'ಗೂ ಒಂದಿಷ್ಟೂ ಸಂಬಂಧವಿಲ್ಲ. ರಾಮು ಚಿತ್ರದ 'ಮಾಸ್ತಿ'ಯ ಕಥಾನಾಯಕ ರೌಡಿಯಂತೆ!




ಕರ್ನಾಟಕದ ಮಟ್ಟಿಗೆ 'ಮಾಸ್ತಿ' ಎಂದರೆ ತಕ್ಷಣ ನೆನಪಾಗುವುದು ಜ್ಞಾನಪೀಠ ಪ್ರಶಸ್ತಿ ವಿಜೇತ ಸಾಹಿತಿ ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ವಿನಃ ಈ ತುಂಡು ರೌಡಿಯಲ್ಲ. ಆದ್ದರಿಂದ ಮಾಸ್ತಿ ಹೆಸರಿಟ್ಟು ರೌಡಿಸಂ ಸಿನಿಮಾ ತೆಗೆಯುವುದು ಒಂದು ರೀತಿಯಲ್ಲಿ ಕನ್ನಡ ಸಾಹಿತ್ಯ ಲೋಕಕ್ಕೆ ಮಾಡುವ ಅವಮಾನವೇ ಸರಿ.

ಇಂತಹ ಚಿತ್ರಕ್ಕೆ 'ಮಾಸ್ತಿ' ಎಂಬ ಹೆಸರಿಡಲು ಫಿಲಂ ಚೇಂಬರ್ ಹೇಗೆ ಒಪ್ಪಿಗೆ ನೀಡಿತು ಎಂಬುದೇ ಆಶ್ಚರ್ಯ. ಹಿಂದೊಮ್ಮೆ ಜಗ್ಗೇಶ್ ನಟಿಸಿದ ಚಿತ್ರಕ್ಕೆ 'ಸದ್ದಾಂ' ಎಂಬ ಹೆಸರನ್ನು ನೀಡಲು ಸಾಧ್ಯವಿಲ್ಲವೆಂದು ಇದೇ ಚೇಂಬರ್ ತಕರಾರು ಮಾಡಿತ್ತು. 'ಸದ್ದಾಂ' ಚಿತ್ರಕ್ಕೂ ಇರಾಕಿನ ಅಂದಿನ ಅಧ್ಯಕ್ಷ ಸದ್ದಾಂಗೂ ಯಾವುದೇ ಸಂಬಂಧವಿಲ್ಲವೆಂದು ಹೇಳಿದರೂ ಚೇಂಬರ್ ಹಠ ಮಾಡಿ ಚಿತ್ರದ ಹೆಸರನ್ನು ಬದಲಾಯಿಸುವಲ್ಲಿ ಯಶಸ್ವಿಯಾಗಿತ್ತು. ಆದರೆ ದೂರದ, ನಮಗೆ ಸಂಬಂಧವಿಲ್ಲದ ಸದ್ದಾಂ ಹುಸೇನನ ಮೇಲೆ ತೋರಿಸಿದ್ದ ಪ್ರೀತಿಯನ್ನು ನಮ್ಮವರೇ ಆದ ಮಾಸ್ತಿಯವರ ಬಗ್ಗೆ ಯಾಕೆ ಗಂಗರಾಜು ಮತ್ತು ಗ್ಯಾಂಗ್ ತೋರಿಸುತ್ತಿಲ್ಲ ಎಂಬುದೇ ಆಶ್ಚರ್ಯಕರ.



ಕನ್ನಡ ನಾಡು, ನುಡಿ, ಸಂಸ್ಕೃತಿ ಬಗ್ಗೆ ಸದಾ ಕಾಳಜಿ ವಹಿಸುತ್ತೇವೆ, ಸೇವೆ ಮಾಡುತ್ತೇವೆ ಎಂದು ಸಿನಿಮಾದವರು ಎಲ್ಲ ಸಮಾರಂಭಗಳಲ್ಲಿ ಬುರುಡೆ ಬಡೋದು ಮಾಮೂಲು. ಅಂಥವರೇ ಈಗ ಮಾಸ್ತಿ ಹೆಸರಲ್ಲಿ ರೌಡಿಸಂ ಸಿನಿಮಾ ತೆಗೆಯುವುತ್ತಿರುವುದೂ ಕನ್ನಡದ ಸೇವೆಯೇ? ಎಂದು ಕೇಳುವಂತಾಗಿದೆ!

ಸಾಹಿತಿ ಮಾಸ್ತಿಯವರ ಜೀವನಗಾಥೆ ಕುರಿ... ಸಿನಿಮಾ ತೆಗೆಯಬೇಕು ಎಂಬುದು ನಮ್ಮ ...ವಾದವಲ್ಲ. ಆದರೆ ಮುಂದಿನ ಜನಾಂಗಕ್ಕೆ 'ಮಾ... ಎಂದಾಕ್ಷಣ ಈ ಸಿನಿಮಾದಲ್ಲಿನ ರೌಡಿ ನೆನಪಿಗೆ ಬರುವಂತಾಗಬಾರದು ಎಂಬುದಷ್ಟೇ ನಮ್ಮ ಆಶಯ. ಒಂದು ವೇಳೆ ಈ ಚಿತ್ರಕ್ಕೆ 'ಮಾಸ್ತಿ' ಹೆಸರನ್ನೇ ಮುಂದುವರಿಸಿದಲ್ಲಿ ಭವಿಷ್ಯದ ದಿನಗ... ಕುವೆಂಪು, ಕಾರಂತ, ಬೇಂದ್ರೆ, ಲಂಕೇ... ಗೋಕಾಕ್ ಇವರ ಹೆಸರುಗಳಲ್ಲಿ... ರೌಡಿಸಂನ ಚಿತ್ರಗಳು ಸಾಲುಸಾಲಾಗಿ ಕನ್ನಡದ... ಬಂದು ನಿಂತರೆ ಆಶ್ಚರ್ಯವೇನೂ ಇಲ್ಲ. ಕನ್ನಡ ಏಕೀಕರಣದ ಈ... ಸುವರ್ಣ ಸಂಭ್ರಮದ... ಸಂದರ್ಭದಲ್ಲಾದರೂ ನ... ಸಾಹಿತಿಗಳ ಹೆಸರಿಗೆ ಮಸಿ ಬಳಿಯುದಂತಾಗಲಿ.



ಪರಿಸ್ಥಿತಿಯನ್ನು ಅರಿತು ಚೇಂಬರ್ ಮ... ರಾಮು ಕೂಡಲೇ ಕಾರ್ಯೋನ್ಮುಖರಾಗಿ ಕನ್ನ... ಆಸ್ತಿ 'ಮಾಸ್ತಿ'ಯ ಹೆಸರನ್ನು ಉಳಿಸುತ್ತಾರೆ ಎಂ... ನಂಬೋಣ.

PRINTER, PUBLISHER, PROPRIETOR AND EDITOR : GAURI LANKESH, No. 9, 1st Floor, E.A.T.Street, Basavanagudi, Bangalore -4, Phone : 26676... Fax : 26620026, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-